# ಕೊಡಗು ಸಂಗಾತಿ

ಏಪ್ರಿಲ್ 1 ರಿಂದ 15, 2000

ಪಾಕ್ಷಿಕ ಪತ್ರಿಕೆ

(ಸುಗ್ಗಿ 18 ರಿಂದ 30 , 2000
ಪಗ್ಗು 1 - 2,)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

KA/SK/MYS-88 ಸಂಪುಟ : 4 ಸಂಚಿಕೆ : 7 ಪುಟಗಳು : 24 ಬೆಲೆ ರೂ. : 6-00




ಕೊಡಗು ಸಂಗಾತಿಯು ನಾಲ್ಕನೇ ವರ್ಷಕ್ಕೆ ಪಾದಾರ್ಪಣೆಗೈಯಲು ಸಹಕರಿಸಿದ ಸರ್ವ ಓದುಗರಿಗೆ, ಜಾಹಿರಾತುದಾರರಿಗೆ, ಚಂದದಾರರಿಗೆ ಸಂಗಾತಿಯ ನಮನಗಳು. ಹಾಗೂ

*ಯುಗಾದಿಯ ಹಾರ್ದಿಕ ಶುಭಾಶಯಗಳು*

UDAYAPRESSSOMWARPETUDAYAPRESSSOMWARPETUDAYAPRESSSOMWARPETUDAYAPRESS

|| ಸ್ರೀ ಎಂಕಟ್ರಮ್ಣ ದೇವ್ರ ಪಾದ್ಕೆ ||

ॐ

## ನಮ್ಮೆಲ್ಲಾ ಕುಲಬಾಂಧವ್ಕೆ ಮತ್ತೆ ಸ್ನೇಹಿತವ್ಕೆ ಹೊಸ್ವರ್ಸ ಯುಗಾದಿ ಸುಭಾಸಯ ಉಟ್ಟು

ತಾರೀಕ್ 12-3-2000 ಐತ್ವಾರ ನಮ್ಮ ಮಕ್ಳ ಮದ್ವೆ ಮಡ್ಕೇರಿ ಮ್ಯಾಲ್ನ ಗೌಡಸಮಾಜ್ಲಿ ನಡ್ಸ್‌ಕಾಕ್ನ ನೀವೆಲ್ಲ ಬಂದ್ ಅವ್ರ ತಲ್ಗೆ ಅಕ್ಕಿಕಾಳ್ ಹಾಕಿ ಆಸೀರ್ವಾದ ಮಾಡ್ದೆರಿ. ನಮ್ಗೆಲ್ಲಾ ತುಂಬಾ ಕುಸಿ ಆತ್. ಹಂಗೆನೆ ನಿಮ್ಗೆ ಕೂಡಾ ಸ್ರೀ ಎಂಕಟ್ರಮ್ಣ ಮತ್ತೆ ಶ್ರೀ ಕಾವೇರಿ ಮಾತೆ ಸಹ ತಂಬಾ ಉಸಾರ್, ಆಯಿಸ, ಸಂಪ್ತ್ ಎಲ್ಲಾ ಕೊಟ್ ಕಾಪಾಡಲೀತೇಳಿ ನಾವ್ ಕೇಳ್ಕಂಡ್ವೆ.

**ಹ್ಯೆದ:**
**ಕುದುಕುಳಿ ಗಜೇಂದ್ರ**
**(ಗಿರೀಶ)**



**ಗೂಡೆ:**
**ಬಿದ್ರುಪಣೆ ತೀರ್ಥ**
**(ಹ್ಯಾಪಿ)**

*ನೀವೆಲ್ಲಾ ಬಂದ್ ಆಸೀರ್ವಾದ ಮಾಡ್ದಕ್ಕೆ ಗ್ಯಾನಮಾಡಿಕಂಬ್ದು:*

**ಕುದ್ಕುಳಿ**
**ಶ್ರೀಮತಿ ಬೋಜಮ್ಮ ಮತ್ತೆ ಕೆ. ಟಿ. ರಾಂಪ**
ಉದಯ ಪ್ರೆಸ್
ಬಸ್ಟಾಂಡ್, ಸೋಮವಾರ್ಪೇಟೆ - 571 236
☎: ಅಂಗ್ಡಿ : 82074 ಮತ್ತೆ ಮನೆ : 82274, ಎಸ್ಟೀಡಿ : 08276

**ಬಿದ್ರ್‌ಪ್ಣೆ**
**ಶ್ರೀಮತಿ ರುಕ್ಮಿಣಿ ಮತ್ತೆ ಬಿದ್ದಪ್ಪ**
ಕಾಪಿ ಮತ್ತೆ ಮೆಣ್ಸ್ ಬೆಳ್ಯವು
ಕಟ್ಟೆಮಾಡ್ ಗ್ರಾಮ, ಮಡ್ಕೇರಿ - 571 201
☎: 31604 ಎಸ್ಟೀಡಿ : 08276

ಪ್ರಕಟ್ನೆ : ಉದಯ ಪ್ರಸ್ಸ್ ಮತ್ತೆ ಆಫ್‌ಸೆಟ್ ಪ್ರಿಂಟ್, ಬಸ್ಟೆಂಡ್, ಸೋಮವಾರ್ಪೇಟೆ - 571 236.
ಮತ್ತೆ ಹಂಗೆ ನಮ್ಮದ್ ಉದಯ ಲಾಡ್ಜ್ ಉಟ್ಟು, ಜೆರಾಕ್ಸ್ ಉಟ್ಟು, ಸ್ಟೇಸ್ನರಿ ಸ್ಟೇರಿ ಇನ್ನ್ ತುಂಬಾ ವಸ್ತುಗ ಉಟ್ಟು
ಇಲ್ಲಿಗೆ ಕಂಡಿತಾ ನೀವೆಲ್ಲಾ ಬರೋಕು.

UDAYAPRESSSOMWARPETUDAYAPRESSSOMWARPETUDAYAPRESSSOMWARPETUDAYAPRESS

# ಒಳನೋಟ

2000, ಏಪ್ರಿಲ್ 1-15 ರ ತನಕ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಪುರಾತನ ವಸ್ತುಗಳ, ಭವ್ಯ ಕಟ್ಟಡಗಳ ಸಂರಕ್ಷಣೆ | - ಸಂಪಾದಕೀಯ | 02 |
| ಯುಗಾದಿ ಆಚರಣೆಯ ನೀತಿ- ನಿಯಮಗಳು | - ಗುತ್ತಿ ಮುಂಡನ ಗಿರೀಶ್‌ಕುಮಾರ್ | 02 |
| ಗೌಡರ ಮದುವೆಗಳಲ್ಲಿ ಅಕ್ಕಿ ಮುಹೂರ್ತ ಮತ್ತು ಎಣ್ಣೆ ಅರಿಶಿನ ಶಾಸ್ತ್ರಗಳ ವೀಳ್ಯದ ಬಳಕೆಯ ಔಚಿತ್ಯ | - ಪ್ರೊ. ಪೂಜಾರಿ ಮೊಣ್ಣಪ್ಪ | 03 |
| ವ್ಯಕ್ತಿ ಪರಿಚಯ : ಪೊಕ್ಕುಲಂಡ್ರ ಕೆ. ಸುಬ್ಬಯ್ಯನವರು | - ಪಟ್ಟಡ ಪ್ರಭಾಕರ | 09 |
| ಕೊಡಗು ಸಂಗಾತಿಯು ತನ್ನ ನಾಲ್ಕನೆ ವರ್ಷಕ್ಕೆ ಪಾದಾರ್ಪಣೆ ಗಯ್ಯುತ್ತಿದೆ. ಸಮಸ್ತ ಓದುಗರಿಗೆ ಸಂಗಾತಿಯ ಶ್ರೇಷ್ಠ ನಮನಗಳು ಅರೆಭಾಷೆ ಗೌಡರ ಏಕೈಕ ಮಾಧ್ಯಮ ಕೊಡಗು ಸಂಗಾತಿ. | - ಸಂಪಾದಕಿ | 10 |
| ಸಂಗಾತಿ ರಾಶಿ ಫಲ | - ಗಿರೀಶ್ ಕುಮಾರ್ | 12 |
| ಸರ್ಪಗಂಧ - ಧಾರಾವಾಹಿ - 26 | - ಕೌಂಡಿನ್ಯ | 13 |
| ಕೊಡಗಿನ ಅತ್ಯುನ್ನತ ಶಿಖರ ತಡಿಯಂಡಮೋಳ್ | - ಮೂಡಗದ್ದೆ ಕೃಪಾ ಈರಪ್ಪ | 14 |
| ಆನೆಗೆ ಏಕೆ ಸೊಂಡಿಲಿದೆ? | - ಪಿ. ಪಿ. ನೀಶಾ | 15 |
| ಕೊಡಗಿನ ಗ್ರಾಮಗಳೆಷ್ಟು? ಗೊತ್ತಿದೆಯೇ? | - ಗೋವಿಂದಮ್ಮನ ಪ್ರವೀಣಕುಮಾರ | 16 |
| ಪತ್ರ ವಿಭಾಗ | - | 19 |
| **ಅರೆಭಾಷಿಕ ವಿಭಾಗ** | | |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 6 | - ಶಂಕರನ ಬಸಪ್ಪ | 04 |
| ನನ್ನ ಮಗ್ಳ್ | - ಕುಂಜಿನಲ ಆರ್. ರಾಜ | 20 |



| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ,** 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. **ಫೋನ್ : 0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | **ಬೈತಡ್ಕ ಜಾನಕಿ ಬೆಳ್ಯಪ್ಪ**,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, **ಫೋನ್ : 08272/28047** |
| ಸಂಗಾತಿ ಚಿಹ್ನೆ ಮತ್ತು ಅರೆಭಾಷೆ ಕ್ಯಾಸೆಟ್ ಲಭ್ಯ | **ಪಾಂಡ್ಯನ್ ಕ್ಯಾಸೆಟ್ ಅಂಗಡಿ,** ಖಾಸಗಿ ಬಸ್ ನಿಲ್ದಾಣ, ಮಡಿಕೇರಿ **ಫೋನ್** : 08272/29620 |
| ಕುಶಾಲ ನಗರ | **ಕುಂಭಗೌಡನ ಸೋಮಣ್ಣ**, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 **ಫೋನ್** : 08276/73370 |
| ಬೆಂಗಳೂರು ಮಹಾನಗರ | **ಅಮ್ಮಾಜೀರ ಪೊನ್ನಪ್ಪ**, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, **ಫೋನ್** :080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -**75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಪುರಾತನ ವಸ್ತುಗಳ, ಭವ್ಯ ಕಟ್ಟಡಗಳ ಸಂರಕ್ಷಣೆ

ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಇಲಾಖೆಯು ಸಾರ್ವಜನಿಕ ಸ್ಥಳಗಳಲ್ಲಿರುವ ರಾಷ್ಟ್ರೀಯ ರಾಜ್ಯದ ಹಾಗೂ ಜಿಲ್ಲೆಗಳ ಚಾರಿತ್ರಿಕ ಕಟ್ಟಡಗಳನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಿ ಅವುಗಳ ಸಂರಕ್ಷಣೆಗಾಗಿ ಸ್ವಲ್ಪ ಪ್ರಯತ್ನಿಸುತ್ತಿವೆ. ಆದರೆ ಈ ಕೆಲಸವನ್ನು ಒಬ್ಬ ಖಾಸಗಿ ವ್ಯಕ್ತಿಯ ಕಟ್ಟಡದ ಯಾ ಜೀವಿಸಿದ ವಿಷಯದಲ್ಲಿ ಯಾರೂ ಮುತುವರ್ಜಿ ವಹಿಸಿ ಅವುಗಳನ್ನು ಕಾಪಾಡುವ ವ್ಯವಸ್ಥೆ ಆಗಿಲ್ಲ. ಇದಕ್ಕೆಲ್ಲಾ ಸರ್ಕಾರ ಮುಂದು ಬರುವುದಕ್ಕೆ ಸಾಧ್ಯವಿಲ್ಲ ಅಥವಾ ಅಪಾರ ಹಣವನ್ನು ಖರ್ಚು ಮಾಡಲು ಸಾಧ್ಯವಿಲ್ಲ. ಆದರೆ ಆ ಕೆಲಸವನ್ನು ಸಾರ್ವಜನಿಕರು ಕೈಗೆತ್ತಿಕೊಂಡು ಅದರ ಜೀರ್ಣೋದ್ಧಾರ ಮಾಡಬೇಕು. ಉದಾಹರಣೆಗೆ ಒಂದು ಕುಟುಂಬದ ಐನ್ ಮನೆ, ಊರಿನ ಅಂಬಾಲ, ದೇವಸ್ಥಾನ, ಆ ಊರಿನಲ್ಲಿ ನಡೆದ ಐತಿಹಾಸಿಕ ಘಟನೆಯ ಸ್ಥಳ, ಊರಿನಲ್ಲಿ ಯಾ ಕುಟುಂಬದಲ್ಲಿ ಒಬ್ಬ ವ್ಯಕ್ತಿಯ ಸಾಹಸ ಕೆಲಸ ಮಾಡಿ ಸಿಕ್ಕಿದ ಪ್ರಶಸ್ತಿಗಳು, ಕತ್ತಿ, ಕೋವಿ, ತಾಮ್ರದ ಯಾ ತಾಳೆ ಓಲೆಯ ಯಾ ಕಾಗದದ ನಿರೂಪಗಳು ಇವುಗಳೆಲ್ಲ ಮೂಲೆ ಗುಂಪಾಗಿ ಯಾರಿಗೂ ಗೊತ್ತಿಲ್ಲದೆ ಇವೆ. ಇವುಗಳನ್ನು ಹೊರತೆಗೆದು ಅವುಗಳನ್ನು ಕಾಪಾಡುವ ವ್ಯವಸ್ಥೆ ಮಾಡಬೇಕು. ಈ ವಸ್ತುಗಳು ಎಲ್ಲರಿಗೂ ಪರಿಚಯವಿರುವಂತೆ ಮಾಡಬೇಕು. ಅದೇ ರೀತಿ ಒಂದು ಊರಿನ ಮಹತ್ತರವಾದ ಕೆಲಸ ಮಾಡಿದ ವ್ಯಕ್ತಿಯು ತನ್ನ ಜೀವನವನ್ನು ಕಳೆದ ಮನೆಯನ್ನು ಕಾಪಾಡುವ ಕೆಲಸವನ್ನು ಆಯಾಯ ಕುಟುಂಬದವರು ಯಾ ಗ್ರಾಮಸ್ಥರು ಯಾ ಸಮಾಜದವರು ಮಾಡಬೇಕು. ಈ ರೀತಿ ಮಾಡಿದರೆ ನಮ್ಮ ಹಿಂದಿನ ಅಮೂಲ್ಯವಾದ ಕಟ್ಟಡ, ವಸ್ತು ಯಾ ಗ್ರಂಥಗಳನ್ನು ಸಂರಕ್ಷಿಸುವಂತಾಗುತ್ತದೆಂದು ಸಂಗಾತಿಯ ಬಯಕೆಯಾಗಿದೆ.

## ಯುಗಾದಿ ಆಚರಣೆಯ ನೀತಿ- ನಿಯಮಗಳು

ವಿಕ್ರಮ ಸಂವತ್ಸರದ 2000 ಇಸವಿಯಲ್ಲಿ ಯುಗಾದಿಯು ಏಪ್ರಲ್ 5 ರಂದು ಬುಧವಾರ ರೇವತಿ ನಕ್ಷತ್ರದಲ್ಲಿ 38¾ ಗಳಿಗೆ ಯುಗಾದಿಯ ಫಲವಿರುತ್ತದೆ. ಯುಗಾದಿಯನ್ನು ಹಿಂದೂಗಳು ಹೊಸ ವರ್ಷದ ಸಂಕೇತವಾಗಿ ಆಚರಿಸುತ್ತಾರೆ. ಈ ಹಬ್ಬದ ಕ್ರಮಬದ್ಧವಾದ ಆಚರಣೆಯಿಂದ ರೋಗರುಜಿನಗಳು ಸ್ವಲ್ಪ ಮಟ್ಟಿಗೆ ಪರಿಹಾರವಾಗುತ್ತದೆ. ಮನುಷ್ಯನಾಗಿ ಜನ್ಮವೆತ್ತಿದವನಿಗೆ ಜೀವನದಲ್ಲಿ ಅನೇಕ ಕಷ್ಟ-ಸುಖಗಳು ಎದುರಾಗುವುದು ಸಹಜ. ಬೇವು-ಬೆಲ್ಲಕ್ಕೆ ಇಲ್ಲಿ ಹೆಚ್ಚಿನ ಮಹತ್ವವಿದೆ. ಬೇವು=ಕಷ್ಟ(ಕಹಿ) ಬೆಲ್ಲ= ಸುಖ(ಸಿಹಿ) ಅಂದರೆ ಬೇವು ಕಹಿಯಾಗಿರುವುದು. ಹಾಗೆಯೇ ಕಷ್ಟ ಬಂದಾಗ ಪ್ರತಿಯೊಬ್ಬರ ಪಾಲಿಗೆ ಅದು ಕಹಿಯಾಗಿಯೇ ಇರುವುದು. ಬೆಲ್ಲದ ರುಚಿ ಸಿಹಿಯಾಗಿರುವುದು. ಸುಖ ಬಂದಾಗ ಅದನ್ನು ಎಲ್ಲರೂ ಸಿಹಿಯಾಗಿಯೇ ಸಂತೋಷದಿಂದ ಸ್ವೀಕರಿಸುವರು. ಅದನ್ನು ಬಿಟ್ಟು. ಕಷ್ಟ ಬಂತೆಂದು ಕುಗ್ಗದೆ. ಸುಖ ಬಂತೆಂದು ಹಿಗ್ಗದೆ. ಎರಡನ್ನೂ ಸಮಪಾಲಾಗಿ ಸ್ವೀಕರಿಸಬೇಕೆಂದೇ ಪರೋಕ್ಷವಾಗಿ ಬೇವು ಬೆಲ್ಲವನ್ನು ಸೇವಿಸುವುದನ್ನು ಹಿರಿಯರು ತೋರಿಸಿಕೊಟ್ಟಿದ್ದಾರೆ. ಕಹಿಯಾದ ಬೇವಿನ ಜೊತೆ ಸಿಹಿಯಾದ ಬೆಲ್ಲವನ್ನು ಸೇರಿಸಿ ಸೇವಿಸಿದಾಗ ಅದೆಷ್ಟು ರುಚಿ! ಕಷ್ಟ-ಸುಖ ಬೇವು-ಬೆಲ್ಲ ಒಂದು ನಾಣ್ಯದ ಎರಡು ಮುಖವಿದ್ದಂತೆ. ಬೇವು-ಬೆಲ್ಲವನ್ನು ಹೊಸ ವರ್ಷದ ದಿವಸ ಸೂರ್ಯೋದಯಕ್ಕೆ ಮೊದಲು ಎದ್ದು ಮನೆ ಅಂಗಳವನ್ನು ಸಾರಿಸಿ. ಸ್ನಾನಮಾಡಿ, ಮಡಿವಸ್ತ್ರವನ್ನುಟ್ಟು, ಶುದ್ಧ ಮನಸ್ಸಿನಿಂದ ಕುಲದೇರಿಗೂ, ಇಷ್ಟದೇರಿಗೂ, ಗ್ರಾಮದೇವತೆ, ಮನೆಯ ಆರಾಧ್ಯದೈವಗಳಿಗೂ ಪೂಜೆಮಾಡಿ ಅರ್ಪಿಸಿ, ನಂತರ ಗುರುಹಿರಿಯರಿಗೆ ನಮಸ್ಕಾರಮಾಡಿ ನಂತರ ಸಂಸಾರ ಸಮೇತ ಪದ್ಮಾಸನ ಹಾಕಿ ನೆಲದಮೇಲೆ ಪೂರ್ವಾಭಿಮುಖವಾಗಿ ಕುಳಿತು ಸೇವಿಸುವುದರಿಂದ ಎಂತಹ ಕಷ್ಟ ಬಂದರೂ ಸಹಿಸಲು ಸಾಧ್ಯ, ಎಂಬ ನಂಬಿಕೆ ಇದೆ. ನಂತರ ಅದೇ ರೀತಿ ಕುಳಿತು ಮನೆಯಲ್ಲಿ ಮಾಡಿದ ಸಿಹಿತಿಂಡಿ, ಪಾಯಸವನ್ನು ಮನೆಯ ಸದಸ್ಯರೆಲ್ಲರೂ ಒಟ್ಟಿಗೆ ಊಟ ಕುಳಿತು ಮಾಡುವುದರಿಂದ ಮನಸ್ಸಿಗೆ ನೆಮ್ಮದಿ ದೊರಕುವುದರಲ್ಲಿ ಸಂದೇಹವಿಲ್ಲ.

**ಸೂಚನೆ :** ಒಂದು ದಿವಸ =24 ಘಂಟೆ. 1 ಘಂಟೆ =2½ ಘಳಿಗೆ. 1ದಿವಸ =60ಘಳಿಗೆ. ಅಂದರೆ 5-4-2000 ಬುಧವಾರ ಅಪಾರಾಹ್ನ 3½ ಘಂಟೆಯವರೆಗೆ ಯುಗಾದಿಯ ಆಚರಣೆಗೆ ಒಳ್ಳೆಯ ಮುಹೂರ್ತವಿದೆ.

ಬೆಳಿಗ್ಗೆ ಸೂರ್ಯೋದಯ ಕಾಲ್ಕಕೆ 6ಘಂಟೆ 04ನಿಮಿಷಕ್ಕೆ ಶುಭ ಮೂಹೂರ್ತವಿರುವುದು.

||ಸರ್ವೇಜನ ಸುಖಿನೋಭವಂತು|| ಸರ್ವಾರಿಷ್ಠ ಶಾಂತಿರಸ್ತು||

ಯುಗಾದಿಯು ಸರ್ವ ಗೌಡ ಬಾಂದವರಿಗೂ, ಸುಖ. ಶಾಂತಿ. ನೆಮ್ಮದಿ. ದೀರ್ಘಾಯುಷ್ಯ ಆರೋಗ್ಯವನ್ನು ಹೊಸ ಜೀವಕಳೆಯನ್ನು ತರಲೆಂದು ಹಾರೈಸೋಣ.

— ಯಿಂದ

**ಗುತ್ತಿ ಮುಂಡನ ಗಿರೀಶ್‌ಕುಮಾರ್, ಜೋತಿಷ್ಯ ಮತ್ತು ವೈದ್ಯರು,**
**ಆಯುರ್ವೇದ್ಯ ರಿ. ನಂ. 3468, ಕೊಯನಾಡು - ಕೊಡಗು.**

### ನಗೆಹನಿ

ರಾಜು : ಯಾಕೆ ನೀನ್ ಮದುವೆಯಾಗ್ವ ಗೂಡೆನ ನಮ್ಮಮ್ಮಮಾತ್ರ ನೋಡ್ರೆ ಸಾಕ್‌ತ್ತೇಲ್ಲೆ ?

ಮಂಜು : ಅವಳ ಜೊತೆ ಜಗಳ ಆಡ್ದು ನಮ್ಮಮ್ಮನೇತಾನೇ?

**ಕೊಡಗು ಸಂಗಾತಿ, ಪಾಕ್ಷಿಕ ಅನ್ನು ಕೊಂಡು ಓದಿರಿ.**

**ಅತ್ತೆ ಮ್ಯಾಲೆನ ಸಿಟ್ಟ್ ಕೊತ್ತಿ ಮ್ಯಾಲೆ**

# ಗೌಡರ ಮದುವೆಗಳಲ್ಲಿ ಅಕ್ಕಿ ಮುಹೂರ್ತ ಮತ್ತು ಎಣ್ಣೆ ಅರಿಶಿನ ಶಾಸ್ತ್ರಗಳ ವೀಳ್ಯದ ಬಳಕೆಯ ಔಚಿತ್ಯ

ಗೌಡರ ಸಂಸ್ಕೃತಿ ಹಿಂದೂ ಮತದ ಇತರ ಜಾತಿಗಳ ಸಂಸ್ಕೃತಿಯಷ್ಟೇ ಹಳೆಯದು. ಗೌಡರ ಸಂಸ್ಕೃತಿ ಆರ್ಯರು ಭಾರತಕ್ಕೆ ಬರುವುದಕ್ಕೆ ಮೊದಲು ಇದ್ದ ಆರ್ಯೇತರ ದ್ರಾವಿಡ ಜನಾಂಗದವರ ಸಂಸ್ಕತಿ ಆಗಮನದ ಹಾಗೂ ಆರ್ಯರ ವೇದಗಳು ಹೇಳಿದ ಧಾರ್ಮಿಕ ವಿಧಿಗಳು ಸ್ಮೃತಿ ಮತ್ತು ಶ್ರುತಿಕಾರರಿಂದ ಮನು, ಗೌತಮ ಅವಸ್ಥಂಭಾ, ಹರಿತಾ, ವಸಿಷ್ಠ, ಯಾಜ್ಞವಲ್ಕ್ಯ ಮುಂತಾದ ಧರ್ಮಶಾಸ್ತ್ರದ ಆಧಾರದ ಮೇಲೆ ನಿರ್ಮಿಸಿದ ಜಾತಿಗಳ ಕಟ್ಟು ಕಟ್ಟಳೆಗಳನ್ನು ಪರಿಪಾಲಿಸುವುದಕ್ಕೆ ಕಟ್ಟೆ ಮನೆಗಳನ್ನು ಸ್ಥಾಪಿಸಿ ಆ ಕಟ್ಟೆ ಮನೆಗಳ ಮುಖಾಂತರ ಜಾತಿ ಪದ್ಧತಿಗಳನ್ನು ಕಾಪಾಡಿಕೊಂಡು ಬರುವಂತೆ ನಿರ್ಣಯಿಸಿದ್ದಾರೆ.

ಅದೇ ರೀತಿ ಗೌಡರ ಮದುವೆಗಳಲ್ಲಿ ನಡೆಯುವ ಅಕ್ಕಿಯ ಅಕ್ಷತೆ, ಎಣ್ಣೆ ಅರಸಿನ ಶಾಸ್ತ್ರಗಳೂ ಧರ್ಮಶಾಸ್ತ್ರಜ್ಞರು ನಿರೂಪಿಸಿದ ರೀತಿಯಲ್ಲಿ ನಡೆಯುತ್ತಿವೆ.

ಋಗ್ವೇದ ಸಂಹಿತೆಯ ಪ್ರಕಾರ ಮದುವೆಯಲ್ಲಿ ಮದುಮಕ್ಕಳ ಮೇಲೆ ಎರಚುವ ಅಕ್ಷತೆಯ ವಿಷಯ ಈರೀತಿ ಹೇಳುತ್ತದೆ.

"ವಧುವರರನ್ನು ಸ್ನಾನ ಮಾಡಿಸಿದ ಬಳಿಕ ವಿವಾಹಕ್ಕೆ ಇರುವ ವಸ್ತ್ರಗಳನ್ನು ತೊಟ್ಟು ಅರಸಿನಾವೃತವಾದ ಗೌರಿಯನ್ನು ಅರಶಿನ ಮಿಶ್ರಿತ ಅಕ್ಕಿಯಿಂದ ಪೂಜಿಸಿ ಅದೇ ಅಕ್ಕಿ ಯಾವ ಇಂದ್ರಾಣಿಗೆ ಪ್ರಿಯವಾಗಿದೆಯೋ ಆ ದೇವೆಂದ್ರನ ಇಂದ್ರಾಣಿಯನ್ನು ಆರೋಗ್ಯವನ್ನೂ, ಗಂಡು ಮಗುವನ್ನೂ ಕೊಡುವಂತೆ ಪೂಜಿಸುವರು" ಎಂದು ಹೇಳಿದೆ.

ಆದ್ದರಿಂದ ಅಕ್ಷತೆ ಮೂಲ ಋಗ್ವೇದದ ಕಾಲದಷ್ಟು ಹಳೆಯದು. ಗೌಡರು ಶುಭ ಮತ್ತು ಅಶುಭ ಕಾರ್ಯಗಳಲ್ಲಿ ದೇವರನ್ನು ಹಾಗೂ ಭೂತಗಳನ್ನು ಪ್ರಾರ್ಥಿಸುವಾಗ ಅಕ್ಕಿಯನ್ನು ದೀವಿಗೆಗೆ ಎರಚಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಅಕ್ಕಿ ಮುಹೂರ್ತ ಮಾಡುವ ಕಾಲದಲ್ಲಿ, ಸೋದರಮಾವ ಖಾಸಾತಾಳಿ ಕಟ್ಟುವ ಕಾಲದಲ್ಲಿ, ಎಣ್ಣೆ ಅರಶಿನ ಶಾಸ್ತ್ರಕ್ಕೆ ಕೂರಿಸುವ ಕಾಲದಲ್ಲಿ, ಹರಕೆ ಹಣ ಕಟ್ಟುವ ಕಾಲದಲ್ಲಿ, ಹಿರಿಯರಿಗೆ ಎಡೆ ಹಾಕುವ ಕಾಲದಲ್ಲಿ, ಎರಡು ಮಾತನ್ನು ಹೇಳಿ ದೀವಿಗೆಗೆ ಅಕ್ಷತೆಯನ್ನು ಎರಚಿ ಕೆಲಸವನ್ನು ಪ್ರಾರಂಭಿಸುತ್ತಾರೆ.

ಇದೇ ರೀತಿ ದೀವಿಗೆಗೆ ಮದುವೆಯ ದಿಬ್ಬಣ ಬಂದು ಚಪ್ಪರದಡಿಯಲ್ಲಿ ಎಲ್ಲಾ ಕೆಲಸಕಾರ್ಯಗಳನ್ನು ಮಾಡುವಾಗಲೂ ಚಪ್ಪರದಡಿಯಲ್ಲಿ ಉರಿಯುತ್ತಿರುವ ದೀವಿಗೆಗೆ ಅಕ್ಕಿ ಹಾಕಿ ಕೆಲಸ ಪ್ರಾರಂಭ ಮಾಡುತ್ತಾರೆ. ಹೆಣ್ಣಿನ ಕಡೆಯ ಕಳಸ ಕನ್ನಡಿಯನ್ನು ಗಂಡಿನ ಕಡೆಯ ಕಳಸ ಕನ್ನಡಿಯನ್ನು ಬದಲಾಯಿಸುವಾಗಲೂ ದೀವಿಗೆಗೆ ಅಕ್ಕಿ ಹಾಕಿ ಪೂಜಿಸುತ್ತಾರೆ. ಹೆಣ್ಣು ಯಾ ಗಂಡು ಮಂಗಳ ಸ್ನಾನ ಮಾಡಿ ಗಂಗೆ ಪೂಜೆಯನ್ನು ಮಾಡುವಾಗಲೂ ದೀವಿಗೆಗೆ ಅಕ್ಕಿ ಹಾಕಿ ಪೂಜಿಸುತ್ತಾರೆ. ನಂತರ ಗಂಡು ಹೆಣ್ಣನ್ನು ತನ್ನ ಮನೆಗೆ ಕರೆ ತಂದು ಮನೆಗೆ ಹತ್ತುವಾಗಲೂ ತುಪ್ಪದ ಗಟ್ಲೆಗೆ ಹೋಗುವಾಗಲೂ ತುಪ್ಪದ ಗಟ್ಲೆಯ ದಿನ ಹೆಣ್ಣಿನ ಮನೆಗೆ ಹತ್ತುವಾಗಲೂ ದೀವಿಗೆಗೆ ಅಕ್ಕಿ ಹಾಕಿ ಪ್ರಾರ್ಥಿಸುತ್ತಾರೆ. ಗೌಡರ ಮದುವೆಯಲ್ಲಿ ಎಲ್ಲಾ ಹಂತದ ಕಾರ್ಯಗಳನ್ನು ಪ್ರಾರಂಭ ಮಾಡುವಾಗ ದೀವಿಗೆಗೆ ಅಕ್ಕಿ ಹಾಕಿ ಕೆಲಸ ಪ್ರಾರಂಭಿಸುತ್ತಾರೆ. ಇದರಿಂದ ಕಾರ್ಯಗಳ ಆರಂಭಕ್ಕೆ ದೇವರನ್ನೂ ಪ್ರಾರ್ಥಿಸಿ ದೀವಿಗೆಗೆ ಅಕ್ಕಿ ಹಾಕುವುದು ಸೋಬಾನೆಗಳಲ್ಲೂ ದೇವರುಗಳನ್ನು ಗಂಡಿಗೆ ಹೋಲಿಸಿ ಹೆಣ್ಣನ್ನು ದೇವತೆಗಳಿಗೆ ಹೋಲಿಸಿ ಹೇಳುವ ಹಾಡುಗಳು ಮದುವೆಯ ಕಾರ್ಯಗಳಲ್ಲಿ ದೇವರ ಮೇಲಿನ ಭಕ್ತಿಯನ್ನು ತೋರಿಸುತ್ತದೆ.

ಆದ್ದರಿಂದ ಡಾ. ಪುರುಷೋತ್ತಮ ಬಿಳಿಮಲೆಯವರು ಹೇಳಿದಂತೆ "ಇಲ್ಲಿ ಜೀವನಧಾತುವಾಗಿರುವ ಮತ್ತು ಉತ್ಪಾದನಾ ಘಟಕವಾಗಿರುವ ಅಕ್ಕಿಯ ಅನಂತ ಶಕ್ತಿಯನ್ನು ದಂಪತಿ ದಾಟಿಸುವ ಸಂಕೇತ ಲಭಿಸುತ್ತದೆ" ಮಾತ್ರವಾಗಿರದೆ ವಿವಾಹವೆಂಬ ಪವಿತ್ರವಾದ ವಿಧಿಯಲ್ಲಿ ಹಂತ ಹಂತಗಳಲ್ಲಿ ದೇವರನ್ನು ಪೂಜಿಸಿ ಪ್ರಾರ್ಥಿಸಿ ನಡೆಸುವ ಸಮಾರಂಭವಾಗಿದೆ. ಮದುವೆ ಎಂಬ ಸಮಾರಂಭ ಹಿಂದೂಗಳಲ್ಲಿ ಬಹಳ ಮಹತ್ವವನ್ನುಹೊಂದಿರುವ ಒಂದು ವಿಧಿ. ನಮ್ಮ ಹಿರಿಯರು ಹೆಣ್ಣನ್ನು ಕೊಡುವುದಕ್ಕೆ ಕನ್ಯಾದಾನವೆಂದು ಕರೆದಿದ್ದಾರೆ. ವಿವಾಹವನ್ನು ಒಂದು ಹೆಣ್ಣು ಗಂಡನ್ನು ಒಟ್ಟುಗೂಡಿಸುವ ವಿಧಿ ಎಂದು ಭಾವಿಸದೆ ಆ ವಿಧಿಗೆ ಹೆಜ್ಜೆ ಹೆಜ್ಜೆಗೂ ಕುಲಬಾಂಧವರನ್ನು ಕೇಳಿ ಹತ್ತು ಕುಟುಂಬ ಹದಿನೆಂಟು ಗೋತ್ರದ ಸಮಸ್ತ ಬಂಧುಗಳ ಆಶೀರ್ವಾದ ತಮ್ಮ ಮನೆ ದೇವರಿಂದ ಶ್ರೀ ವೆಂಕಟರಮಣನ ಕೃಪೆ ಕಟಾಕ್ಷ, ಗುರುಕೃಪೆ ಕಟಾಕ್ಷ, ತಾಯಿಯ ಸೋದರ ಸಂಬಂಧದವರ ಅನುಮತಿಯಿಂದ ಮುಂದೆ ಬದುಕಿ ಬಾಳುವ ವಧೂ ವರರ ಜೀವನ ಇವರೆಲ್ಲರ ಕೃಪೆ ಕಟಾಕ್ಷದಿಂದ ಸಾಂಗವಾಗಿ ನೆರವೇರಿ ಹೊಸದಾಗಿ ವಿವಾಹವಾದ ದಂಪತಿಗಳ ಸರ್ವತೋಮುಖ ಅಭಿವೃದ್ಧಿಯನ್ನು ಹಾರೈಸುತ್ತಾರೆ.

ಗೌಡರ ವಿವಾಹ ಕಾರ್ಯಗಳು ಬರೇ ಪ್ರಾಪಂಚಿಕ ವ್ಯವಹಾರಗಳ ಸಂಬಂಧವನ್ನು ಕಲ್ಪಿಸುವ ಸಮಾರಂಭವಾಗಿರದೆ ಆಧ್ಯಾತ್ಮಿಕವಾಗಿ ಇದೇ ರೀತಿ ಹೊಸದಾಗಿ ಮದುವೆಯಾಗುವ ಮದುಮಕ್ಕಳು ತಮ್ಮ ಜೀವನವನ್ನು ಸುಗಮವಾಗಿ ಕಳೆಯಲು ಅವರಿಗೆ ಶುದ್ಧವಾದ ಮನಸ್ಸು ಹಾಗೂ ಆರೋಗ್ಯವಾದ ದೈಹಿಕ ಸಂಪತ್ತೂ ಇರಬೇಕೆಂಬುದಕ್ಕೆ ಮದುವೆಯಾಗುವ ಗಂಡು ಹೆಣ್ಣು ಸುಂದರವಾಗಿ, ಸ್ವಚ್ಛವಾಗಿರಲೆಂದು ಅವರ ಮದುವೆಯ ದಿನ ಎಣ್ಣೆ ಅರಶಿನ ಹಚ್ಚಿ ಮೈಯ್ಯೆಲ್ಲಾ ಪೂಸಿ ದೇಹದ ಮತ್ತು ಮುಖದ ಸೌಂದರ್ಯವನ್ನು ಹೆಚ್ಚಿಸುವುದಲ್ಲದೆ ಮೈಯ್ಯಲ್ಲಿನ ಕೊಳೆಯನ್ನು ಹೋಗಲಾಡಿಸಿ ಮದುವೆಯಾಗುವ ಗಂಡು ಯಾ ಹೆಣ್ಣು ಮನೋವಾಚಾ ಕಾಯ ಶುದ್ಧವಾಗಿರಲೆಂದು ಎಣ್ಣೆ ಅರಶಿನ ದೇವೆಂದ್ರನ ರಾಣಿ ಇಂದ್ರಾಣಿಗೂ ಬಹು ಪ್ರೀತಿಯ ವಸ್ತುವಾಗಿದ್ದು ಗರಿಕೆ, ಎಣ್ಣೆ ಮತ್ತು ಅರಿಶಿನ ಉಪಯೋಗ ಔಷದೋಪಾಯದಲ್ಲಿ ಮದುವೆಯ ಸಂದರ್ಭದಲ್ಲಿ

**ಬೆಂದದ್ ಬಾಯ್ಗೆ, ಹಳ್ಸಿದ್ ನಾಯ್ಗೆ**

ಉಪಯೋಗಿಸುವಂತಾಗುತ್ತದೆ. ಅರಿಶಿನದಲ್ಲಿ ಚರ್ಮರೋಗ ನಿವಾರಣ ಶಕ್ತಿ ಇದೆ. ಅರಶಿನ ಹಚ್ಚುವುದು ಮಂಗಳವೆಂಬ ಭಾವನೆ ಜನರಲ್ಲಿ ಬೇರೂರಿದೆ. ಮಂಗಳ ದ್ರವ್ಯದಲ್ಲಿ ಅರಿಶಿನ ಪ್ರಥಮ ಸ್ಥಾನವುಂಟು. ಅರಿಶಿನದಲ್ಲಿ ಕ್ರಿಮಿನಾಶಕ ಗುಣವಿದೆ. ಹಿಂದೂ ಧರ್ಮದಲ್ಲಿ ವೈಜ್ಞಾನಿಕ ಉಪಯೋಗವನ್ನು ಧರ್ಮದ ಲೇಪನದಿಂದ ಪೂಸಿ ಸಾಮಾನ್ಯ ಜನತೆ ಅದನ್ನು ಉಪಯೋಗಿಸುವಂತೆ ಮಾಡಿರುವುದು ನಮ್ಮ ಪೂರ್ವಿಕರ ಬೌದ್ಧಿಕ ಸಾಮರ್ಥ್ಯವನ್ನು ನಾವು ಇಲ್ಲಿ ಕಾಣಬಹುದು. ನಮ್ಮ ಹಿರಿಯರು ಮದುವೆ ದೇವರ ಹಬ್ಬ ಗಳಲ್ಲಿ ಈ ರೀತಿಯ ಅನುಷ್ಠಾನಗಳಿಗೆ ಎಡೆ ಮಾಡಿ ಕೊಟ್ಟಿದ್ದಾರೆ.

### ವೀಳ್ಯದ ಬಳಕೆ

ವೀಳೆಯದೆಲೆಯು ಶ್ರೀ ಲಕ್ಷ್ಮಿ ಸಮಾನವೆಂದು ಭಾವಿಸುತ್ತಾರೆ. ಕಳಸ ಪೂಜೆಗೆ ಅಗತ್ಯವಾದ ವೀಳೆಯದೆಲೆ ಲಕ್ಷ್ಮಿ ನೆಲೆಯಾದ ಕಾರಣ ಪೂಜಾರ್ಹವೂ ಹೌದು. ವಿವಾಹಾದಿ ಶುಭಕಾರ್ಯಗಳಲ್ಲಿ ಮತ್ತು ಪೂಜಾ ನಿತ್ಯ ಕರ್ಮಗಳಲ್ಲಿ ಸುಮಂಗಲಿಯರಿಗೆ ಗಂಧ, ಅರಿಶಿನ, ಹೂವು, ವೀಳ್ಯ ಮೊದಲಾದವುಗಳನ್ನು ಹಂಚುವ ಸಂಪ್ರದಾಯ ಬಹಳ ಪುರಾತನವಾದದು. ಹಣ, ವಸ್ತ್ರ, ಹೂವು, ಹಣ್ಣು ಇತ್ಯಾದಿ ಪದಾರ್ಥಗಳನ್ನು ಗೌರವಾರ್ಥವಾಗಲೀ ದಾನದ ರೂಪದಲ್ಲಾಗಲೀ ವೀಳ್ಯವಿದ್ದೇ ಇರಬೇಕು. ವೀಳ್ಯಸಹಿತವಾದ ಕೊಡುಗೆ ಧರ್ಮಸಮ್ಮತವಾದ ಕೊಡುಗೆಯಾಗಿರುತ್ತದೆ.

ಯಾವುದೇ ಒಪ್ಪಂದದ ಅಂತ್ಯದಲ್ಲಿ ವೀಳ್ಯ ಸ್ವೀಕರಿಸಿದರೆ ವ್ಯವಹಾರ ಬಗೆ ಹರಿದಂತೆ. ವೀಳ್ಯ ಸ್ವೀಕರಿಸಿದರೆ ಕೊಟ್ಟ ಮಾತಿಗೆ ತಪ್ಪುವುದಿಲ್ಲವೆಂಬುದರ ಸಂಕೇತ. ಆದುದರಿಂದ ತಾಂಬೂಲ ಮೆಲ್ಲುವುದು ಗೌರವಯುತ ಸಂಪ್ರದಾಯವೆಂದು ಹಿರಿಯರ ಅಭಿಪ್ರಾಯ. ಆದುದರಿಂದ ಗೌಡರ ಮದುವೆ ಪದ್ಧತಿಯಲ್ಲಿ ವೀಳ್ಯವು ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ಹೆಣ್ಣು ಗಂಡಿನ ವಿವಾಹದ ನಿಶ್ಚಯವಾದ ದಿನದಿಂದ ಹಿಡಿದು ಮದುವೆಯ ಕೊನೆಯ ಹಂತದವರೆಗೂ ವೀಳ್ಯವನ್ನು ಉಪಯೋಗಿಸುತ್ತಾರೆ. ಹೆಣ್ಣು ಮಾತಿನ ಕರಾರಿನ ದಿನಕ್ಕೆ ವೀಳ್ಯ ಶಾಸ್ತ್ರವೆಂದೇ ಕರೆಯುತ್ತಾರೆ. ಹಿಂದಿನ ಕಾಲದಲ್ಲಿ ಮದುವೆಗೆ ಕರೆಯುವುದಕ್ಕೆ ಈಗಿನ ಕಾಲದಂತೆ ಆಹ್ವಾನ ಪತ್ರಗಳನ್ನು ಹಂಚುತ್ತಿರಲಿಲ್ಲ. ಪ್ರತಿಯೊಬ್ಬರಿಗೂ ವೀಳ್ಯ ಕೊಟ್ಟು ನಮಸ್ಕರಿಸಿ ಮದುವೆಗೆ ಆಹ್ವಾನಿಸುತ್ತಿದ್ದರು. ಆದರೂ ಈಗಿನ ಕಾಲದಲ್ಲೂ ಕುಟುಂಬದ ಸದಸ್ಯರಿಗೆ ಊರವರಿಗೆ, ಸೋದರಮಾವನ ಮತ್ತು ಅವರ ಕುಟುಂಬದವರಿಗೆ ವೀಳ್ಯ ಕೊಡಲೇಬೇಕು.

ಮದುವೆ ಸಮಾರಂಭದ ದಿನಗಳಲ್ಲಂತೂ ವೀಳ್ಯವನ್ನು ಪ್ರತಿ ಹಂತದಲ್ಲೂ ಬಳಸುತ್ತಾರೆ. ಮದುವೆಯಲ್ಲಿ ಕೊಡುವ ವೀಳ್ಯಗಳು 12 ವಿಧದ ವೀಳ್ಯಗಳಿದ್ದು ಅವಕ್ಕೆ ಎಷ್ಟು ಎಲೆ ಎಷ್ಟು ಅಡಿಕೆಗಳನ್ನು ಹಾಕಬೇಕೆಂದು ಶೃಂಗೇರಿ ಜಗದ್ಗುರುಗಳು ಕೊಟ್ಟ ನಿರೂಪದಲ್ಲಿ ಹೇಳಿದೆ.

ಅಕ್ಕಿಯ ಅಕ್ಷತೆ, ಅಕ್ಕಿಯ (ರಂಗೋಲೆ) ಹಸೆ, ಅರಿಶಿನ ಶಾಸ್ತ್ರ, ವೀಳ್ಯ ಕೊಡುವ ಪದ್ಧತಿ ಬರೇ ಯಾಂತ್ರಿಕತೆ ಗೊಡ್ಡು ಸಂಪ್ರದಾಯವಲ್ಲ. ಇದರಲ್ಲಿ ದೇವರ ಪ್ರಾರ್ಥನೆಯ ಮುಖಾಂತರ ಹೆಣ್ಣು ಗಂಡಿಗೆ ಕೊಡುವ ಆಶೀರ್ವಾದ ಅವರ ಆರೋಗ್ಯ ಅವರ ಪರಿಶುದ್ಧತೆಯೊಡನೆ ಗೌರವಯುತ ಸಂಪ್ರದಾಯದ ಚಿನ್ಹೆಗಳು.

ಆದುದರಿಂದ ಗೌಡರ ವಿವಾಹ ಪದ್ಧತಿ ನಾನು ಈ ಹಿಂದೆ ಹೇಳಿದಂತೆ ಅತೀ ಪುರಾತನ ಕಾಲದಿಂದಲೇ ಅಂದರೆ ಮಹಾಭಾರತ ಕಾಲಕ್ಕಿಂತಲೂ ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿ ಯಾಗಿದೆ. ಈ ಎಲ್ಲಾ ಪದ್ಧತಿಗಳಲ್ಲಿ ಧಾರ್ಮಿಕ ಹಾಗೂ ವೈಜ್ಞಾನಿಕವಾದ ರೀತಿ ನೀತಿಗಳಿವೆ.

— ಪ್ರೊ. ಪೂಜಾರಿ ಮೊಣ್ಣಪ್ಪ
ಬೆಂಗಳೂರು

---

## ಶೃಂಗೇರಿ ಶಾರದೆ

ಕಂಡೆ ಕಂಡೆ ಶಾರದೆ ನಾನಿನ್ನ ಕಂಡೆ,
ಕಣ್ಣಾರೆ ಕಂಡೆ, ಕಂಡು ಧನ್ಯಳಾದೆ ||ಕಂಡೆ ಕಂಡೆ||

ಬ್ರಹ್ಮಲೋಕವೇ ಧರೆಗೆ ಇಳಿದುದ ಕಂಡೆ
ಶೃಂಗೇರಿ ಪುರವಾಗಿ ಮೆರೆವುದಾ ಕಂಡೆ
ಶ್ವೇತ ವಸನ ಧಾರಿ ಬ್ರಹ್ಮನ ರಾಣಿಯ ಕಂಡೆ
ಸ್ಥಿರವಾದ ಬಂಡೆಯ ಮೇಲೆ ಆಸೀನಳಾದ ನಿನ್ನ ಕಂಡೆ
||ಕಂಡೆ ಕಂಡೆ||

ಗಿಳಿ ಹಸ್ತ ಶೋಭಿತೆ ಚತುರ್ಭುಜೆಯ ಕಂಡೆ
ಬೆರಳೊಳು ಜಪಮಣಿ ಎಣಿಸುವುದಾ ಕಂಡೆ
ಕಚ್ಛಪ ವೀಣೆಯ ನುಡಿಸುವುದಾ ಕಂಡೆ
ಪುಸ್ತಕ ಪಾಣಿಯೇ ಸರಸ್ವತಿ ನಿನ್ನಾ ಕಂಡೆ
||ಕಂಡೆ ಕಂಡೆ||

ದೇವ ಗಂಗೆಯಂತಿಹ ತುಂಗೆಯ ನಾನು ಕಂಡೆ
ಅಲ್ಲಲ್ಲೇ ಆಡುವ ಕಲ ಹಂಸಗಳಾ ಕಂಡೆ
ಸಹಜ ವೈರವ ಮರೆತ ವನಚರಗಳಾ ಕಂಡೆ
ಸೃಷ್ಟಿಯ ಅಧ್ಭುತ ಲೀಲೆಯ ನಾ ಕಂಡೆ
||ಕಂಡೆ ಕಂಡೆ||

ಧರೆಯೆಲ್ಲಾ ಹಸಿರಾಗಿ ಶೋಭಿಸುವುದಾ ಕಂಡೆ
ವನವೆಲ್ಲಾ ಹೂವಾಗಿ ಅರಳಿರುವುದಾ ಕಂಡೆ
ದುಂಬಿಗಳಾ ಝೇಂಕಾರದಿ ಓಂಕಾರ ನಾದ ಕಂಡೆ
ವನದೇವಿ ಅರ್ಪಿಸಿದಾ ಪುಷ್ಪ ಸ್ವೀಕರಿಸುವ ನಿನ್ನಾ ಕಂಡೆ
||ಕಂಡೆ ಕಂಡೆ||

ಅದ್ವೈತದಾಚಾರ್ಯ ಗುರು ಶಂಕರರಾ ಕಂಡೆ
ವಟುಗಳ ವೇದ ಘೋಷವ ನಾಕಂಡೆ
ಅಳಿಕುಲ ಮಾರ್ಧನಿ ನುಡಿಯುವುದಾ ಕಂಡೆ
ಲಲಿತ ಸಹಸ್ರ ನಾಮ ಸ್ತುತಿಸುವ ನಿನ್ನಾ ಕಂಡೆ
||ಕಂಡೆ ಕಂಡೆ||

— ಬಟ್ಟೀರ ಚೋಂದಮ್ಮ ಶಂಭು

---

ಕ್ಯಾಡ ಸತ್ತ ಕೊರ್ಮನಂಗೆ, ಅದ್ರದೆ ಉದ್‌ರ್‌ದ್ಯಾ - ಅನುಭವ

# ವಾಂಟೆಡ್ ಮಿಸ್ಟರ್ ರಾಜು [ನಮ್ಮ ರಾಜು ಮಂಜನ ಕಥೆ]

**(ಹಿಂದಿನ ಸಂಚಿಕೆಂದ)** **ಧಾರಾವಾಹಿ - 7**

ಚೆನ್ನಯ್ಯನವರ ಕುಸ್ತಿ ಅಖಾಡಲಿ ಟಿಕೇಟ್ ಕೊಡುವ ಮೂರು ಕಡೆಯ ಕೌಂಟರ್‌ಗಳಲ್ಲೂ ಸಿಕ್ಕಾಬಟ್ಟೆ ಜನ ನಿಂತಿದ್ದೊ. ಟಿಕೇಟ್‌ನ ತಕ್ಕೊಂಬಕ್ಕೋಸ್ಕರ ಅವುಅವ್ವೇ ಅತ್ತಾ ಇತ್ತ ತಳ್ಳಾಡಿ ಕೊಂಬೊತಿದ್ದೋ. ಸರಿ ಈ ಜನರ ಗುದ್ದಾಟಲಿ ನಂಗೆ ಖಂಡಿತ ಈಗ ಟಿಕೇಟ್ ಸಿಕ್ಕಿಕಿಲ್ಲೆಲ್ಲಾ ತ? ಗ್ಯಾನ ಮಾಡಿಕಾಕನ, ಐದಾರು ಜನ ಪೈಲ್ವಾನ್ ಅವ್ವಮಾದೇಶನ ಶಿಷ್ಯರುಗಳ ಗುಂಪು ಗೇಟ್‌ನ ಹತ್ರಕ್ಕೆ ನೆಟ್ಟಂಗೆ ಹೋಗುತಿದ್ದೊ. ಆ ಗೇಟ್ ಕೀಪರ್ ಆ ಗುಂಪುನ ಒಬ್ಬ ಬಾಹುಬಾಲಿಗೆ ನಮಸ್ಕಾರ ಕಣಣ್ಣೊತ್ತೇಳಿ ಕೈಮುಗ್ದ್ ನಮಸ್ಕಾರ ಹೊಡ್ದ್ ಹಾಂ ಬನ್ನಿ ಬನ್ನಿತ್ತೇಳಿ ಒಳಗೆ ಹಂಗೆ ಬುಡ್ತಿತ್ತ್. ಹೇ ಬರ್‍ರೋ ತ್ತೇಳಿ ತನ್ನ ಹಿಂದೆ ಬರುವ ಜೊತೆಗಾರರಿಗೆ ಕೈ ಸನ್ನೆಮಾಡಿ ತೋರ್ಸಿಕಾಕನ ಈ ರಾಜುಕೂಡಾ ಆ ಗುಂಪುನ ಮಧ್ಯಲಿ ಸೇರಿಕಂಡ್ ಬುಡ್ತ್. ಆ ಗುಂಪುನೊಟ್ಟಿಗೆ ಸಲೀಸಾಗಿ ಒಳಗೆ ದಾಟಿ ಹೋಗಿ ಅಲ್ಲಿ ಹಾಕಿದ್ದ ಮುಂದಿನ ಸಾಲ್‌ನ ಕುರ್ಚಿಲಿ ಒಂದ್ ಸೀಟ್ ಹಿಡ್ದ್ ಕುದ್ದ್‌ಕಂಡತ್.

ಸರಿಯಾಗಿ 4½ ಗಂಟೆಗೆ ಅಖಾಡಲಿ ಕಾಂಪಿಟೇಷನ್ ಸುರು ಆತ್. ಮೊದ್ಲಿಗೆ 50 kg.ವಿಭಾಗದ ಸಣ್ಣವ್ರ ಜೊತೆ ಕರಾಟೆ ಪೈಟಿಂಗ್ ಎರಡ್ ಹೈದಂಗ, ಬಿಳಿದೊಗಳೆ ಪ್ಯಾಂಟ್, ದೊಗಳೆ ಕೋಟ್ ಹಾಕಂಡ್ ಸೊಂಟಕ್ಕೆ ಬಟ್ಟೆದ್ ಕಪ್ಪು ಬೆಲ್ಟ್‌ನ ಕಟ್ಟಿಕಂಡಿದ್ದೊ. ಅವು, ಹಾ! ಹ್ಹೂ.. ಹ್ಹೂ.. ತೇಳಿ ಕಿರ್‌ಚಾಡಿ ಕಂಡ್ ಕೊಣ್‌ದಾಡಿಕಂಡ್ ಸ್ಟೇಜ್ ಮೇಲೆ ಬಂದ್ ನಿಂತ್‌ಕೊಂಡೊ. ಆಗ ಇವರ ರಿಪ್ರಿ ಗುರು ಮುಂದೆ ಬಂದ್ ಈ ಇಬ್ರ ಕೈ ಹಿಡ್ದ್ ಸೇರ್ಸಿತ್. ಇವು ಆ ಗುರುಗೆ ಮೊಣಕಾಲು ಊರಿ ಬೆನ್ನ್ ಬೊಗ್ಗಿಸಿ ವಂದಿಸಿದೊ. ಆ ಮೇಲೆ ಎದ್‌ರ್ ಬದರ್ ಪೊದಿಸನ್‌ಲಿ ನಿಂತ್ ಅಂಗೈಬೆರಳ್‌ಗಳ ಅರ್ಧಕ್ಕೆ ಮಡುಚಿ ಇಬ್ಬರೂ ದುರುಗುಟ್ಟಿ ನೋಡಿಕಂಡ್ ಹಂಗೇ ಹೊಂಚ್‌ಹಾಕಂಡ್ ತಿರುಗುತ್ತಿದ್ದೊ. ಥೂ ಇದೆಂತ ಪೈಟಿಂಗ್ ತ ಗ್ಯಾನ ಮಾಡಿಕಾಕನ ಒಬ್ಬ ಒಳ್ಳೆ ಹುಲಿತರ ಕಿರ್‌ಚಿಕಂಡ್ ಮೇಲೆಹಾರಿ ಒಂದ್ ರೌಂಡ್ ತಿರುಗಿಕಂಡ್ ಅಂವನ ಬಲಗಾಲ್‌ನ ಅಡ್ಡ ಬೀಸಿ ಸರಿಯಾಗಿ ತಲೆ ಪಡನಟ್ಟೆಗೆ ಹೊಡ್ತ್. ಅದೇನಾದ್ರೂ ಅಂವನ ತಲೆಗೆ ತಾಗಿದ್ದಿದ್ರೆ? ಅಂವ ಅಲ್ಲೇ ಪೈಸಲ್, ಆದ್ರೇ ಇಂವ ಕಿಲಾಡಿ ಗಾಳಿಲಿ ಹಾರಿ ಬಂದ ಕಾಲಿಗೆ ಅಡ್ಡಕೈಕೊಟ್ಟ್ ಇನ್ನೊಂದ್ ಕಾಲಿಗೆ ಅಡ್ಡಕಟ್ಟ್ ಕೊಡ್‌ತ ಕತ್ರಿತರ ತಿರುಗಿಸಿಬುಡ್ತ್. ಮೇಲೆ ಹಾರ್ದಂವ ತಲೆಕುತ್ತಿ ಕೆಳಗೆ ಬಿದ್ದ್‌ಬುಡ್ತ್ ಅಷ್ಟೊತ್ತಿಗೆ ರೆಫ್ರಿ ಮಧ್ಯ ಬಂದ್ ತಡ್ತ್. ಯಾಕೆತ್ತೇಳಿರೆ ಈ ಪೈಟಿಂಗ್‌ನ ಒಂದೇ ಸಮನೆ ಮುಂದುವರಿಯಕೆ ಬುಡ್ದುಲೆ. ಒಂದೊಂದು ಏಟಿಗೆ ಒಂದೊಂದು ಪಾಯಿಂಟ್ಸ್‌ನ ಇವುಕೆ ಲೆಕ್ಕ ಇದ್ದದೆ. ಪುನಃ ಇನ್ನೊಬ್ಬ ಕರಾಟೆಂವ ಒಮ್ಮೆಗೆ ಮೇಲೆ ಹಾರಿ ಎರಡ್ ಪಂಚ್ ಒಂದ್ ಕಿಕ್, ಕಣ್ಣ್ ಮುಚ್ಚಿ ಬುಡ್ದೊರೋಳಗೆ ಹಾಕಿತ್. ಇದರ ತಡ್ದ ಅಂವ ಒಳ್ಳೆ ಕಂಠ ಕೊತ್ತಿತರ ಕಿರುಚಿ ರ್‍ರೊಂಯ್ ತ ತಿರುಗಿ ಮುಷ್ಟಿಂದ ಒಂದ್ ಪಂಚ್, ಕಾಲ್‌ಂದ ಅಂವನ ಎದೆಗೆ ಒಂದ್ ಒತ್ತ ಹಾಕಿತ್. ಇವರ ಕುಸ್ತಿಲಿ ಎಷ್ಟೊತಿಗೆ ಏಟ್ ಬಿದ್ದದೆ ತಾ ಗೊತ್ತಾದುಲ್ಲೆ, ಕಣ್ಣ್ ಮುಚ್ಚಿ ಬುಡುದರೊಳಗೆ ಗುದ್ದ್ ಬಿದ್ದಿದ್ದದೆ. ನನ್ನಂತಂವಗಾದ್ರೆ ಇವರ ಒಂದೇ ಪಂಚ್ ಸಾಕ್. ಅಷ್ಟಕ್ಕೆ ತಿಥಿಕಾಗದ ಪ್ರಿಂಟ್ ಮಾಡಿಕ್ಕಾದು ಹಿಂಗೆ ಸ್ವಲ್ಪ ಹೊತ್ತ್ ಆಡಿ ಆಕನ ರೆಫ್ರಿ ಬಂದ್ ಈ ಇಬ್ಬರ ಕೈ ಹಿಡ್ದ್ ಮೇಲಕ್ಕೆ ಎತ್ತಿ ಇಬ್ರುದೂ ಸಮ ಸಮ ಪಾಯಿಂಟ್ಸ್‌ಗ. ಇವರ ಪಂದ್ಯ ಡ್ರಾ ಆತ್‌ತಾ ಹೇಳ್ದೊ.

ಈಗ ಎರಡನೆ ವಿಭಾಗದ 75 kg ತೂಕದವರ ಕುಂಗ್ ಫೂ - ಕರಾಟೆ, ಜುಡೋ ಮಿಶ್ರವಾದ ಫ್ರೀ ಸ್ಟೈಲ್ ಮಾರ್ಸಲ್ ಫೈಟಿಂಗ್ ಈ ಎರಡ್ ಎದುರಾಳಿಗ ಬಟ್ಟೆ ಬಿಚ್ಚಿ ಬರೀ ಕಾಚಲಿ ಅಖಾಡದ ಮೇಲೆ ಬಂದೊ, ಇವರ ಶರೀರನ ನೋಡ್ರೆ ಒಳ್ಳೆ ಕರೀಕಲ್ಲ್‌ಂದ ಕೆತ್ತಿಮಾಡ್ದ ವಿಗ್ರಗಳಂಗೆ ಇವರ ರಟ್ಟೆಮತ್ತೆ ಎದೆಗಳ ಮೇಲೆ ಮೈಕಟ್ಸ್‌ಗ ಆ ಲೈಟ್ ಬೆಳಕಿಗೆ ಮಿಂಚ್‌ತಿತ್ತ್. ಇವು ಸರ್ಕಸ್ ಕಂಪೆನಿಲಿ ಜನ ಹಿಂದಕ್ಕೂ ಮುಂದಕ್ಕೂ ನೆಗ್ದ್ ಹಾರಾಡುವಂಗೆ ಕುಪುಳಚ ಕಾಕಿದೊ ಆಮೇಲೆ ರೆಫ್ರಿ ಬಂದ್ ಇವರ ಕೈ ಹಿಡ್ದ್ ಸ್ಟಾರ್ಟ್‌ತಾ ಹೇಳ್ತ್. ಆಗ ಇಬ್ಬರೂ ಒಂದ್ ಕ್ಷಣ ನಿಮರಿಕಂಡ್ ನಿಂತ್‌ಕಂಡೊ. ಒಮ್ಮೆಗೆ ಒಬ್ಬ ಇನ್ನೊಬ್ಬನ ಹಿಡ್ದ್ ಗುದ್ದಿ ಹೊಣ್‌ಕಿಸಿಕೆ ಹಾರ್ತ್. ಅದರ ತಪ್ಪಿಸಿಕಂಡ ಇನ್ನೊಬ್ಬ ಕಾಲ್ ಸೆರೆಗೆ ತಲೆಹಾಕಿ ಎತ್ತಿ ಎರಡ್ ಆಳ್ ಎತ್ತರಕ್ಕೆ ಎಸ್ತ್ ಕೆಳಗೆ ಬೀಳ್ಸಿ ಬುಡ್ತ್. ಬಿದ್ದಂವ ರಬ್ಬರ್ ಚೆಂಡ್‌ನಂಗೆ ಮೇಲೆ ಹಾರಿ ಇಂವನ ಕತ್ತಿಗೆ ಕತ್ರಿಕಾಲ್ ಹಾಕಿ ತಿರುಗಿಸಿ ಎಳ್ದ್ ಕೆಳಕ್ಕೆ ಹೊಣಕಿಸಿ ಅಂವ ಮೇಲೆ ಏಳಿಕೆ ಬೊತ್ತದಂಗೆ ಅಂವನ ಮೇಲೆ ಹಾರಿ ಎರಡೂ ಕೈನ ಹಿಂದಕ್ಕೆ ಎಳ್ದ್ ಬೆನ್ನ್ ಹಿಂದೆ, ತಲೆಗೆ ಒಂದ್ ಹತ್ತ್ ಒತ್ತ ಕೊಡ್ತ್. ಆದ್ರೂ ಅಂವಂಗೆ ಏನೂ ಆತ್ಲೆ. ಅಂವ ಹಿಂಗಾಲ್‌ಂದ ಇಂವನ ತೊಡೆ ಬುಡಕ್ಕೆ ಒಂದ್ ಒತ್ತ ಬಿದ್ದಲ್ಲಿಂದಲೇ ಕೊಡ್ತ್. ಆಗ ಇಂವ ಕೈ ಬುಟ್ಟ್ ಹೊಟ್ಟೆನ ಹಿಡ್ಕಂಡ್ ಎರಡ್‌ರೌಂಡ್ ತಿರುಗಿತ್. ಇವು ಕೈಲಿ, ಕಾಲ್‌ಲಿ, ಒಟ್ಟಿಗೆ ಹೊಡ್ದಾಡುತಿದ್ದೊ, ಇವರ ಒಂದೊಂದು ಮುಷ್ಠಿ ಗುದ್ದ್‌ಗ ಹೆಂಗಿದ್ದದೆ ತ್ತೇಳ್ರೆ ನಮ್ಮಲ್ಲಿ ಸೊಕ್ಕಿದ ಒಂದ್ ಕೋಣನ ಬೊರಿಗೆ ಗುದ್ರೆ ಮತ್ತೆ ಆ ಕೋಣ ನಮ್ಮ ಭೂಮಿ ಹೂಡಿಕೆ ಆಕಿಲ್ಲೆ. ಇವು ಹಿಂಗೇ ತುಂಬಾ ಹೊತ್ತ್ ಒಬ್ಬನ ಕಾಲ್‌ಗಂಟ್‌ನ ಇನ್ನೊಬ್ಬ ಒದ್ದು ಮುರಿಯದು. ರಟ್ಟೆಗೆ ಹೊಡ್ದ್ ತಿರುಗಿಸಿ ಮುರಿಯದು. ಸೊಂಟ ಮೂಳೆನ ಮುರಿಯಕೆ ಮೇಲೆಂದ ಎತ್ತಿ ಹಾಕುದು ಮುಸುಡಿಮೇಲೆ ತಲೆಂದ, ಮುಷ್ಠಿಂದ ಗುದ್ದು, ಹಿಂಗೇ ಬಹಳ ಹೊತ್ತು ಕಣ್ ಮುಚ್ಚಿಕಂಡ್ ಹೊಡ್ದಾಡಿದೊ. ಆಗ ಕಣ್ಣ್ ಮುಚ್ಚಿ ಬುಡದರೊಳಗೆ ಒಬ್ಬ ಇನ್ನೊಬ್ಬನ ಎದೆಗೆ ಎರಡ್ ಬೆರಳ್‌ನ ನೆಟ್ಟಂಗೆ ಮಾಡಿ ಚಾಕ್‌ಲಿ ಚುಚ್ಚಿದಂಗೆ ಚುಚ್ಚಿಬುಡ್ತ್. ಅಂವ ಅದ್ ಹೆಂಗೋ ಸುಸ್ತ್ ಆಗಿ ಕೆಳಗೆ ಬಿದ್ದೇ ಹೋತ್.

ದಿ ಗ್ರೇಟ್ ರೆಜಲರ್ ಹೆವ್ವೀವೆಯಿಟ್, ಫ್ರೀಸ್ಟೈಲ್, ಬಾಕ್ಸರ್ಸ್, ಮಿಸ್ಟರ್ ಕಾನ್ ಕಿಂಗ್ ವುಲ್ಲಾಭಕ್ಸ್ ಇವು

**ಪರಂಪರೆಯ ಜೀವಂತಿಕೆಯಿಂದ ಕೂಡಿ ಪರಂಪರೆಯಲ್ಲಿ ಆಳವಾಗಿ ಬೇರು ಬಿಟ್ಟ ಗೌಡ ಜನಾಂಗದ ವೃಕ್ಷ ಹೆಮ್ಮರವೇ ಸರಿ - ಎನ್ ಲಲಿತ**

ಬೊಂಬಾಯಿ ಕಡೇಂದ ಬಂದ ಚಾಂಪಿಯನ್ಸ್‌ಗಡ. ಇದರ ನೋಡಿಕೆ ಹೆದ್ರಿಕೆ ಆಗುವತರ ಡ್ರೆಸ್‌ನ ಹಾಕೊಂಡಿದ್ದೊ. ಮುಖಕ್ಕೆ ನಮ್ಮ ಮಲೆಯರ್‌ಗ ಬಣ್ಣ ಬರ್ದಂಗೆ ವಿಚಿತ್ರ ಆಗಿ ಬಣ್ಣ ಬರ್ದ್‌ಕಂಡಿದ್ದೊ. ಇವರ ರೂಪ, ಆಕಾರ ರಾಕ್ಷಸರಂಗೆ ಭಯಂಕರ ಆಗಿ ಕಾಣ್‌ತಿತ್ತ್. ಈ ಜೋಡಿ ರಿಂಗ್ ಒಳಗೆ ಬಾಕಾಕನ ಅಲ್ಲಿ ಸೇರಿದ್ದ ಎಲ್ಲಾ ಜನ ಜೋರಾಗಿ ಶಿಳ್ಳೆಹೊಡ್ದ್ ಕೇಕೆ ಹಾಕಿ ತಮ್ಮ ತಮ್ಮ ಖಾತರನ ತೋರ್ಸಿದೊ. ಕೆಲವು ಹುಡುಗರ್ ಒಂದ್ ತರದ ಶೋಖಗೀತೆನ ಹಾಡಿಕೆ ಶುರುಮಾಡ್ದೊ. ರಾಜು ಇವರ ಬಾರೀಗಾತ್ರದ ಮೈಕಟ್ಟ್ ನೋಡಿ ಆಶ್ಚರ್ಯ ಪಟ್ಟಕಂಡತ್. ಕೊಬ್ಬಿದ ಆನೆಮರಿಗಳಂಗೆ ಇವರ ಒಬ್ಬೊಬ್ಬರ ತೂಕ 150kg. ಭಾರ ಇರ್ದು. ಇವರ ಕೈಗೆ ಹ್ಯಾಂಡ್ ಗ್ಲೌಸ್, ಕಾಲಿಗೆ ಬದ್ರವಾದ ಆಟದ ಶೂವ್‌ಗಳ ಹಾಕೊಂಡಿದ್ದೊ. ರಿಫ್ರಿ ಬಂದ್ ಇವರ ಕೈ ಜೋಡಿಸಿಕಾಕನ ಗಂಟೆ ಬಾರಿಸಿದೊ.

ಇವು ಯಾವುದೊ ಹಳೇಸಿಟ್ಟ್ ಇತ್‌ಕಂಡದೆ ದುರುಗುಟ್ಟಿ ನೋಡಿಕಂಡ್ ಹೊಡ್ದ್‌ಸಾಯಿಸಿ ಬುಡುವರಂಗೆ ಹಲ್ಲ್ ಕಚ್ಚ್‌ತಿದ್ದೊ. ಕಾನ್‌ಕಿಂಗ್ ಸಮಯ ನೋಡಿ ವುಲ್ಲಾಬಕ್ಸ್‌ನ ದವಡೆ ತಿರುಗಿ ಹೋಗುವಂಗೆ ಒಂದ್ ಹೊಡ್ತ್ ಅಂವನ ಬಾಯಿಂದ ಎರಡ್ ಹಲ್ಲ್ ಕಳಕ್ತ್ತೇಳಿ ಹಾರಿಬೀತ್, ವುಲ್ಲಾ ಬಕ್ಷ್ ಇಂವನ ಎಡಗೈನ ಹಿಡ್ದ್ ತಿರುಗಿಸಿ ಬೆನ್ನ್ ಹಿಂದಕ್ಕೆ ಮೊಡಚಿ ಹಿಡ್ದ್ ಬೊಗ್ಗಿಸಿ ಕಂಡ್ ಕೈಪಾರೆಗೆ ಮೊಣಕೈಯಿಂದ ಒಂದೇ ಸಮನೆ ಗುದ್ದಿತ್. ಆಗ ಅಂವನ ಎಡದ ಕೈ ಪಾರೆ ತೊಪ್ಪಿಹೋಗಿ ಕೈ ಬಲ ಇಲ್ಲದಂಗೆ ಆತ್. ಆಗ ಕಾನ್‌ಕಿಂಗ್ ವುಲ್ಲಾಬಕ್ಷ್‌ನ ಬಲಕೈನ ಎಳ್ದ್ ಹಿಡ್ದ್, ಮೂರು ಬೆರಳ್‌ಗಳ ಬಾಯಿಗೆ ಹಾಕಂಡ್ ಕೋಳಿಕಾಲ್‌ನ ಅಗ್‌ದ್ ಚೀಪಿದಂಗೆ ಪುಡಿಪುಡಿ ಮಾಡಿ ಬುಡ್ತ್, ಆಗ ಇಂವ ಕಾನ್‌ಕಿಂಗ್‌ನ ಬಲದ ಕೈನ ಹಿಡ್ದ್ ಬೆನ್ನ್ ಹಿಂದಕ್ಕೆ ತಿರುಗಿಸಿ ಕೆಳಗೆ ಬೊಗ್ಗಿಸಿ ಒಂದೇ ಸಮನೆ ಅವನ ಕೈ ಕಿತ್ತ್ ಹೋಗುವಂಗೆ ಒದ್ದತ್. ಈಗ ಕಾನ್‌ಕಿಂಗ್‌ನ ಎರಡೂಕೈಗ ಬಲ ಇಲ್ಲದೆ ಜೋತಾಡಿಕೆ ಶುರ್‌ಆತ್. ಹಂಗಾಗಿ ಈಗ ಇಂವ ತಲೇಲಿ ಡಿಕ್ಕಿ ಹೊಡ್ತ್. ಅದರ ತಪ್ಪಿಸಿಕಂಡ್ ಕೆಳಗೆ ಬೊಗ್ಗಿ ಕಾಲಿಗೆ ಕತ್ರಿಹಾಕಿ ಬೀಳ್ಸಿ ಬುಟ್ಟತ್, ಅಂವನ ಕೈಲಿ ಅಷ್ಟ್ ಶಕ್ತಿ ಇಲ್ಲದರಂದ ಇಂವ ಎರಡೂ ಕಾಲುಗಳ ಮೇಲಕ್ಕೆ ಎತ್ತದಂಗೆ ಅಂಗಾತ ಹಿಡ್ಕಂಡತ್. ರೆಫ್ರಿಬಂದ್ ವುಲ್ಲಾ ಬಕ್ಷ್ ಗೆದ್ದು ಬುಡ್ತ್ ತಾ ಅಂವನ ಕೈನ ಹಿಡ್ದ್ ಮೇಲಕ್ಕೆ ಎತ್ತಿ ಜಯ ಘೋಷಿಸಿದೋ, ಕುದ್ದಿದ್ದ ಎಲ್ಲಾ ಜನ ಕಾತುರಲಿ ಈ ದೊಡ್ಡ ಜೊತೆ ಕುಸ್ತಿನ ಚೆನ್ನಾಗಿ ನೋಡಕ್‌ತಾ ಇದ್ದವಕೆ ನಿರಾಸೆ ಆಗಿ ಹೋತ್.

ಪ್ರೇಕ್ಷಕರಲ್ಲಿ ಗುಲ್ಲೆದ್ದತ್. ಇದ್ ಸರಿ ಇಲ್ಲೆ ಅಂವ ನಿಯಮನ ಉಲ್ಲಂಘನೆ ಮಾಡಿಟ್ಟು ತಾ ಕಿರುಚಾಡಿಕೆ ಶುರು ಮಾಡ್ದೊ. ಕುದ್ದಿದ ಕುರ್ಚಿಗೆಲ್ಲಾ ಚೆಲ್ಲಾಪಿಲ್ಲಿ ಆಗಿ ಹಾರಾಡಿಕೆ ಶುರುಆತ್. ಗಲಾಟೆ ಜೋರ್ ಆಕಾಕನ ಕಮೀಷನರ್ ಕೆಂಪಯ್ಯನವು ಮೈಕ್‌ಲಿ ಜೋರಾಗಿ ಹೇಳ್ದೊ, ಜನ ಎಲ್ಲಾ ಶಾಂತಿಲಿ ಇರೋಕು ಇದರ ತೀರ್ಪುನ ನಾವು ಪುನಃ ಪರಿಶೀಲಿಸಿವೆತಾ. ಇದರ ನೋಡ್ದ ವುಲ್ಲಾ ಬಕ್ಷ್ ಪುನಃ ಮೈಕ್ ಹಿಡ್‌ಕಂಕಡ್ ಅಖಾಡಲಿ ಕಿರುಚಿ ಹೇಳ್ತ್ ನಾನು ಈ ಪಂದ್ಯಲಿ ಜಯಶೀಲನಾದು ನಿಮಗಳಿಗೆ ಇಷ್ಟ ಇಲ್ಲದೆ, ಅಥವಾ ಸರಿಕಾಣದೇ ಇದ್ದರೆ, ಪುನಃ ನಿಮ್ಮಲ್ಲಿ ಯಾರಾದ್ರೂ ಒಬ್ಬ ನನ್ನ ಮೇಲೆ ಕುಸ್ತಿ ಆಡಲಿ ನನ್ನ ಮೇಲೆ ಯಾವುದೇ ರೀತಿಯ ಕುಸ್ತಿ ಆಗಲೀ, ಅಥವಾ ಫ್ರೀ ಸ್ಟೈಲ್ ಬಾಕ್ಸಿಂಗ್ ಆಗಲೀ ನನ್ನ ಸೋಲಿಸವು ಇದ್ರೆ ಈ ಅಖಾಡಲಿ ನನ್ನ ಮುಂದೆ ಬರಲಿ ನಾನ್ ಈ ಕುಸ್ತಿಲಿ ಗೆದ್ದ ಅರ್ಧ ಭಾಗದ ಹಣನ ಕೊಟ್ಟುಬುಟ್ಟನೆ, ಸುಮ್ಮನೆ ನೀವು ಹಿಂಗೆ ಕಿರುಚಾಡುದರಂದ ಅರ್ಥಇಲ್ಲೆ, ಹಾಂ ಬನ್ನಿ ನಿಮ್ಮಲ್ಲಿ ಯಾರಿಗೂ ತಾಕತ್ ಇಲ್ಲದೇ ಇದ್ರೆ ಹಿಂಗೆ ಸುಮ್ಮನೆ ಕಿರುಚಾಡುದರ ನಿಲ್ಸಿತ ಹೂಂ ಕರಿಸಿ ಕಂಡ್ ಜೋರಾಗಿ ಸವಾಲ್ ಹಾಕಿತ್. ಕೆಟ್ಟದಾಗಿ ನಗೆ ಆಡಿಕಂಡ್ ನಂಗೆ ಗೊತ್ತುಟ್ಟು, ಅಂತ ಒಬ್ಬ ಗಂಡ್‌ಸ್ನ್‌ಗ ನಿಮ್ಮಲ್ಲಿ ಯಾರೂ ಇಲ್ಲೆತಾ ಹೇಳಿ ಹಂಗ್‌ಸಿತ್. ಆಗ ಅಲ್ಲಿ ಕಿರುಚಾಡುತ್ತಿದ್ದ ಜನರ ಬಾಯಿ ಒಮ್ಮೆಗೆ ಮುಚ್ಚಿಹೋತ್. ಯಾವುದೋ ಊರ್‌ಂದ ಬಂದ ಈ ಪೈಲ್‌ವಾನ್ ನಮ್ಮ ಊರುಲಿ ಇಂವನ ಸೊಕ್ಕು ಮುರಿಯು ಗಂಡಸ್‌ಗ ಯಾರೂ ಇಲ್ಯಾ? ಥೂ. ಯಾವತರ ನಮ್ಮನ ಇಂವ ಅವಮಾನ ಮಾಡಿಬುಡ್ತ್‌ತಾ ಮುಖ ಮುಖ ನೋಡಿ ಕಂಬೋತ್ತಿದ್ದೊ, ಇದ್ ನಮ್ಮ ನಾಡ್‌ನ ಮರ್ಯಾದೆಯ ಪ್ರಶ್ನೆ ಆಗಿ ಹೋತಲ್ಲಾತಾ ಕೆಲವು ಜನಿಕೆ ಸಿಟ್ಟ್‌ಬಂದ್ ಕುದಿಯುತ್ತಿದ್ದೊ. ಈ ಮಾತ್‌ನ ಕೇಳ್ದ ನಮ್ಮ ರಾಜುಗೆ ಮಾತ್ರ ಸಿಟ್ಟ್ ನೆತ್ತಿಗೆ ಏರಿ ಬುಡ್ತ್ ಕಲ್ಲೋೕಕು ಇಂವಂಗೆ ಇಂವನ ಸೊಕ್ಕ್‌ನ್ ನಾನ್ ಮುರ್ದನೆ ತ್ತಾ ಗ್ಯಾನಮಾಡಿಕಂಡ್ ಮೈಮೇಲೆ ಆವೇಶ ಬಂದವರಂಗೆ ಮೆಲ್ಲಂಗೆ ಸ್ಟೇಜ್ ಕಡೆಗೆ ಹೆಜ್ಜೆಹಾಕಿತ್. ಸ್ಟೇಜ್ ಮ್ಯಾಲೆ ನಿಂತಂವ ಮೆಲ್ಲಂಗೆ ಒಂದೊಂದೇ ಶರಟ್ ಬಟನ್ಸ್‌ಗಳ ಬಿಚ್ಚಿತ್. ಅಷ್ಟೊತ್ತಿಗೆ ಅಲ್ಲಿಯ ವ್ಯವಸ್ಥಾಪಕ ಓಡಿಬಂದೋ. ಜನರ ಮುಂದೆ ಕ್ಷಮೆ ಕೇಳುತ್ತಾ ಎಲ್ಲವೂ ಸ್ವಲ್ಪ ಸಮಧಾನಲಿ ಈ ಸೋಲು ಗೆಲುವುನ ದಯವಿಟ್ಟು ನೋಡೋಕು. ನಮ್ಮ ಊರ್‌ನವನೇ ಆದ ಈ ಕುಮಾರ ಹೈದ ಇಂವನ ಚಾಲೆಂಜ್‌ನ ಸ್ವೀಕಾರ ಮಾಡಿಕೆ ನಿಮ್ಮೆಲ್ಲರ ಮುಂದೆ ಬಂದ್ ನಿಂತುಟ್ಟು ತಾ ಹೇಳಿ ರಾಜುಗೆ ನೀ ಹೆದ್ರ್ ಬೇಡ್ರ. ನಮ್ಮ ಮರ್ಯಾದೆನೊಮ್ಮೆ ಕಾಪಡ್. ಶ್ರೀ ಚಾಮುಂಡಮ್ಮನ ಬೆಂಬಲ ನಿಂಗೆ ಉಟ್ಟತ್ತೇಳಿ ಬೆನ್ ತಟ್ಟಿ ಹೋದೊ. ಆಗ ವುಲ್ಲಾ ಬಕ್ಷ್ ಜೋರಾಗಿ ಕೇಕೆ ಹಾಕಂಡ್ ನೆಗೆ ಆಡಿಕೆ ಶುರುಮಾಡ್ತ್. ಇಷ್ಟ್‌ಸಣ್ಣ ಬಚ್ಚಾ ಒಂದೂ ಹಲ್ಲ್‌ಗ ಉಳಿಯಕ್ಕಿಲ್ಲೇ ಹೇ ಹೋಗ್‌ರ ನೀನ್ ನನ್ನ ಕೈಲಿ ಗುದ್ದ್‌ತಿಂದ್ ಗೊಟಕ್ ಆಗ್ ಬ್ಯಾಡ ತ್ತೇಳ್ತ್.

ಆಗ ರಾಜು ಸೇರ್ದ ಜನಿಕ್ಕೆ ಒಂದ್ ರೌಂಡ್ ಹೊಡ್ದ್ ನಮಸ್ಕರಿಸಿತ್. ತನ್ನಗುರುನ ಮನ್ಸ್‌ಲೇ ಗೇನ ಮಾಡಿಕಂಡ್ ಅಖಾಡದ ಒಂದ್ ಹಿಡಿಮಣ್ಣ್‌ನ ಹಣೆಗೆ ಒತ್ತಿಕಂಡತ್ ನಾಲ್ಕ್ ಬಸಿಕೆ ಹೊಡ್ದ್, ಒಂದ್ ಮಂಗನ ಲಾಗ ಹಾಕಿತ್, ಒಮ್ಮೆ ಉಸ್‌ರ್‌ನ ಬಿಗಿಹಿಡ್ದ್ ಬಿಟ್ಟತ್. ಒಳ್ಳೆ ಸ್ಟೀಲ್ ಬಾಡಿ ಕಡ್ಡಿ ಪೈಲ್‌ವಾನ್‌ನ ಬಾಡಿ ಹೋಗಿ ಈಗ ಬುಜದ ಮತ್ತೆ ಎದೆದ್ ಕಟ್ಸ್‌ಗ ನಿಮಿರಿ ನಿಂತು ಬುಟ್ಟೊ. ಒಳ್ಳೆ ಹಾವುಮರಿನ ತರ ಇಂವನ ಶರೀರ ಈಗ ಕೆಂಪಿಗೆ ಮಿಂಚುತಾ ಉಟ್ಟು. ಅಬ್ಬಾ!! ಯಾವುದೇ ಬ್ಯೂಟಿ ಕ್ವೀನ್ ಗೂಡೆ ಇವನ ಮೈ ಕಟ್ಸ್‌ನ ನೋಡಿಕೆ ಆಶೆ ಆಗಿ ಮನಸೋತ್

ಚಿತ್ತಭ್ರಮಣೆ ಹಿಡ್ದ್‌ಹೋಗುವ್ರೊ. ಈ ಗಡ್‌ಸಾದ ಮಸಲ್ಸ್‌ಗಳ ನೋಡ್ದ ವುಲ್ಲಾ ಬಕ್ಸ್‌ಗೆ ಆಶ್ಚರ್ಯ ಆಗಿ ಹೋಗಿ ಅವನ ಮನ್ಸ್‌ಲಿ ಒಂದ್ ಅಧೈರ್ಯದ ಸಂಶಯ ಎದೆಗೆ ಹುಕ್ಕಿ ಬುಡ್ತ್.

ರೆಫ್ರಿ ಬಂದ್ ಇಬ್ಬರ ಕೈನ ಹಿಡ್ದ್ ಜೋಡಿಸಿದೊ. ಆಗ ವುಲ್ಲಾ ಬಕ್ಷ್ ಇದ್ದಕ್ಕಿದ್ದಂಗೆ ರಾಜುನ ಮೇಲೆ ಹಾರೇ ಬುಡ್ತ್. ಇದನ್ನೇ ಕಾಯುತ್ತಿದ್ದ ರಾಜು ಚಕ್ಕತ ಸೈಡಿಗೆ ಹಾರಿ ಅವನ ಕಾಲಿಗೆ ಕತ್ರಿಹಾಕಿ ಒದ್ದತ್. ಇಂವ ನುಗ್ಗಿದ ರಭಸಕ್ಕೆ ದುಂಡುಕುತ್ತಿ ಕೆಳಗೆ ಬಿದ್ದ್ ಮೊಣ್‌ನ ತಿಂದ್‌ಕಂಡ ಮೇಲೆ ಎದ್ದತ್. ಒಟ್ಟಿಗೆ ರಾಜುನ ಮುಷ್ಠಿ ಮೂಗು ಮಧ್ಯಕ್ಕೆ ಬೀತ್ ಅಂವನ ಮೂಗು ಅಪ್ಪಚಿ ಆತ್. ಕಣ್ಣೊಳಗೆಲ್ಲಾ ಹೊಡಿಮೊಣ್ಣು ನುಗ್ಗಿತ್.

ಅಂವ ಕಣ್ಣ್‌ನ ಉಜ್ಜಿಕಂಡ್ ತಲೆಲಿ ಡಿಕ್ಕಿಹೊಡ್ತ್. ಆಗ ರಾಜು ಸ್ಪ್ರಿಂಗ್‌ನಂಗೆ ಮೇಲಕ್ಕೆ ಹಾರಿ ಸೊಂಯ್‌ತ ಬಲಕಾಲನ ಬೀಸಿ ಬುಟ್ಟತ್. ಅದ್ ಅಂವನ ಕೆಮಿ ಚೆಂಡೆಗೆ ಕಿವಿಪಕ್ಕದ ಹೊಟ್ಟ್‌ಕೆನ್ನೆಗೆ ಏಟ್ ಬಿದ್ದರಂದ ಅಂವ ತಲೆ ಚಕ್ಕರ್ ಹೊಡ್ದ್ ಕಿರುಚಾಡಿಕಂಡ್, ಎದುರಾಳಿ ಎಲ್ಲಿ ಉಟ್ಟತಾ ಹುಡ್‌ಕಾಡಿಕಂಡ್ ಓಡಾಡಿಸಿಕಂಡ್ ಹಿಡ್ಕಂಡತ್. ಹಂಗೇ ರಾಜುನ ಹುಲ್ಲ್‌ಕಂತೆನ ಎತ್ತುವಂಗೆ ಸಲೀಸಾಗಿ ಮೇಲೆ ಎತ್ತಿ ತಿರುಗಿಸಿ ತಿರುಗಿಸಿ ನೆಲಕ್ಕೆ ಅವನ ತಲೆನ ಕುತ್ತಿಕೆ ನೋಡ್ತ್. ಆಗ ರಾಜು ಅವನ ಕುತ್ತಿಗೆ ಕಾಲ್‌ಲಿ ಕತ್ರಿಹಾಕಿ ಹಿಡ್ಕಂಡತ್. ಇಬ್ಬರೂ ಒಟ್ಟಿಗೆ ಕೆಳಗೆ ಬಿದ್ರೊ. ಬೀಳಿಕಾಕನ ರಾಜು ಮೊಣಕೈನ ಸರಿಯಾಗಿ ಅವನ ಎದೆಗೆ ಹಿಡ್ಕಂಡತ್. ಅವನ ಮೈಭಾರಕ್ಕೆ ಸರಿಯಾಗಿ ಇವನ ಮೂಳೆ ಕೈನಾಟಿತ್. ವುಲ್ಲಾಬಕ್ಷ್‌ಗೆ ಕಣ್ಣ್‌ತಿರುಗಿ ಹೋಗಿ ಉಸಿರೂ ಕಟ್ಟಿಹೋತ್. ಒಂದ್ ಕ್ಷಣ ಕಾಲು ನೀಡಿ ಅಂಗಾತ ಬಿದ್ದ್ ಹೋತ್. ರಾಜು ತಡಮಾಡದೆ ಉಡುಂಬು ಬೆಕ್ಕ್‌ನಂಗೆ ಅವನ ಎರಡೂ ಕೈನ ಸುತ್ತಿ ಹಿಡ್ದ್ ಅವನ ಕುತ್ತಿಗೆ ಮೇಲೆ ಕುದ್ದ್ ಬುಡ್ತ್. ರೆಫ್ರಿ ಕೂಡ್ಲೆ ಓಡಿ ಬಂದ್ Mr. ರಾಜುನ ತಬ್ಬಿಹಿಡ್ಕಂಡ್ ಖುಷೀಂದ Win, Win, ತಾ ಹೇಳಿಕಂಡ್ ರಾಜುನ ಕೈನ ಎತ್ತಿ ಹಿಡ್ರೊ. ಕೇವಲ ಒಂದು ಕಾಲು ನಿಮಿಷದ ಆಟ. ಭಾರಿ ದೊಡ್ಡ ಚಾಂಪಿಯನ್ ಭಾರಿ ತೂಕದ ಮನುಷ್ಯ ಇನ್ನೂ ಮೇಲಕ್ಕೆ ಎದ್ದತಿಲ್ಲೆ. ಅಲ್ಲಿ ಸೇರ್ದ ಜನಕ್ಕೆ ಉಸಿರ್ ಹಿಡ್ಕಂಡ್ ನೋಡು ತಿದ್ದವು ಒಮ್ಮೆಗೆ ಅಬ್ಬಾ ಭೇಷ್ ಭೇಷ್ ತ್ತಾ ಕಿರುಚಾಡಿಕಂಡ್ ಜೋರಾಗಿ ಚಪ್ಪಾಳೆ ತಟ್ಟಿಕೆ ಶುರುಮಾಡ್ರೊ. ಅಬ್ಬಾ ಏನ್ ಚಮತ್ಕಾರ ಏನ್ ತಾಕತ್ತ್ ಒಂದೇ ನಿಮ್ಸಿದಲ್ಲಿ ನಮ್ಮಂವ ಮಲ್ಗಸಿ ಬುಟ್ಟತಲ್ಲಾ! ಅಂಥಾ ಫೈಲ್‌ವಾನ!! ಯಾರ್ರೋ ಆ ಹುಡಗಾ!! ಎಲ್ಲಿಯವನು ಆ ಹುಡುಗ ತಾ ಕೇಳಿಕಂಡ್ ಖುಷೀಲಿ ಕುದ್ದಿದ್ದ ಜನ ಎಲ್ಲಾ ಎದ್ದ್‌ಹೋಗಿ ಅವನ ಅಭಿನಂದಿಸಿಕೆ ಮುತ್ತಿಕಂಡೊ.

ಇದರ ಮಧ್ಯೆ ವುಲ್ಲಾಬಕ್ಷ್‌ನ ಕಡೇವು ರೇಗಾಡಿಕೆ ಶುರುಮಾಡ್ರೊ. ಇಲ್ಲೇ ಇಲ್ಲೇ ಎಲ್ಲಾ ಮೋಸದ ಆಟನೇ ಅಂವ ಆಡ್ದ್. ಅವನ ನಾವು ಬುಡುಕಿಲ್ಲೆ ಅವನ ನಾವು ಉಳ್ಸಿಕಿಲ್ಲೆ ತಾ ಹಿಂದಿ' ಬಾಷೆಲಿ ಕಿರುಚಾಡಿಕಂಡ್ ನುಗ್ಗಿದೋ. ಈ ಜಯ ಘೋಷಣೆಗಳ ಮಧ್ಯೆ ಫೋಟೋ ಗ್ರಾಫರ್‌ಗ ಬೇರೆ ಹೋಗಿ ಫ್ಲಕ್ಕ, ಫ್ಲಕ್ಕಾ, ಕ್ಯಾಮರಲಿ ಕ್ಲಿಕ್ ಮಾಡಿಕಂಬೊತಿದ್ರೊ. ಪೋಲಿಸ್ ಕಮಿಷ್ನರ್ ಕೆಂಪಯ್ಯನವು ಗೆದ್ದವರೆಲ್ಲಾ ಒಂದು ಕಡೆಗೆ ಬೇಗ ಬೇಗ ಸೇರ್ಸಿದೊ ಗಲಾಟೆ ಹೆಚ್ಚಾಗುವ ಸೂಚನೆ ಕಂಡದರ್‌ಂದ ಗೆದ್ದವುಕೆಲ್ಲಾ ಬೇಗ ಬೇಗ ಬಹುಮಾನನ ವಿತರಣೆ ಮಾಡ್ರೊ. ಕೊನೆಗೆ ಮಿಸ್ಟರ್ ರಾಜುನ ವೇದಿಕೆಮೇಲೆ ಕರ್‍ಕೊಂಡು ಬಂದೊ ಕಮಿಷ್ನರ್ ಕೆಂಪಯ್ಯನವು ರಾಜುನ ತಬ್ಬಿ ಹಿಡ್ಕಂಡ್ ಕೊಂಡಾಡಿಕಂಡ್ ಇಂದ್‌ನ ಅತೀ ಕುತೂಹಲ ಕರವಾದ ಹೆವಿವೇಟ್ ಬಾಕ್ಷಿಂಗ್‌ಲಿ ತುಂಬಾ ಹೆಸರಾಂತ ಚಾಂಪಿಯನ್ ವುಲ್ಲಾಬಕ್ಸ್‌ನನ್ನು ನಿರಾಯಶವಾಗಿ ಸೋಲಿಸಿದ ನಮ್ಮ ನಾಡ್‌ನ ಈ Mr. ರಾಜು ಹುಡುಗ, ನಮ್ಮ ನಾಡ್ ಕೀರ್ತಿನ ಹೆಚ್ಚಿಸಿದ್ ಅಲ್ಲದೆ ನಮ್ಮವರ ಮಾನನ ಕಾಪಾಡಿದಂತಹ ಆಪ್‌ತ್ ಬಂಧು ಇವರಿಗೆ ಮೊದಲೇ ಹೇಳಿದಂಗೆ 20,000 ರೂಪಾಯಿ ಅಲ್ಲದೆ ನನ್ನ ವೈಯುಕ್ತಿಕವಾಗಿ ಒಂದು ಸಾವಿರ ರೂಪಾಯಿ ಬಹುಮಾನವನ್ನು ಕೊಡುತ್ತಾ ಒಳೆ. ಇವನ ಕೀರ್ತಿಗೆ ಇವನ ಧೈರ್ಯಕ್ಕೆ, ಆತ್ಮ ವಿಶ್ವಾಸಕ್ಕೆ ಈ ಬಹುಮಾನಂಗ ಎಲ್ಲಾ ಕಡಿಮೆ. ಆದುದರಿಂದ ಇಂವಂಗೆ ನಮ್ಮೆಲ್ಲರ ಪರವಾಗಿ ಮನಪೂರ್ವಕವಾಗಿ ಹರಸುತಾ ಒಳೊ. ಮುಂದಕ್ಕೂ ಇವರ ಕೀರ್ತಿ ಶಿಖರಕ್ಕೆ ಏರಲಿ ತಾ ಹಾರೈಸಿದೊ.

ರಾಜುಗೆ ಈ ಕುಸ್ತಿಲಿ ಮೈತುಂಬಾ ಏಟ್ ಬಿದ್ದುದ್ರಿಂದ ಅಲ್ಲದೆ ಕುತ್ತಿಗೆಗೆ, ತಲೆಗೆ ಮೂಗೇಟ್ ಬಿದ್ದ್‌ದರಿಂದ ಅಂವ ಸುಸ್ತ್ ಆದಂಗೆ ಕಾಂಬತಿತ್ತ್, ಈ ಸ್ಥಿತಿಲಿ ಇವನ ಇಲ್ಲಿಂದ ಅರ್ಜೆಂಟಾಗಿ ಹೊರಗೆ ದಾಟುಸಕ್ಕುತಾ ಗ್ಯಾನ ಮಾಡಿ ಎರಡು ಜನ ಪೋಲಿಸ್‌ನವರ ಕರದ್, ನೋಡಿ ಜೋಪಾನ ಆಗಿ ನಮ್ಮ ಈ ರಾಜುನ ಆಟೋದಲ್ಲಿ ಬಿ.ಯಂ. ಆಸ್ಪತ್ರೆಗೆ ಕರ್‍ಕೊಂಡು ಹೋಗಿ. ಹಾಂ ಬೇಗ ಬೇಗ ತಾ ಕಳ್ಸಿಕೊಟ್ಟತ್. ಪೋಲಿಸ್‌ನವರ ಎಸ್ಕಾರ್ಟ್‌ಲಿ ರಾಜು ಒಂದು ಆಟೋಹಿಡ್ದ್, ಹುಣಸೂರು ರಸ್ತೆಲಿ ಇರುವ ಬಿ.ಯಂ. ಆಸ್ಪತ್ರೆಗೆ ತಲಿಪಿದೊ. ಹೆಂಗೂ ರಾಜುಗೆ ಇಂದ್ ರಾತ್ರಿ ಉಳಕೊಂಬೋಕೆ ಜಾಗ ಬೇಕಾಗಿತಲ್ಲಾ. ಅಲ್ಲಿ ರಿಫಿಪ್ಸನ್ ಕೌಂಟರ್‌ಲಿ ಒಂದ್ ದಿನಕ್ಕೆ ಒಳ ರೋಗಿ ಆಗಿ ದಾಖಲಾತಿ ಬರ್ಸಿಕಂಡತ್. ಮತ್ತೆ ಸಹಾಯ ಮಾಡಿದ ಪೋಲಿಸ್‌ನವುಕೆ ನೂರರ ಒಂದ್ ನೋಟ್‌ನ ಕೊಟ್ಟ್ ಕಳ್ಸಿತ್. ಹಿಂಗಾಗಿ ಈ ರಸ್ತೆ ದರೋಡೆಲಿ ಸಿಕ್ಕಿಹಾಕಂಡಿದ್ದ ಮಿಸ್ಟರ್ ರಾಜುನ ಒಳ್ಳೆ ಪೋಟೊ ದೇವರಾಜ ಪೋಲಿಸ್ ಸ್ಟೇಶನ್‌ನವುಕ್ಕೆ ಸಿಕ್ಕಿಹಾಕಂಡತ್. ಈಗ ಈ ಮನುಷ್ಯನ ಮುಖ್ಯವಾದ ರಸ್ತೆ ದರೋಡೆ ಕೇಸಿಗೆ ಸಮ್ಮಂದ ಪಟ್ಟಂಗೆ ಬೇಕಾಗಿತ್. ಆದ್‌ರಂದ ಈಗ ಇವನ ಹುಡುಕಾಟಕ್ಕೆ ಇನ್ನೂ ಸ್ವಲ್ಪ ಒಳ್ಳೆದ್ ಆಗಿಹೋತ್.

ನಂಜನಗೂಡು ರಸ್ತೆಲಿ ಮಿಸ್ಟರ್ ರಾಜು ನಡ್‌ಕಂಡ್ ಸಿಗರೇಟ್ ಸೇದಿಕಂಡೇ ಹೊದಂವ ಸ್ವಲ್ಪ ಹೊತ್ತಿಗೆ ಅಲ್ಲೇ ಬಲಗಡೆ ಕಾಂಬತಿದ್ದ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಯವರ ಆಶ್ರಮದ ಒಳಗಡೆಗೆ ಹೋತ್. ಅಲ್ಲಿ ಅಂವ ನೋಡಿರೆ ಅಬ್ಬಬ್ಬಾ ದೇವಲೋಕಲಿ ದೇವ ಸಭೆ ಇದ್ದಂಗೆ ಬಹಳ ಭವ್ಯವಾದ ಸಭಾಂಗಣ. ಐದು ಸಾವಿರ ಭಕ್ತಾದಿಗ ಒಟ್ಟಿಗೆ ಕುದ್ದ್‌ಕಂಡ್

ದುಡ್ಡೇ ದೊಡ್ಡಪ್ಪ, ದುಡ್ಡ್‌ಗಿಂತ ಧೈರ್ಯವೇ ಅವನಪ್ಪ

ಪ್ರಾರ್ಥನೆ ಮಾಡಿಕ್ಕಾಗಲೀ ಪ್ರವಚನಕೇಳಿಕ್ಕಾಗಲಿ ಬಹಳ ನಿಶಬ್ದವಾದ ಮನಸ್ಸಿಗೆ ಶಾಂತಿ, ನೆಮ್ಮದಿ ಕೊಡುವಂತಹ ಆಹ್ಲಾದ ಕರವಾದ ವಾತಾವರಣ ಅಲ್ಲಿ ಇತ್ತ್. ಹಂಗಾಗಿ ಮಿಸ್ಟರ್ ರಾಜು ಅಲ್ಲೇ ನೆರದಿದ್ದ ಭಕ್ತರ ಜೊತೆಗೆ ತಾನೂ ಹೋಗಿ ಒಂದು ಬರಿಲಿ ಕುದ್ದ್ ಕಂಡತ್. ಅಲ್ಲಿ ಶ್ರೀ ಶ್ರೀ ಸಚ್ಚಿದಾನಂದ ಸ್ವಾಮಿಗೆ " ಮನುಷ್ಯನಿಗೆ ಬೇಕು ಬದುಕಲು ಆತ್ಮಬಲ, ಆತ್ಮಶ್ರದ್ಧೆ, ಆತ್ಮ ವಿಶ್ವಾಸ" ಎಂಬ ವಿಚಾರವಾಗಿ ಬಹಳ ವಿವರವಾಗಿ ವಿವರಿಸಿ ಹೇಳುತಿದ್ದೊ. ಇದರ ಮಿಸ್ಟರ್ ರಾಜು ಕೇಳುತಾ ಕುದ್ದವಂಗೆ ಸಮಯ ಕಳದದ್ದೇ ಗೊತ್ತಾತ್‌ಲೆ. ಅಲ್ಲಿಂದ ಎದ್ದಂವ ಇನ್ನ್ ಮೈಸೂರು ಕಡೆಗೆ ಮೊಖನ ಹಾಕಿಕಾದ್ ತಾ ಗ್ಯಾನ ಮಾಡಿ ನಂಜನ ಗೂಡಿಗೆ ಹೋಗಿ ಸೇರಿಕಂಡರೆ ಆದುತಾ ಹಂಗೆ ರಸ್ತೆಲಿ ನಡಿಯಕೆ ಸುರುಮಾಡ್ತ್.

(ಮುಂದ್‌ವರ್ದದೆ)

ಶಂಕರನ ಬಸಪ್ಪ

## ಗೌಡ ಸಮಾಜ ಬೆಳಗೋಕು (ಅರೆಭಾಷೆಯ ಕವನ)

ನಮ್ಮ ಗೌಡ ಸಮಾಜ ಬೆಳಗೋಕು
ನಾವೆಲ್ಲ ಒಗ್ಗಟ್ಟಲಿ ನಿತ್ಯ ಬಾಳೋಕು
ಚಿಲ್ಲರೆ ಜಗಳಗ ಇದ್ದರೆ ನೋಡಿ
ನಾವೇ ರಾಜಿಲಿ ತೀರಿಸಿಕೊಣೊಕು ||೧||
ಆರಕ್ಷಕ ಠಾಣೆಗೆ ದೂರು ಕೊಡ್ದು ಏಕೆ?
ನಮ್ಮ ಹಿರಿಯರ್‌ಲಿ ದೂರು ಕೊಡೊನೋ |
ಹಿರಿಯರ್ ಧೈರ್ಯಲಿ ಎದ್‌ರ್ ಬಂದ್‌ದ್
ಎರಡ್ ಭಾಗದವರ ನ್ಯಾಯ ವಿಚಾರ್‍ನೊಕು ||೨||
ಮಾಮೂಲಿ ದಾರಿಗಳ್ಗೆ ಅವಕಾಶ ಕೊಡಿಸಿ
ಅನಾವಶ್ಯಕ ಕೋರ್ಟಿಗೆ ಕುಣಿಯೋದು ಏಕೆ?
ಕೋರ್ಟಿನ ವ್ಯಾಜ್ಯಗಳ ಕಿರುಕುಳ ಏಕೆ?
ವ್ಯಾಜ್ಯದ ಸಾಲಲಿ, ಭೂಮಿನ ಮಾರ್‍ದೊ ||೩||
ವಿದ್ಯೆಗಳಿಸಿಕಂಡ್ ಬುದ್ಧಿವಂತರಾದರೆ
ಒಗ್ಗಟ್ಟಲಿ ಶಾಂತಿಲಿ ಬಾಳಿಕೆ ಒಳ್ಳೆದ್
ಮಕ್ಕಳಿಗೆಲ್ಲ ಒಳ್ಳೆ ಪರಿಸರ ಕಲ್ಪಿಸಿ
ಬೇಕಾದ ವಿದ್ಯೆನ ಕೊಡಿಸೋಕು ನಾವು ||೪||
ಆಗ ಬೆಳಗುದು ನಮ್ಮ ಸಮಾಜ
ದೇಶಲಿ ದೊರಕುದು ಹೆಚ್ಚಿನ ಗೌರವ
ಸಂಸ್ಕೃತ ಭಾಷೆನ ಕಲಿಯೋಕು ನಾವು
ನಮ್ಮ ವೈದಿಕ ಧರ್ಮದ ಜ್ಞಾನನ ಗಳಿಸೋಕು ||೫||
ರಾಮಾಯಣ ಮಹಾಭಾರತ ಕತೆಗಳ ಓದಿಸಿ
ಭಗವದ್ಗೀತೆ ಪವಿತ್ರ ಗ್ರಂಥನ ಪಠಿಸಿ
ಆಗ ನಾವುಗೆ ಜೀವನದ ತತ್ವಂಗ
ತಿಳ್ವದೆ ಮತ್ತೆ ಅನುಕೂಲ, ಪಡೆಯಕೆ ಮೋಕ್ಷ ||೬||

ಮಂಡೆಕೋಲು ಗಂಗಾಧರ ಗೌಡ, ಸುಳ್ಯ,

## ಒಡ್ಪ ಕಥೆ

1. ಗಾಳಿ ಕುಡ್ದ್ ಬದ್ಕಿದೆ. ನೀರ್ ಕುಡ್ದ್ ಸತ್ತದೆ. ಅದ್ ಎಂಥದ್? (ಬೆಂಕಿ)
2. ಮಳೆಗೆ ಅರ್‍ಳಿದೆ ಬಿಸ್ಲಿಗೂ ಅರ್‍ಳಿದೆ ಎಂಥದ್ (ಕೊಡೆ)
3. ರೂಪ ಇಲ್ಲೆ, ಗುಣ ಇಲ್ಲೆ, ರುಚಿಸ ಇಲ್ಲೆ ಇದಿಲ್ಲದೆ ಗತಿ ಇಲ್ಲೆ (ನೀರ್)
4. ಬಿಳಿ ಕುದ್‌ರೆಗೆ ಹಸ್‌ರ್ ಬಾಲ (ಮೂಲಂಗಿ)
5. ಅಂಗ್‌ಡಿಲಿ ಮಾರ್‍ದ್ಲೇ ತಕ್ಕಡಿಲಿ ತೂಗ್ದುಲೇ ಅದೆಂತಾ? (ಸೆಗಣಿ)
6. ಎರ್ಡ್ ಮನೆಗೆ ಒಂದೇ ಗೂಡ್ ಅದೆಂತಾ (ಮೂಗ್)
7. ಅಟ್ಟದ ಮೇಲೆ ಪುಟ್ಟಲಕ್ಷ್ಮಿ ಅದೆಂತಾ? (ಬೊಟ್ಟು)
8. ಮನೆ ಒಳಗೆ ಸತ್ತರೆ ಹೊರಗೆ ವಾಸನೆ ಅದ್ ಎಂಥ? (ಹಲಸಿನ ಹಣ್ಣ್)
9. ಮುಳ್ಳ್ ಮುಳ್ಳ್ ಮರಲಿ ಮುತ್ತ್ ಮುತ್ತ್ ಕಾಯಿ (ನಿಂಬೆ ಹಣ್ಣ್)
10. ಪಟ್ಟಿ ಪಟ್ಟಿ ಕಾಯಿ ಪರಿಮಳದ ಕಾಯಿ (ಏಲಕ್ಕಿ)

ಅಚ್ಚಲ್ಪಾಡಿ ಬೀನ ಗೋಪಾಲ, ಮಡಿಕೇರಿ

## ನಗೆಹನಿ

ಒಂದ್ ಸಲ ಎಸ್. ಎಸ್. ಎಲ್. ಸಿ. ಸಮಾಜ ಪರೀಕ್ಷೆ ನಡೀತಿತ್ತ್. ಆಗ ಪ್ರಶ್ನೆ ಪತ್ರಿಕೆಲಿ, "ಭಾರತದ ಎರಡ್ ಮುಖ್ಯ ಕಂಪೆನಿಗ ಯಾವುದ್?" ತ ಒಂದ್ ಪ್ರಶ್ನೆ ಇತ್ತ್.

ಉತ್ತರ ಬರೀತಿದ್ದ ಒಬ್ಬಂಗೆ ಈ ಪ್ರಶ್ನೆಗೆ ಉತ್ತರ ಗೊತ್ತಿತ್ಲೆ. ಅದ್ಕೆ ಅಂವ, ಅವನ ಮುಂದೆ ಕುದ್ದಿದ್ದವನ ಹತ್ರ ಈ ಪ್ರಶ್ನೆಗೆ ಉತ್ತರ ಕೇಳ್ದೆ. ಅಂವ ಬೇಗ ಪರೀಕ್ಷೆ ಮುಗ್‌ಸಿ ಹೊರಗೆ ಹೋಕಾಕನ "ಟಾಟಾ", "ಬರ್ಲಾ" ತೇಳಿ ಹೋದೆ.

ಅಂದರೆ ಆ ಪ್ರಶ್ನೆಗೆ ನಿಜವಾದ ಉತ್ತರ "ಟಾಟಾ ಕಂಪೆನಿ" ಮತ್ತೆ "ಬಿರ್ಲಾ ಕಂಪೆನಿ" ಆಗಿತ್ತ್

ಯಾಲದಾಳು ಚಂದ್ರಕಲಾ, ಮಡಿಕೇರಿ.

ಡಾಕ್ಟರ್ : ಏನಾಗಿದೆಯಪ್ಪ ನಿನಗೆ?
ರೋಗಿ : ಕೆಮ್ಮಿದ್ರೆ ಎದೆ ನೋಯ್ತದೆ ಸಾರ್,
ಡಾಕ್ಟರ್ : ಕೆಮ್ಮಿದ್ರೆ ಎದೆ ನೋಯುತ್ತಾ?
ರೋಗಿ : ಹೌದು ಸಾರ್
ಡಾಕ್ಟರ್ : ಹಾಗಾದ್ರೆ ಕೆಮ್ಮಲೆ ಬ್ಯಾಡ

ರಾಮಪ್ಪ : ನನ್ನ ಮಗ ಫಸ್ಟ್‌ಕ್ಲಾಸ್‌ನಲ್ಲಿ ಬಂದ ಮಲ್ಲಪ್ಪನವರೇ
ಮಲ್ಲಪ್ಪ : ಬಹಳ ಸಂತೋಷ ಯಾವುದರಲ್ಲಿ?
ರಾಮಪ್ಪ : ರೈಲ್‌ನಲ್ಲಿ ಸ್ವಾಮಿ.

ಹುಲಿಮನೆ ರಮೇಶ್, ಮೈಸೂರು

ಟೈಲರ್ : ನಿನ್ನ ಬಟ್ಟೆ ಹೊಲ್ದ್‌ವುಟು
ಹೈದ : ಇಗಳೆ ತಕೊಂಡರೆ, ತಕೊಂಡೊದರೆ ಬ್ಯಾಗ ಹಾಕಿ ಹರ್ದೊದೆ.

ದೇರಜಿರ ಕು. ಪುಷ್ಪಾವತಿ, ಮುತ್ತಾರ್ಮುಡಿ

ದೊಡ್ಡವರ ಹೆಂಡತಿ ಎಲ್ಲರಿಗೂ ಅತ್ತೆ

# ವ್ಯಕ್ತಿ ಪರಿಚಯ :



**ಪೊಕ್ಕುಲಂಡ್ರ ಕೆ. ಸುಬ್ಬಯ್ಯನವರು**

ಶ್ರೀ ಪೊಕ್ಕುಲಂಡ್ರ ಸುಬ್ಬಯ್ಯನವರು ವಿರಾಜಪೇಟೆ ತಾಲೂಕಿನ ಕೆದಮುಳ್ಳೂರು ಗ್ರಾಮದ ದಿ. ಪೊಕ್ಕುಲಂಡ್ರ ಕಾರ್ಯಪ್ಪ ದಂಪತಿಗಳ 3ನೇ ಮಗನಾಗಿ 2-9-1930ರಲ್ಲಿ ಜನಿಸಿದರು. ಮೂಲತಃ ಇವರು ಪುತ್ತೂರು ತಾಲೂಕಿನ ಕೆಮ್ಮಾರ ಮನೆತನದವರು. ಇವರು ತಮ್ಮ ವಿದ್ಯಾಭ್ಯಾಸವನ್ನು ವಿರಾಜಪೇಟೆ ಹೈಸ್ಕೂಲಿನಲ್ಲಿ ಮಾಡಿದರು.

1953ನೇ ಇಸವಿಯಲ್ಲಿ ಅಂದಿನ ಕೊಡಗು ಸರಕಾರದ ಲೋಕ ಸೇವಾ ಇಲಾಖೆಯಲ್ಲಿ ನೌಕರಿಗೆ ಸೇರಿದರು. 1956ರಲ್ಲಿ ಕೊಡಗು ಮೈಸೂರು ಸರ್ಕಾರದ ಆಡಳಿತಕ್ಕೊಳಪಟ್ಟಾಗ ಕರ್ನಾಟಕ ಸರಕಾರದ ನೌಕರರೆಂದು ಪರಿಗಣಿಸಲ್ಪಟ್ಟು ನಂತರ 33 ವರ್ಷ ಲೋಕೋಪಯೋಗಿ ಇಲಾಖೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸಿ ನಿವೃತ್ತರಾದರು. ನೌರಿಯೊಂದಿಗೆ ಸಮಾಜ ಸೇವೆ ಕಾರ್ಯದಲ್ಲಿ ತನ್ನನ್ನು ತಾನೇ ತ್ಯಾಗಿಸಿಕೊಂಡು ಭಾಗಿಯಾಗುವ ಉತ್ಸಾಹವನ್ನು ತಮ್ಮ ಯವ್ವನದಲ್ಲಿಯೇ ರೂಢಿಸಿಕೊಂಡರು. ಜಾತಿ ಭೇದವಿಲ್ಲದೆ ತಮ್ಮ ಕೈಲಾದ ಸಹಾಯವನ್ನು ಮಾಡುವ ಸರಳ ಸ್ವಭಾವ ಇವರದು. ಹಂಚಿ ಉಂಡರೆ ಹಸಿವೆ ಇಲ್ಲವೆನ್ನುವ ವಾದ ಇವರದು. ಯಾವುದೆ ಕೆಲಸವನ್ನು ಕೈಗೆತ್ತಿಕೊಂಡರೂ ನೇರ ಧುಮುಕಿ ಪ್ರವಾಹಕ್ಕೆ ಎದುರಾಗಿಯಾದರೂ ಈಜುವ ಹವ್ಯಾಸ, ಗಾಢ ಚಿಂತನೆ, ಗಂಭೀರ ಪ್ರವೃತ್ತಿ ಇವರದು. ವಿಪರೀತ ಪ್ರೀತಿ, ವಿಶ್ವಾಸ, ಸೌಹಾರ್ದತೆಯಲ್ಲಿ ಮನಕರುಗುವ ಇವರು ಕೆಲವೊಮ್ಮೆ ಸುಲಭದಲ್ಲಿ ಮೋಸ ಹೋಗುವುದ ಸಹಜ. ತನ್ನ ಸೇವಾವಧಿಯಲ್ಲಿ ತನಗಾಗಿ ಏನನ್ನು ಗಳಿಸಲಾರದೆ ಪರರ ಹಿತ ಚಿಂತನೆಯೇ ಪರಮೋಚ್ಚವೆಂದು ತಿಳಿದು ತನ್ನ ಶಕ್ತಿಯೆಲ್ಲವನ್ನು ವ್ಯಯಿಸಿದ ದಿಟ್ಟಮನಸ್ಸಿನ ಶ್ರೀಯುತರು ತನ್ನ ಸ್ನೇಹಿತರ ನಿಂದನೆಗೂ ಗುರಿಯಾಗಿ ಪಶ್ಚಾತ್ತಾಪ ಪಟ್ಟಿದ್ದುಂಟು.

ಇವರು ಸಾಧಿಸಿದ ಮಹತ್ಕಾರ್ಯಗಳಲ್ಲಿ ಮಂಗಳೂರಿನ ಅಶೋಕನಗರದಲ್ಲಿರುವ ಸರಕಾರಿ ನೌಕರರ ಕಾಲೋನಿಯಲ್ಲಿ ಕಟ್ಟಿಸಿದ ಗಣಪತಿ ದೇವಸ್ಥಾನವು ಪ್ರಸಿದ್ದಿಯನ್ನು ಪಡೆದಿದೆ. 14 ವರ್ಷಗಳಷ್ಟು ಹಿಂದೆಯೇ ಈ ಕೆಲಸಕ್ಕಾಗಿ ಹಣ ಸಂಗ್ರಹಿಸಿದ್ದರು. ಶ್ರೀಯುತರ ಆಗಮನದಿಂದ ಪುನಶ್ಚೇತನಗೊಂಡ ದೇವಸ್ಥಾನ 1978-81ರ ತನಕ ಶ್ರಮಪಟ್ಟು ದೇವಸ್ಥಾನ ಕಾರ್ಯವನ್ನು ಪೂರ್ಣಗೊಳಿಸಿದ ಕೀರ್ತಿ ಇವರದು. ಇವರು ಮಂಗಳೂರು ಗೌಡ ಸಮಾಜದಲ್ಲಿ 1980ರಿಂದ1982ರ ತನಕ ಉಪಾಧ್ಯಕ್ಷರಾಗಿ ತಮ್ಮ ಸಮಾಜದ ನಿವೇಶನಕ್ಕಾಗಿ ಬಹಳ ಶ್ರಮವಹಿಸಿ ದುಡಿದು ದಕ್ಕಿಸುವಲ್ಲಿ ಸಫಲರಾದರು. 1982ರ ಉತ್ತರಾರ್ಧದಲ್ಲಿ ಶ್ರೀಯುತರು ಮಂಗಳೂರು ಗೌಡ ಸಮಾಜದ ಅಧ್ಯಕ್ಷರಾಗಿ ಆಯ್ಕೆ ಆದರು. 25-2-1983ರಲ್ಲಿ ಶಂಕು ಸ್ಥಾಪನೆಗೊಂಡ ಸಮಾಜದ ಕಟ್ಟಡವು ಇವರ ಅಪಾರ ಶ್ರಮದ ಫಲವಾಗಿ 3-11-1985ರಲ್ಲಿ ಮಂಗಳೂರಿನ ಅಶೋಕನಗರದಲ್ಲಿ ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಭವ್ಯ ಕಟ್ಟಡದ ನಿರ್ಮಾಣವಾಯಿತು.

ತನ್ನ ನೌಕರಿಯ ಇಲಾಖೆಯಲ್ಲಿಯೂ ಮತ್ತು ತನ್ನವರ ಏಳಿಗೆಗಾಗಿ ಅಪಾರವಾಗಿ ದುಡಿದ ಶ್ರೀಯುತರು 30-9-1991 ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿವೃತ್ತರಾದರು. ಕ್ರೀಯಾಶೀಲರಾಗಿದ್ದ ಇವರ ಬೀಳ್ಕೊಡುಗೆ ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರು ವೃತ್ತದ ಸುಪರಿಂಟೆಂಡಿಂಗ್ ಇಂಜಿನಿಯರ್ ಕೆ. ಎನ್. ವೆಂಕಟೇಶ್ ವಹಿಸಿದ್ದರು. ಇವರು ನೌಕರರ ಸಂಘದ ಅಧ್ಯಕ್ಷರಾಗಿ ಸಹ ಸೇವೆ ಸಲ್ಲಿಸಿದ್ದಾರೆ. ಮಂಗಳೂರಿನ ಗೌಡರ ಯಾ ಒಕ್ಕಲಿಗರ ಸಮಾಜದಲ್ಲಿ 2 ಅವಧಿಗೆ ಸೇವೆ ಸಲ್ಲಿಸಿ ಕೀರ್ತಿ ಶ್ರೇಷ್ಠರಾಗಿದ್ದಾರೆ.

ಪೊಕ್ಕುಲಂಡ್ರ ಸುಬ್ಬಯ್ಯನವರು ಕೆನೇರ ಮಂದಣ್ಣನವರ ಪುತ್ರಿ ಪೂವಮ್ಮನವರ ಕೈ ಹಿಡಿದು ಸುಖಿ ಸಂಸಾರಿಗಳಾಗಿದ್ದಾರೆ. ಇವರ ಮಗ ದೇವರಾಜು ಮೀನುಗಾರಿಕೆ ಇಲಾಖೆಯಲ್ಲಿ ಉದ್ಯೋಗಿಯಾಗಿ ಗುಡ್ಡಂಡ ಸೋಮಯ್ಯನವರ ಮಗಳು ಜಯಶ್ರೀಯನ್ನು ಮದುವೆ ಆಗಿದ್ದಾರೆ. ಮಗಳು ವೀಣಾ ಪಾಡಿಚೆಟ್ಟಿ ಉತ್ತಪ್ಪನವರನ್ನು (ಕೊಡಗು ಗೌಡ ವಿದ್ಯಾಸಂಘದ ಸಲಹೆಗಾರರು) ಲಗ್ನವಾಗಿದ್ದಾರೆ. ತಮ್ಮ ನಿವೃತ್ತಿ ಜೀವನವನ್ನು ಕೆದಮುಳ್ಳೂರು ಗ್ರಾಮದಲ್ಲಿ ಸುಮ್ಮನೆ ಕಾಲಹರಣ ಮಾಡಲು ಇಷ್ಟವಿಲ್ಲದ ಇವರು ಈಗ ಕಳೆದ ವರ್ಷ ಹುಟ್ಟಿಕೊಂಡ ವಿರಾಜ ಪೇಟೆಯ ಗೌಡ ಸವಾಜದ ಖಜಾಂಚಿಯಾಗಿ ಕಾರ್ಯ ನಿರತರಾಗಿದ್ದಾರೆ. ಶ್ರೀಯುತರ ಭಗೀರಥ ಶ್ರಮದಿಂದ ವೈಭವಯುತವಾಗಿ ಮಂಗಳೂರಿನಲ್ಲಿ ಎದ್ದು ನಿಂತಿರುವ ಗೌಡರ ಯಾನೆ ಒಕ್ಕಲಿಗರ ಸಂಘಧ ಕಟ್ಟಡಕ್ಕಾಗಿ ದುಡಿದ ಇವರ ಸಮಾಜಸೇವಾ ಪರಿಚಯವನ್ನು ನೀಡುವುದು ಸಂಗಾತಿಗೊಂದು ಹೆಮ್ಮೆ ಎನಿಸಿದೆ. ಇವರ ಸಕಲ ಸಹಕಾರ ಜನಾಂಗಕ್ಕೆ ಆಗಾಗ ಲಭಿಸುತ್ತಿರಲಿ. ಇವರಿಗೆ ಕುಲಗುರು ವೆಂಕಟರಮಣನ ಕೃಪಾ ಕಟಾಕ್ಷೆ ಸದಾ ಇರಲೆಂದು ಶುಭ ಹಾರೈಸೋಣ.

ಬರಹ : ಪಟ್ಟಡ ಪ್ರಭಾಕರ.

---

ದುಷ್ಟರ ಕಂಡರೆ ದೂರ ಇರು

# ಕೊಡಗು ಸಂಗಾತಿಯು ತನ್ನ ನಾಲ್ಕನೆ ವರ್ಷಕ್ಕೆ ಪಾದಾರ್ಪಣೆಗೆಯ್ಯುತ್ತಿದೆ.

**ಸಮಸ್ತ ಓದುಗರಿಗೆ ಸಂಗಾತಿಯ ಶ್ರೇಷ್ಠ ನಮನಗಳು. ಅರೆಭಾಷೆ ಗೌಡರ ಏಕೈಕ ಮಾಧ್ಯಮ ಕೊಡಗು ಸಂಗಾತಿ**

## ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆ ನಡೆದು ಬಂದ ದಾರಿ

**ಜನನ : 9-4-1997**

ಒಂದು ಜನಾಂಗವನ್ನು ಉಚ್ಚ ಸಂಸ್ಕಾರದಲ್ಲಿ ಕೊಂಡೊಯ್ಯುವುದು ಅದರ ಭಾಷೆ ಮತ್ತು ಸಂಸ್ಕೃತಿ ಮಾತ್ರ. ಭಾಷೆಯ ಉಳಿವು ಸಾಹಿತ್ಯವನ್ನು ಆಧರಿಸಿರುತ್ತದೆ. ಸಾಹಿತ್ಯ ಬೆಳೆದಂತೆ ಸಂಸ್ಕೃತಿ ಅರಳುತ್ತದೆ. ಸಾಹಿತ್ಯದ ಉದಯಕ್ಕೆ ಬರಹಕಾರರ ಜನನ ಅವಶ್ಯಕ. ಬರಹಗಾರರಿಗೆ ಓದು ಅಷ್ಟೇ ಮುಖ್ಯ. ಇದರೆಲ್ಲದರ ಪೋಷಕ ಸ್ಥಾನವನ್ನು ತುಂಬುವ ಅಂಶವೆ ಪತ್ರಿಕೆ. ಇಂದಂತೂ ಎಲೆಕ್ಟ್ರಾನಿಕ್ ಮತ್ತು ಕಂಪ್ಯೂಟರ್ ಮಾಧ್ಯಮಗಳ ಯುಗವಾಗಿದೆ. ಪತ್ರಿಕೆಗಳ ಉಗಮ ಸುಲಭ ಸಾಧ್ಯವೇನಲ್ಲ. ಆದರೂ ಇಂದು ಜನಾಂಗಗಳನ್ನು ಮೇಲೆತ್ತುವ ದೃಷ್ಟಿಯಿಂದ ಪ್ರತೀ ಜನಾಂಗಗಳ ಸಂಸ್ಕೃತಿಗಳನ್ನು ಬಿಂಬಿಸುವ ಪತ್ರಿಕೆಗಳು ಎಲ್ಲಾ ಜನಾಂಗಗಳಲ್ಲೂ ಕಾಣುತ್ತೇವೆ. ಅದೇ ಪ್ರಕಾರದಲ್ಲಿ **ಅರೆಭಾಷೆ ಗೌಡ ಜನಾಂಗವನ್ನು ಪ್ರತಿಬಿಂಬಿಸುವ, ಗೌಡರ ಅರೆಭಾಷೆಯನ್ನು ತನ್ನ ಗರ್ಭದಲ್ಲಿ ಹೊತ್ತು ಅರೆಭಾಷೆ ಗೌಡ ಸಂಸ್ಕೃತಿಯ ರಕ್ಷಣೆಗೆ ಹೊರಟ ಪತ್ರಿಕೆಯೇ ಈ "ಕೊಡಗು ಸಂಗಾತಿ"ಯಾಗಿರುತ್ತದೆ.**

ಕೊಡಗು ಸಂಗಾತಿಯ ಹುಟ್ಟು 1997ರ ಏಪ್ರಿಲ್ 9ರ ಯುಗಾದಿಯ ಶುಭ ದಿನದಂದು ಆದರೂ, ಅದರ ಬಗೆಗಿನ ಕಲ್ಪನೆ ಬಹಳ ವರ್ಷಗಳ ಹಿಂದೆಯೇ ಇತ್ತು. ಇತ್ತೀಚಿನ ದಿನಗಳವರೆಗೂ 'ಗೌಡ ಅರೆಭಾಷೆ'ಯೆಂಬುದಿದೆ, ಕೊಡಗಿನಲ್ಲಿ ಅರೆಭಾಷೆ ಗೌಡ ಜನಾಂಗವೆಂಬುದಿದೆ ಎನ್ನುವ ಸುಳಿವು ಕೂಡ ಹೊರಜಗತ್ತಿಗೆ ಇರಲಿಲ್ಲ. ಇಂದಿಗೂ ಕೂಡ ಕೊಡಗಿನಿಂದ ಹೊರ ಹೋಗಿ ನೆಲೆ ನಿಂತವರೆಲ್ಲ ಕೊಡವರೇ ಎಂದೆನಿಸಿಬಿಟ್ಟಿದ್ದಾರೆ. ಅರೆಭಾಷೆ ಗೌಡ ಕನ್ನಡವೆಂಬ ಸುಂದರ ಭಾಷೆ ಪರಕೀಯ ಅನುಕರಣೆಯ ಅಲೆಯಲ್ಲಿ ಕೊಚ್ಚಿಹೋಗಿ, ಯುವ ಜನತೆಯಿಂದ ತಿರಸ್ಕರಿಸಲ್ಪಟ್ಟು ಕರಾಳ ಅಧ್ಯಾಯ ತೆರೆ ಕಾಣದಂತೆ ತಡೆಯುವ ಛಲದ ಫಲವೇ ಈ 'ಕೊಡಗು ಸಂಗಾತಿ'.

ಇಡೀ ಜನಾಂಗವನ್ನು ಮೇಲೆತ್ತುವ ಗುರುತರ ಜವಾಬ್ದಾರಿಯನ್ನು ಹೊತ್ತ ಈ ಸಂಗಾತಿ ರಥದ ಹಾದಿ ಹಾಸುಗಂಬಳಿಯಾಗಿರಲಿಲ್ಲ. ಕಲ್ಲುಮುಳ್ಳುಗಳ ಹೆದ್ದಾರಿ ಅದರದಾಗಿತ್ತು. ಇದರ ಮೇಲೆ ಎಡರುತ್ತಾ, ತೊಡರುತ್ತಾ, ತೆವಳುತ್ತಾ ಈಗ ನಾಲ್ಕನೇ ವರ್ಷಕ್ಕೆ ಕಾಲಿಡುತ್ತಿದೆ. ಈ ಹಿಂದಿನ ಒಂದೆರಡು ಪತ್ರಿಕೆಗಳು 'ಗೌಡ' ಜನಾಂಗದಲ್ಲಿ ಹುಟ್ಟಿ ವಿಫಲತೆಯ ಹಾದಿ ಹಿಡಿದ ಕರಿನೆರಳಿನ ಛಾಯೆ 'ಕೊಡಗು ಸಂಗಾತಿ'ಯ ಮೇಲೂ ದಟ್ಟವಾಗಿ ಹರಡಿದೆ. ಇದರೊಡನೆ ಬಂಡವಾಳದ ಕೊರತೆ ತೊಡರು ಬಳ್ಳಿಯಾಗಿ ಕಾಡಿತು. ಹಲವು ಶ್ರೀಮಂತರ, ಹಣವಂತರ ಬಾಗಿಲು ತಟ್ಟಿದಾಗ ನಿರೀಕ್ಷಿತ ಫಲಕ್ಕೆ ಬದಲು, ಅನಿರೀಕ್ಷಿತ ಮೂದಲಿಕೆಯ ಮಾತುಗಳು ನಮ್ಮ ಪಾಲಾದವು. ಆದರೆ ಅದಕ್ಕೆಲ್ಲಾ ಎದೆಗುಂದದೇ ಅದನ್ನೇ ಬಂಡವಾಳ ಮಾಡಿಕೊಂಡು ಮುನ್ನಡೆದಾಗ ಮಧ್ಯಮ ಮತ್ತು ಬಡ ವರ್ಗದವರ ಆಶೀರ್ವಾದವೇ ಪತ್ರಿಕೆಗೆ ಶ್ರೀರಕ್ಷೆಯಾಯಿತು.

ಸಂಗಾತಿ ಜನಿಸಿದಾಗ ಅದನ್ನು ಬೇಡ ಎಂದವರಿಲ್ಲ. ಪತ್ರಿಕೆಯ ಗುಣಮಟ್ಟ, ಅದರ ಮುಖ ಪುಟಗಳ ಬಗ್ಗೆ ಚರ್ಚೆ ನಡೆಸಿದವರಿಲ್ಲ. ಆದರೆ ಸಹಾಯ ಹಸ್ತ ಚಾಚಿ ನಿಂತಾಗ ಬಿದ್ದ ಭಿಕ್ಷೆ ಮಾತ್ರ ಶೂನ್ಯ. ಆಗ ಸಂಗಾತಿಯ ಕಣ್ಣೆದುರಿಗೆ ಕುಬೇರನಂತೆ ಕಂಡದ್ದು, ಮಡಿಕೇರಿಯ 'ಕೊಡಗು ಗೌಡ ವಿದ್ಯಾ ಸಂಘ'. ಆದರೆ ನಿರೀಕ್ಷಿಸಿದ ಫಲ ಸಾಲದು. ಇಂದಿಗೂ ಸಂಗಾತಿಯು ಪ್ರತ್ಯೇಕ ಕಛೇರಿಯನ್ನು ಹೊಂದದೆ ನಿರಂತರ ಮುನ್ನಡೆಯುತ್ತಿರುವುದು ಅದರ ಸವಾಲಿಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಗೌಡ ಜನಾಂಗದ ವಿಳಾಸ ದೊರೆತಂತೆಲ್ಲ 'ಕೊಡಗು ಸಂಗಾತಿ'ಯು ಅವರ ಮನೆಯನ್ನು ಹುಡುಕಿ ಹೊರಟಿತು. ಹೀಗೆ ಹೊರಟ ಪತ್ರಿಕೆ ಕೇವಲ ನಮ್ಮ ದೇಶದಲ್ಲಿ ಮಾತ್ರವಲ್ಲ ವಿದೇಶಕ್ಕೂ ಗೌಡ ಸಂಸ್ಕೃತಿಯನ್ನು ಹೊತ್ತು ನಡೆಯಿತು. ಅರೆಭಾಷೆಯನ್ನು ಮರೆತು ಕುಳಿತ ಯುವ ಜನತೆಯ ಜಿಗುಪ್ಸೆಯನ್ನು ದೂರ ಮಾಡಿ ಜನಪ್ರಿಯತೆಯನ್ನು ಗಳಿಸಿಕೊಟ್ಟಿತು. **ಇದೆಲ್ಲಕ್ಕಿಂತಲೂ ಮುಖ್ಯವಾಗಿ "ಕೊಡಗು ಸಂಗಾತಿ" ಜನಿಸಿದ ವರ್ಷ 1997 'ಗೌಡ' ಜನಾಂಗಕ್ಕೆ ಸುವರ್ಣ ವರ್ಷವೆನ್ನಬೇಕು.** ಸಂಗಾತಿಯು ತನ್ನ ಜನಾಂಗದ ನ್ಯೂನತೆಗಳನ್ನು ಎತ್ತಿ ತೋರಿಸಿ, ಅದಕ್ಕೆ ಪರಿಹಾರಗಳನ್ನು ಸೂಚಿಸ ತೊಡಗಿದಂತೆ ಜನತೆಯ ಪ್ರತಿಸ್ಪಂದನ ಅದಕ್ಕೆ ಪೂರಕವಾಯಿತು. ಅದರ ಪರಿಣಾಮವಾಗಿಯೇ ಕೊಡಗಿನಾದ್ಯಂತ ಅಲ್ಲದೆ ಹೊರ ಭಾಗಗಳಲ್ಲೂ ಗೌಡ ಸಂಘಟನೆಗಳು ಅಸ್ತಿತ್ವಕ್ಕೆ ಸಾಕಷ್ಟು ಬಂದವು. ಮೊಟ್ಟ ಮೊದಲಿಗೆ ಗೌಡ ಮಹಿಳಾ ಒಕ್ಕೂಟ ಸ್ಥಾಪನೆಗೊಳ್ಳುವುದರ ಮೂಲಕ ಹಲವಾರು ಮಹಿಳಾ ಸಂಘಟನೆಗಳು ಸ್ಥಾಪಿತವಾದವು. ತದನಂತರ ಮಡಿಕೇರಿಯಲ್ಲಿ 'ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ' ಸ್ಥಾಪನೆಗೊಳ್ಳುವುದರ ಜೊತೆಗೆ, ಗೌಡ ಸಮಾಜ, ವಿದ್ಯಾ ಸಂಸ್ಥೆಗಳೂ ಜಾಗೃತಗೊಂಡು ಸಕ್ರಿಯಗೊಂಡವು. 'ಗೌಡ' ಜನಾಂಗದಲ್ಲಿ ನಡೆಯುವ ಕಾರ್ಯಕ್ರಮಗಳ ವರದಿಗಳನ್ನು ಗೌಡ ಜನಾಂಗದ ಮನೆ ಮನೆ ಮುಟ್ಟಿಸಿ ಅವರನ್ನು ಎಚ್ಚರಗೊಳಿಸುವ ಪ್ರಯತ್ನವನ್ನು 'ಸಂಗಾತಿ'ಯು ಮಾಡುತ್ತಲಿದೆ.

ಪತ್ರಿಕೆಯನ್ನು ನಡೆಸುವುದು ಸಾಧಾರಣ ಕೆಲಸವಲ್ಲ. ಬಹಳ ದುಸ್ತರವಾದ ಕಾರ್ಯ. ಅದಕ್ಕೆ ಬಂಡವಾಳ ಅತ್ಯಂತ ಅಗತ್ಯ. ಕೇವಲ ಹಣವೊಂದಿದ್ದರೆ ಪತ್ರಿಕೆ ನಡೆಸಲಾಗದು. ಅದಕ್ಕೆ ಶ್ರಮ ಮತ್ತು ಪ್ರತಿಭೆ ಹಾಗೂ ಪರಿಶ್ರಮವೇ ಪ್ರೇರಕ ಶಕ್ತಿಯಾಗಿರುತ್ತದೆ. "ಸಂಗಾತಿ" ಸಂಸ್ಥೆಯಲ್ಲಿ ಕಠಿಣ ಪರಿಶ್ರಮವೇ ಮುಖ್ಯ ಪಾತ್ರವನ್ನು ಬಿಂಬಿಸಿತು. ಯಾವ ಪ್ರತಿಫಲಾಪೇಕ್ಷೆಯನ್ನು

ಬಯಸದೆ ಸಂಗಾತಿಯು ಮಳೆಯಲ್ಲಿ ನೆನೆಯಿತು. ಬಿಸಿಲಲ್ಲಿ ಬೆಂದಿತು. ಪತ್ರಿಕೆಯ ಜೀವಾಳವೇ ಜಾಹೀರಾತುಗಳು. ಇದೊಂದು ಜನಾಂಗೀಯ ಪತ್ರಿಕೆಯಾದುದರಿಂದ ಇದಕ್ಕೆ ಸಿಗುತ್ತಿದ್ದ ಜಾಹೀರಾತುಗಳ ಫಲ ನಗಣ್ಯವೇ ಸರಿ. ಅಂದು ನಮ್ಮ ಜನಾಂಗದ ಸ್ಥಿತಿವಂತರ ಬಳಿ ನಿಂತು, ಶುಭ ಕೋರುವ ಜಾಹೀರಾತುಗಳನ್ನು ನೀಡಿ ಪತ್ರಿಕೆಯ ಬೆಳವಣಿಗೆಗೆ ಸಹಕರಿಸುವಂತೆ ವಿನಂತಿಸಿಕೊಂಡಾಗ, ಕೆಲವರು ಆಡಿರುವ ಮಾತುಗಳು ಇಲ್ಲಿ ಅಪ್ರಸ್ತುತವಾಗಿದೆ. ಲೇಖನಗಳನ್ನು ಪ್ರಕಟಿಸುವುದಕ್ಕೂ, ವ್ಯಕ್ತಿ ಪರಿಚಯ, ಸಂದರ್ಶನಗಳನ್ನು ಪ್ರಕಟಿಸುವುದಕ್ಕೂ ಹಣ ನೀಡಬೇಕೆಂದು ಸುಮ ಸುಮ್ಮನೆ ಅಪಪ್ರಚಾರ ನಡೆಸಿದ್ದಂತೂ ನಿಜಕ್ಕೂ ಖೇದಕರವಾಗಿದೆ. ಆದರೆ ಬಾಂಧವರಿಂದ ಸಹಕಾರವನ್ನು ಬಯಸಿದ್ದಂತು ನಿಜ.

ಸಂಗಾತಿ ಹುಟ್ಟಿನಿಂದಾಗಿ 1997 ರಿಂದ ಗೌಡ ಜನಾಂಗವು ಏಕಾಏಕಿ ಸ್ಫೂರ್ತಿಗೊಂಡು, ಸಂಘಸಂಸ್ಥೆಗಳು, ಸಮಾಜಗಳು ಚುರುಕು ಗೊಂಡಿರುವುದಂತು ನಿಜ. **ಸಂಗಾತಿ ಜನರಿಗೆ ಹುಮ್ಮಸ್ಸನ್ನು ತುಂಬಿದೆ. ಆವೇಶವನ್ನು ಬರಿಸಿದೆ. ತನ್ನತನ ಕಾಪಾಡುವುದನ್ನು ಕಲಿಸಿದೆ. ಸ್ವಂತಿಕೆಯ ಅರಿವನ್ನು ಮೂಡಿಸಿದೆ. ಕೀಳರಿಮೆಯನ್ನು ಹೋಗಲಾಡಿಸಿದೆ. ಹತ್ತಾರು ಕಡೆ ಸಂಚರಿಸಿ ಪ್ರೇರಣೆ ನೀಡಿದ್ದರ ಫಲವಾಗಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ, ಗೌಡ ಮಹಿಳಾ ಒಕ್ಕೂಟ. ಗೌಡ ಯುವ ವೇದಿಕೆಗಳು, ಗ್ರಾಮಮಟ್ಟದಲ್ಲಿಯೂ, ಪಟ್ಟಣ ಮಟ್ಟದಲ್ಲಿಯೂ ಪ್ರಾರಂಭಗೊಂಡಿದೆ. ವೀರರಾಜಪೇಟೆ ಗೌಡ ಸಮಾಜದ ಉದಯಕ್ಕೂ ಕಾರಣವಾಗಿದೆ. ಮಡಿಕೇರಿಯಲ್ಲಿ ಹುತ್ರಿ ಕದಿರು ಕುಯ್ಯುವ ಏರ್ಪಾಡಿಗೂ ಕಾರಣಕರ್ತವಾಗಿದೆ. ಮೈಸೂರಿನಲ್ಲಿಯೂ ಚಟುವಟಿಕೆಯಿಂದ ಇದ್ದು 1999 ರ ಹುತ್ರಿಯಲ್ಲಿ ಹೆಚ್ಚಿನ ಬಾಂಧವರನ್ನು ಸೇರಿಸುವಲ್ಲಿಯೂ ಸಫಲವಾಗಿದೆ. 1998ರ ಏಪ್ರಿಲ್‌ನಲ್ಲಿ ಮೈಸೂರಿನ ಕಲಾಮಂದಿರದಲ್ಲಿ ಜನಾಂಗದ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಅರೆಭಾಷಿಕ ಕಾರ್ಯಕ್ರಮ ನಡೆಸಿ ಸಫಲವಾಗಿದೆ. ಜನಾಂಗದ ಸುಮಾರು 150 ಲೇಖಕರನ್ನು ಹುಟ್ಟು ಹಾಕಿ ತಮ್ಮ ಪ್ರತಿಭೆ ಹೊರ ಸೂಸಲು ಒಳ್ಳೆಯ ಸಾಹಿತ್ಯ ವೇದಿಕೆಯನ್ನು ಕಲ್ಪಿಸಿಕೊಟ್ಟಿದೆ. ಅರೆಭಾಷಿಕ ಸಾಂಸ್ಕೃತಿಕ ಸಮಿತಿ ಮತ್ತು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘವನ್ನು ಹುಟ್ಟು ಹಾಕುವಲ್ಲಿಯೂ ಸಫಲವಾಗಿದೆ.** ಬೆಂಗಳೂರಿನ ಕಾವೇರಿ ನಾಡಿಗೆ 5,000 ರೂ.ಗಳ ದೇಣಿಗೆ ನೀಡಿ ವಿದ್ಯಾ ನಿಧಿಯನ್ನು ಸ್ಥಾಪಿಸಲು ಪ್ರೇರೆಪಿಸಿದೆ. ಹಾಸನದ ಸಮಾಜಕ್ಕೂ 1,000ರೂ.ಗಳ ದೇಣಿಗೆ ನೀಡಲು ಒಪ್ಪಿಕೊಂಡಿದೆ. 5-3-2000 ರಲ್ಲಿ ನಡೆದ ಕ್ರಿಕೆಟ್ ಪಂದ್ಯಾಟಕ್ಕೂ ತನ್ನ ಅಭಯ ಹಸ್ತವನ್ನು ಚಾಚಿದೆ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಾಕಷ್ಟು ಕೆಲಸ ಕಾರ್ಯಗಳಿಗೆ ಸಹಕಾರಿಯಾಗಿದೆ. ಸಂಗಾತಿ ಹೋಗದ ಜಾಗವಿಲ್ಲ. ನಡೆದಾಡದ ಸ್ಥಳವಿಲ್ಲ. ಮಧ್ಯಮ ಮತ್ತು ಬಡ ವರ್ಗದ ಜನರ ಮನ್ನಣೆ ಗಳಿಸಿ ಅವರ ಉದಾರತನದ ಸೌಜನ್ಯತನವನ್ನು ಎತ್ತಿ ಹಿಡಿಯುವಲ್ಲಿ ಸಫಲವಾಗಿದೆಯೆಂದು ಈ ಸಂದರ್ಭದಲ್ಲಿ ಉಲ್ಲೇಖಿಸಲು ಬಯಸುತ್ತದೆ.

ಇದೇನೇ ಸಮಸ್ಯೆಗಳಿದ್ದರೂ ಕಠಿಣ ಪರಿಶ್ರಮದ ಎದುರು ಸಮಸ್ಯೆಗಳು ಧೂಳಿಪಟವಾಗುತ್ತದೆಂಬುದನ್ನು "ಸಂಗಾತಿ ಸಂಸ್ಥೆಯು" ಇದೀಗ ದೃಢಪಡಿಸಿದೆ. ನಿರಂತರವಾಗಿ ಈ ಮೂರು ವರ್ಷಗಳಲ್ಲಿ ಹಗಲು ರಾತ್ರಿಯೆನ್ನದೇ ದಿನದ 18 ಗಂಟೆಗಳ ಕಾಲ ಶ್ರಮವಹಿಸಿ ದುಡಿಯುತ್ತ ಬರುತ್ತಿದೆ. ಪತ್ರಿಕೆಯ ಗೌರವ ಸಂಪಾದಕರಾದ ಪಟ್ಟಡ ಮುತ್ತಣ್ಣ ಪ್ರಭಾಕರನವರು ತನ್ನನ್ನೇ ತಾನು ಅರ್ಪಿಸಿಕೊಂಡು ಬೆಟ್ಟದಂತಹ ಕಷ್ಟವು ಎದುರು ಬಂದಾಗಲು, ತನ್ನ ಇಷ್ಟ ದೈವವನ್ನು ನೆನೆಯುತ್ತಾ ಮುನ್ನುಗ್ಗಿದರ ಕರ್ಮದ ಫಲವೇ ಸಂಗಾತಿಯು ಇಲ್ಲಿಯ ತನಕ ನಡೆದು ಬಂದು ತಮ್ಮ ಮುಂದಿದೆ ಎಂದರೆ ಅತಿಶಯೋಕ್ತಿಯಾಗಲಾರದು.

**ಬನ್ನಿ ಜನಾಂಗದ ಬಂಧುಗಳೇ, ನಮ್ಮ ಶ್ರೇಷ್ಠ ಪರಂಪರೆ ಸಂಸ್ಕೃತಿಯನ್ನು ಹೊತ್ತು ಸಾಗುತ್ತಿರುವ ಈ ಪವಿತ್ರ ರಥದ ಹೆದ್ದಾರಿಯನ್ನು ನಾವೆಲ್ಲರೂ ಸೇರಿ ದುರಸ್ಥಿಗೊಳಿಸುತ್ತಾ 21ನೇ ಶತಮಾನದಲ್ಲಿ ದುಡಿಯೋಣ. ಈ ಮೂಲಕ ನಮ್ಮಯ ಹೆಮ್ಮೆಯ ಸಂಸ್ಕೃತಿಯ ಏಳಿಗೆಗೆ ಅಳಿಲು ಸೇವೆಯನ್ನು ಸಲ್ಲಿಸಲು ಜೊತೆಯಾಗಿ ಕಂಕಣ ಬದ್ಧರಾಗೋಣ.**

**— ಪಟ್ಟಡ ಶೀಲಾಮಣಿ, ಸಂಪಾದಕಿ**

---

## ಹೆಣ್ಣು

ಸತಿಪತಿ ಯೊಳೊಂದಾದ ಭಕ್ತಿ ಬರುವುದು ಧರ್ಮ
ಭಕ್ತಿ ಅಮೃತದೊಳು ವಿಷ ಬೆರೆಯದಂತೆ
ಪಿತ್ತ ನೆತ್ತಿಗೇರದ ಶಾಂತ ಹೃದಯದಂತೆ
ಹೆಣ್ಣು, ಹೊನ್ನು, ಮಣ್ಣು ಮಾಯೆಯಲ್ಲ ||

ಅಂತರಂಗದ ಕಶ್ಮಲವೇ ಮಾಯೊ
ಭೋಗ ಸುಖದ ಮದದಾನೆಯಲ್ಲ ಹೆಣ್ಣು
ಕಷ್ಟ ಸುಖದ ಸುರಿಮಳೆ ಸಮಸಾಲು ಹೆಣ್ಣು
ಹೆತ್ತು ಹೊತ್ತು ಸಲಹುವಳು ಹೆಣ್ಣು ||

ಧರಗೆ ಜನ್ಮವೆತ್ತಿದಾಗ ಕೊಟ್ಟವಳು ಹೆಣ್ಣು
ಮಲ, ಮೂತ್ರಕೊಳಚೆಯ ಶುದ್ಧಿಕರಿಸುವಳು ಹೆಣ್ಣು ||

ಹೆಣ್ಣು ಹೆಣ್ಣೆಂದು ಹೀನಾಯಿಸಬೇಡ ಹೆಣ್ಣನು
ಹೆತ್ತ ತಾಯಿಯ ನೆನಪಿಸಿಕೋ ಹೆಣ್ಣೆಂದು ||

ಪ್ರೀತಿಸಿ ಗೌರವ ಆದರದಿಂದ ನೋಡು ಹೆಣ್ಣನು
ಮೋಸ, ವಂಚನೆ. ಬಗೆದರೆ ಬರುವುದು ಆಪತ್ತು
ಚಿಂತಿಸ ಬೇಕಾಗಿರುವುದು ದುರಂತದ ಥೊತ್ತ
ಭೂಮಿಯೇ ಹೆಣ್ಣು ಪ್ರೀತಿಸು ಮೊದಲದನ್ನು ||

ಋತು ಮಾಸದಲ್ಲಿ ಹಸಿರೆಲೆ ಚಿಗುರಿದಂತೆ
ಚಿಗುರುವುದು ಜೀವನದುದ್ದಕೂ ಹೆಮ್ಮೆಯ ನೆಲೆ
ಮಾತೃದೇವೊ, ಪಿತೃದೇವೊಭವ ಅಚಾರ್ಯದೇವೋಭವ
ಶಾಶ್ವತವಾದ ಸುಖಶಾಂತಿ ಸಿದ್ದಿಗಾಗಿ ದೇವರಲ್ಲಿ ||

**ಪಿ. ಸಿ. ಗಿರೀಶ್‌ಕುಮಾರ್, ಕೊಯನಾಡು**

---

**ನಾನು ಮಾಡೋದು ಜೇನು, ಮಗಳು ಮಾಡೋದು ಮಾಣಿಕ್ಯ, ಸೊಸೆ ಮಾಡೋದು ಕಸಪಿಸಿ**

## ಸಂಗಾತಿ ರಾಶಿ ಫಲ : ಏಪ್ರಿಲ್ 1-15 ರ ತನಕ

ಜೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷರಾಶಿ :** ದೇಹದಲ್ಲಿ ಅನಾರೋಗ್ಯ ಕಾಡಬಹುದು. ಭೂಮಿಗೆ ಸಂಬಂದಿಸಿದಂತೆ ಧನಹಾನಿಯಾಗಬಹುದು. ಮನೋವ್ಯಾಧಿ. ಪಿತ್ತಕೋಪದಿಂದ ಮನಸ್ಸು ಚಂಚಲ. ಶುಕ್ರನೊಬ್ಬನೇ ಉತ್ತಮನಿದ್ದ ಕಾರಣ ವಿಷ್ಣು ದೇವಸ್ಥಾನದಲ್ಲಿ ಕುಂಕುಮಾರ್ಚನೆ ಮಾಡಿಕೊಂಡು ಬಂದಲ್ಲಿ ಸುಖ ದೊರೆಯುತ್ತದೆ.

**ವೃಷಭ ರಾಶಿ :** ಮನಸ್ಸಿನೊಳಗಿರುವ ಭಯ ನಾಶವಾಗುತ್ತದೆ. ಶತ್ರುಗಳು ದೂರವಾಗುತ್ತಾರೆ. ಹಣಕಾಸಿನ ವ್ಯವಹಾರದಲ್ಲಿ ಹೇರಳ ಲಾಭವಾದೀತು. ಸ್ಥಾನಮಾನಗಳಿಗೆ ಕೊರತೆ ಇರುವುದಿಲ್ಲ. ಈಶ್ವರನನ್ನು ಪ್ರತಿ ಶನಿವಾರ ಆರಾಧನೆ ಮಾಡಿಕೊಂಡು ಬಂದಲ್ಲಿ ಸರ್ವಕಾರ್ಯಗಳಿಗೆ ಶುಭವಾದೀತು.

**ಮಿಥುನ ರಾಶಿ :** ಕೈಗೊಂಡ ಕಾರ್ಯಗಳಲ್ಲಿ ಸಫಲತೆಯನ್ನು ಸಾಧಿಸುವಿರಿ. ಉದ್ಯೋಗಸ್ಥರಿಗೆ ಗೌರವ ದೊರೆಯುವುದು. ಹಲವು ರೀತಿಯಲ್ಲಿ ಹಣ ಕೈಗೂಡುವುದು. ವಿಷ್ಣುದೇವಸ್ಥಾನದಲ್ಲಿ ಪೂಜೆ-ಪುರಸ್ಕಾರ ಮಾಡಿಕೊಂಡು ಬರತಕ್ಕದ್ದು.

**ಕರ್ಕಾಟಕ ರಾಶಿ :** ನೂತನ ಕೆಲಸಕಾರ್ಯಗಳಲ್ಲಿ ಅಡೆ-ತಡೆ, ಅಪವಾದ ತಪ್ಪಿದ್ದಲ್ಲ, ಅಪರಿಚಿತರಿಂದ ಸಹಕಾರ ಒದಗಲಿದೆ. ಸ್ವಂತ ಬಂಧುಗಳಿಂದ ನಿಷ್ಠುರದ ಮಾತುಗಳು ಬರುವುದು. ಅತೀ ಸೂಕ್ಷ್ಮದಿಂದ ವ್ಯವಹಾರ ನಡೆಸುವುದು ಒಳ್ಳೆಯದು, ವಿಷ್ಣು ಆರಾಧನೆ ಮಾಡಿಕೊಂಡು ಬನ್ನಿ.

**ಸಿಂಹರಾಶಿ :** ಸ್ವಜನರಲ್ಲಿ ಮತ್ತು ಆಪ್ತ ಸ್ನೇಹಿತರಲ್ಲಿ ಕಲಹವೇರ್ಪಡುವುದು. ಪಾರ್ಶ್ವವಾಯುರೋಗ ಬರುವ ಸಂಭವವಿದೆ. ದೇಹಕ್ಕೆ ಅಪಾಯ ಬರಬಹುದು. ಆಸ್ತಿಪಾಸ್ತಿಗಳಿಗೆ ನಷ್ಟ ಸಂಭವಿಸಬಹುದು. ದೇವಿಯನ್ನು ಆರಾಧನೆ ಮಾಡಿಕೊಂಡು ಬನ್ನಿ.

**ಕನ್ಯಾರಾಶಿ :** ಸಂಸಾರದಲ್ಲಿ ಅನೇಕ ರೀತಿಯ ಕಷ್ಟನಷ್ಟಗಳು ಎದುರಾಗುವುದು. ಸ್ತ್ರೀಯರಿಗೆ ಬಲಭಾಗದಲ್ಲಿ ನೋವು ಕಾಣಿಸಬಹುದು. ಗರ್ಭಿಣಿಯರಿಗೆ ಉದರವ್ಯಾದಿ ಕಾಣಿಸುವುದು. ಚಿಕಿತ್ಸೆ ಅಗತ್ಯ. ಅಪಘಾತ ಭಯವಿದೆ. ಸುಬ್ರಹ್ಮಣ್ಯ ಆರಾಧನೆ ಮಾಡಿಕೊಂಡು ಬನ್ನಿ.

**ತುಲಾರಾಶಿ :** ಸಂಸಾರದಲ್ಲಿ ತುಸು ನೆಮ್ಮದಿ ಉಂಟಾದೀತು ಗೃಹದಲ್ಲಿ ದೇವತಾರಾಧನೆ ಮಾಡುವ ಯೋಗವಿದೆ. ಲಗ್ನ ಕೂಡಿ ಬಠಬಹುದು. ಮನಸ್ಸಿನಲ್ಲಿರುವ ಗುಪ್ತ ವಿಚಾರಗಳು ನೆರವೇರಲಿದೆ. ಈಶ್ವರ ಪಾರ್ವತಿಗೆ ಪೂಜೆ ಮಾಡಿಸಿ.

**ವೃಶ್ಚಿಕರಾಶಿ :** ದೈವಾನುಕೂಲವಿದೆ. ಶುಭಕಾರ್ಯಕ್ಕೆ, ಗೃಹನಿರ್ಮಾಣಕ್ಕೆ ಅಡ್ಡಿ ಆತಂಕಗಳು ಬರಬಹುದು. ನವಗ್ರಹರಾಧನೆ ಮಾಡಿ. ಸುಬ್ರಹ್ಮಣ್ಯನಿಗೆ ಕಾರ್ತಿಕ ಪೂಜೆ, ಮಹಾಶೇಷ ಪೂಜೆ ಮಾಡಿಕೊಂಡು ಬನ್ನಿ.

**ಧನಸ್ಸು ರಾಶಿ :** ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿ. ಮನಸ್ಸು ಹೇಳಿದ ಹಾಗೆ ವ್ಯವಹರಿಸಿದರೆ ಗೃಹದಲ್ಲಿ ನೆಮ್ಮದಿ ಇರಲಾರದು. ಪತ್ನಿಯ ಮೇಲಿನ ಸಂಶಯ ದೂರ ತಳ್ಳಿ. ವಿಷ್ಣು ಆರಾಧನೆ ಮಾಡಿಕೊಂಡು ಬನ್ನಿ. ಹಣಕ್ಕೆ ಕೊರತೆ ಬರಲಾರದು.

**ಮಕರ ರಾಶಿ :** ಶತ್ರುಗಳು ಮಿತ್ರರಾಗುವರು. ಗೃಹಲಾಭ, ಲಗ್ನ ಕಾರ್ಯಗಳು ಕೈಗೂಡುವುದು. ಸ್ಥಾನಮಾನಗಳಿಗೆ ಕೊರತೆ ಬರಲಾರದು. ನವಗ್ರಹಾರಾಧನೆ ಮಾಡಿಕೊಂಡು ಬನ್ನಿ. ಗಣಪತಿಗೆ ಸಂಕಷ್ಟ ಪೂಜೆ ಮಾಡಿಕೊಂಡು ಬನ್ನಿ.

**ಕುಂಭರಾಶಿ :** ಕೈಬಿಟ್ಟ ಕಾರ್ಯ ಕೈಗೂಡುವುದು. ಸುಖ, ಸಂತೋಷಗಳು ನಿಮ್ಮ ಪಾಲಿನದಗುತ್ತದೆ. ಧನಪ್ರಾಪ್ತಿಯಾಗುತ್ತದೆ. ಶತ್ರುಗಳು ನಾಶವಾಗುವುದರಲ್ಲಿ ಸಂದೇಹವಿಲ್ಲ. ಸತ್ಯನಾರಾಯಣ ಪೂಜೆ ಮಾಡಿಕೊಂಡು ಬರುವುದು ಕ್ಷೇಮ.

**ಮೀನರಾಶಿ :** ಉದರ ವ್ಯಾದಿ ಕಾಣಿಸಬಹುದು. ಅನಾವಶ್ಯಕ ಸಂಚಾರ ಬೇಡ. ಕೋಪತಾಪಗಳಿಂದ ದೂರವಿರಿ. ಶತ್ರುಗಳು ಗುಪ್ತವ್ಯವಹಾರ ನಡೆಸಬಹುದು. ನೀವು ಕೆಟ್ಟವರೆಂದು ನಂಬಿರುವವರಿಂದ ಪ್ರಯೋಜನವಾಗಲಿದೆ. ವಿಷ್ಣುವನ್ನು ಆರಾಧನೆ ಮಾಡಿಕೊಂಡು ಬನ್ನಿ

---

ತಿದ್ದುಪಡಿ :

### ಉನ್ನತ ವಿದ್ಯೆ ಮತ್ತು ಹುದ್ದೆಗೇರಿದ ನಮ್ಮ ಅರೆಭಾಷಿಕರು

ಶ್ರೀ ಗುಡ್ಡೇರ ನಂಜಪ್ಪ ಅಪ್ಪಯ್ಯ ಬಿ.ಎಸ್ಸಿ., (Ag.) (Rtd.), ಜಾಯಿಂಟ್ ಡೈರೆಕ್ಟರ್ ಗೌವರ್ನಮೆಂಟ್ ಆಫ್ ಕರ್ನಾಟಕ.

ಶ್ರೀ ಗುಡ್ಡೇರ ಪೂವಯ್ಯ ಮೊಣ್ಣಯ್ಯ, ಬಿ.ಇ. (Mech) ಅಡಿಷನಲ್ ಚೀಫ್ ಇಂಜಿನಿಯರ್ ಟಾಟಾ ಇಂಜಿನಿಯರ್ (TCE), ಬೆಂಗಳೂರು.

### ವೈಕುಂಠ ವಾಸಿ

ಮಡಿಕೇರಿ ತಾ. ಐಕೊಳ ಗ್ರಾಮದ ಕಲ್ಲುಮುಟ್ಲು ಬೋಪಣ್ಣನವರು ದಿನಾಂಕ 8-3-2000 ರಲ್ಲಿ ತಮ್ಮ ಸ್ವಗೃಹದಲ್ಲಿ ವೈಕುಂಠವಾಸಿಯಾದರು. ಇವರಿಗೆ 83 ವರ್ಷ ಪ್ರಾಯವಾಗಿದ್ದು ಒಬ್ಬಳು ಪುತ್ರಿ ಹಾಗೂ ಅಪಾರ ಬಂಧು ಮಿತ್ರರನ್ನು ಆಗಲಿದ್ದಾರೆ.

ಪಟ್ಟಡ ಸಣಯ್ಯ, ಮೈಸೂರು

---

**ನೆರೆಮನೆ ಶ್ಯಾವಿಗೆಗೆ ಕಾಯಿ ಹಾಲು ಕಾಯಿಸಿದಂಗೆ**

# ಸರ್ಪ ಗಂಧ



✦ ಕೌಂಡಿನ್ಯ : ಧಾರವಾಹಿ -27

ಎಡತೊರೆಯ ಬಂಗಲೆ !

ಹಾಲ್‌ನಲ್ಲಿ ಕುಳಿತು ಕೆಲಸದ ಆಳು ಗಳೊಂದಿಗೆ ಮಾತಾಡುತ ಇದ್ದ ಪ್ರಸನ್ನ, ಗೆಜ್ಜೆ ಶಬ್ದ ಕೇಳಿ ತಲೆ ಎತ್ತಿದನು !

ಅವನ ಮುಖ ಅರಳಿತು !

ಸೂಟ್‌ಕೇಸ್ ಹಿಡಿದುಕೊಂಡು ನಿಂತಿರುವ ರೇವತಿ ! ತಾನು ಬಯಸಿ ಮದುವೆಯಾಗಬೇಕೆಂದಿರುವ ಹೆಣ್ಣು !

ಮತ್ತೊಂದು ಸಂದೇಹ ಬಂದಿತು !

ಇವಳು ಊರಿಗೆ ಹೊರಟು ಬಂದಿರ ಬೇಕು. ನನಗೆ ಕೊನೆಯ ಸಲ ಹೇಳಿ ಹೋಗಲು ಬಂದಿರಬಹುದೆ !

ಈ ಆಲೋಚನೆ ಬಂದೊಡನೆ ಅವನ ಮನಸ್ಸು ನಿರಾಸೆಯಿಂದ ಮುದುಡಿ ಕೊಂಡಿತು.

ರೇವತಿ ನಗುತ್ತಿದ್ದಾಳೆ !

"ಒಳಗೆ ಬರಬಹುದೆ?"

ಪ್ರಸನ್ನ ಮೆಲ್ಲಗೆ "ಬಂದಾಗಿದೆಯಲ್ಲ"

ರೇವತಿ ಅವನ ಎದುರಿಗೆ ಇದ್ದ ಸೋಫಾದಲ್ಲಿ ಕೂರುತ್ತಾ "ನನಗೊಂದು ಹೆಲ್ಪ್ ಮಾಡುತ್ತೀರ?"

ಪ್ರಸನ್ನ ಹುಬ್ಬೇರಿಸಿ ನೋಡಿದನು

ರೇವತಿ ನಗುತ್ತಲೇ "ಈ ಊರಿನಲ್ಲಿ ಇನ್ನು ನಾಲ್ಕು ದಿನಗಳು ಉಳಿಯಬೇಕು ಅಂತ ಅನಿಸಿದೆ."

ಪ್ರಸನ್ನನ ಮುಖ ಅರಳಿತು

"ಬಂಗಲೆಯಲ್ಲಿ ಉಳಿಯಲು ಅವಕಾಶ ಕೊಡುತ್ತೀರ" ಎಂದು ಅವನನ್ನೇ ನೋಡಲಾರಂಭಿಸಿದಳು.

ಪ್ರಸನ್ನ ಬೇಸರದಿಂದ "ನೀನು ಈ ರೀತಿ ಕೇಳ ಬೇಕೆ ! ನಿನಗೆ ಒಪ್ಪಗೆಯಾದರೆ ಜೀವನ ಪೂರ್ತಿ ಇಲ್ಲಿಯೇ.... ನನ್ನ ಜೊತೆಯೇ ಇರಬಹುದು."

ರೇವತಿಯ ಮುಖ ಕೆಂಪೇರಿತು. ಅವಳು ಗಂಭೀರವಾಗಿ" ಸಧ್ಯಕ್ಕೆ ಬೇಡ.

ಪ್ರಸನ್ನನಿಗೆ ನಿರಾಸೆಯಾಯಿತು. ಅವನು ತಲೆಯಾಡಿಸುತ್ತಾ " ನಿನ್ನಿಷ್ಟ ರೇವತಿ. ಈಗ ಹೋಗಿ ವಿಶ್ರಾಂತಿ ತೆಗೆದುಕೋ."

ರೇವತಿಗೆ ಮಹಡಿಯ ಮೇಲೆ ಅವನ ಕೊಠಡಿಯ ಪಕ್ಕದಲ್ಲೇ ಉಳಿಯಲು ವ್ಯವಸ್ಥೆ ಮಾಡಲಾಯಿತು.

ಮಿಂಚಿನ ಬಳ್ಳಿಯಂತಹ ಹೆಣ್ಣು !

ಹತ್ತಿರದಲ್ಲೆ ಇದ್ದರೂ ಕೈಗೆ ಸಿಗಲಾರದು !

ರೇವತಿಗೆ ಈಗ ಗಮನಕ್ಕೆ ಬಂದಿತು. ಆ ಬಂಗಲೆಯಲ್ಲಿ ಇಬ್ಬರು ಬದುಕಿಲ್ಲ, ಅರುಂಧತಿ ಮತ್ತು ಅವಳ ಗಂಡ !

ರೇವತಿ ಕಾಫಿ ಕುಡಿದು ಮಹಡಿಯ ಮೇಲೆ ಇದ್ದ ರೂಮುಗಳನ್ನು ನೋಡುತ್ತಾ ಬರಲಾರಂಭಿಸಿದಳು.

ಪ್ರತ್ಯೇಕ ಕೊಠಡಿಗಳಲ್ಲಿ ಪ್ರಸನ್ನನ ಅಣ್ಣಂದಿರಾದ ಲಿಂಗಯ್ಯ ಮತ್ತು ವೀರಭದ್ರಯ್ಯ ಇದ್ದರು.

ರೇವತಿ ಅವರಿಬ್ಬರನ್ನು ಗಮನಿಸಿದಳು,

ಅವರಿಬ್ಬರು ಸದಾ ಮಲಗಿ ಕೊಂಡಿರುತ್ತಿದ್ದರು. ಸದಾ ತಿರುಗುತ್ತಿರುವ ಫ್ಯಾನನ್ನು ಅಥವಾ ಗೋಡೆಯಲ್ಲಿನ ಫೋಟೊಗಳನ್ನು ನೋಡುತ್ತಾ ಪಿಳಿ ಪಿಳಿ ಕಣ್ಣು ಬಿಡುತ್ತಿದ್ದರು !

ಇವರಿಗೆ ಟ್ರೀಟ್‌ಮೆಂಟ್ ಕೊಡಿಸಿಲ್ಲವೆ?

ಎಂತೆಂತಹ ಮಾನಸಿಕ ಕಾಯಿಲೆಗಳನ್ನು ವಾಸಿ ಮಾಡುತ್ತಾರೆ. ಬೆಂಗಳೂರಿನ ನಿಮಾನ್ಸ್‌ಗೆ ಕರೆದು ಕೊಂಡು ಹೋಗ ಬಾರದೆ?

ರೇವತಿಗೆ ಸಂದೇಹ ಬಂದಿತು !

ಬಹುಶ ಪ್ರಸನ್ನನಿಗೆ ಇವರುಗಳು ಸರಿ ಹೋಗುವುದು ಬೇಕಿಲ್ಲ ಅಂತ ಕಾಣುತ್ತದೆ. ಅದಕ್ಕೆ ಈ ಉದಾಸೀನತೆ.

* * *

ರಾತ್ರೀ ಹತ್ತು ಗಂಟೆಯ ಸಮಯ !

ರೇವತಿ ತನ್ನ ಕೊಠಡಿಯಲ್ಲಿ ಮಲಗಿ ಕೊಂಡಿದ್ದಾಳೆ. ಅಪಾಯ ಬೆನ್ನಿನ ಹಿಂದೆ ಇರುವಾಗ ಮೈಮರೆತು ನಿದ್ದೆ ಮಾಡಲು ಸಾಧ್ಯವೆ? ಪುಸ್ತಕ ಓದುತ್ತಿದ್ದಾಳೆ.

ಹೆಜ್ಜೆಯ ಶಬ್ದ ಕೇಳಿಸಿತು

ರೇವತಿ ಸರಿಯಾಗಿ ಆಲಿಸಿದಳು

ರೂಮಿನ ಕಿಟಕಿಯ ಮೂಲಕ ಯಾರೋ ಹೋಗಿದ್ದನ್ನು ಕಂಕಡು ದಡಕ್ಕನೆ ಎದ್ದು ಹೊರ ಬಂದಳು.

ವ್ಯಕ್ತಿಯೊಂದು ನಡೆಯುತ್ತಿದೆ !

ಬೆನ್ನು ಮತ್ತು ತಲೆ ಮುಚ್ಚುವಂತೆ ಕಂಬಳಿಯನ್ನು ಹೊದ್ದು ಕೊಂಡಿದೆ ! ಗುರುತು ಸಿಗುತ್ತಿಲ್ಲ !

ರೇವತಿಗೆ ಭಯವಾಯಿತು.

ಅವಳು ಜೋರಾಗಿ ಉಸಿರನ್ನು ಸಹ ಬಿಡುತ್ತಿಲ್ಲ. ರೇವತಿ ಶಬ್ದವಾಗದಂತೆ ಕಾಲಿನಿಂದ ಹೆಜ್ಜೆ ತೆಗೆದಳು !

ನಿಶ್ಯಬ್ದವಾಗಿ ನಡೆಯುತ್ತಿದ್ದಾಳೆ !

ರೇವತಿಗೆ ಭಯ ಮಿಶ್ರಿತ ಕುತೂಹಲ. ಮುಂದೆ ಹೋಗುತಿದ್ದ ಮುಸುಕುದಾರಿ ಈಗ ರೂಮೊಂದರ ಹತ್ತಿರ ಬಂದನು.

ಅದು.... ಅದು ಪ್ರಸನ್ನನ ರೂಮು !

ಆ ವ್ಯಕ್ತಿ ಒಳಗೆ ಪ್ರವೇಶಿಸಿತು !

ರೇವತಿಗೆ ಇನ್ನು ತಡೆಯಲಾಗಲಿಲ್ಲ. ಏನೋ ಅನಾಹುತ ನಡೆಯುತ್ತದೆ ಅಂತ ಗೊತ್ತಾಯಿತು !

ಸರ ಸರನೆ ಅಲ್ಲಿಗೆ ಬಂದಳು,

**20ನೇ ಪುಟಕ್ಕೆ**

ಇಲ್ಲಿಯವರೆಗೆ.........

ಪ್ರಸನ್ನ ತನ್ನ ರೂಮಿನಲ್ಲಿ ಕುಳಿತು ಚಿಂತಿಸುತ್ತಿರುವಾಗ ಏನೋ ಶಬ್ದವಾಗುತ್ತದೆ. ಹೊರಗೆ ಬಂದು ನೋಡುತ್ತಾನೆ. ಅಣ್ಣ ಲಿಂಗಯ್ಯನ ರೂಮಿನಲ್ಲಿ ರಮ್ ಸೀಸೆ, ಪಿಸ್ತೂಲನ್ನು ನೋಡುತ್ತಾನೆ. ಲಿಂಗಯ್ಯ ಸಹ ಹುಚ್ಚನಂತೆ ನಾಟಕ ಆಡುತ್ತಿರಬಹುದೆ ಎಂಬ ಸಂದೇಹ ಬರುತ್ತದೆ. ಮಾರನೆಯ ದಿನ ರೇವತಿ ಪ್ರಸನ್ನನ ಬಂಗಲೆಗೆ ಬರುತ್ತಾಳೆ.

ಮುಂದೆ ಓದಿ.........

# ಕೊಡಗಿನ ಅತ್ಯುನ್ನತ ಶಿಖರ ತಡಿಯಂಡಮೋಳ್

ಈ ಹೊಸ ಸಹಸ್ರಮಾನದ ಫೆಬ್ರವರಿ 12 ಮತ್ತು 13ನೇ ದಿನಗಳೂ, ಈ ಬಾಳೆಂಬ ಹೊತ್ತಿಗೆಯನ್ನು ತಿರುವಾಗ ಸಿಗುವ ಸುಂದರ, ಸ್ಮರಣೀಯ ಪುಟಗಳು.

ಅಂದು ಕಾವೇರಿ ಕಾಲೇಜು ಗೋಣಿಕೊಪ್ಪಲುವಿನ ರಾಷ್ಟ್ರೀಯ ಸೇವಾಯೋಜನೆಯ ಘಟಕವೂ ಕೊಡಗಿನ ಅತ್ಯುನ್ನತ ಶಿಖರ ತಡಿಯಂಡಮೋಳ್‌ಗೆ ಚಾರಣವನ್ನೇರ್ಪಡಿತ್ತು. ನಾನು ದ್ವಿತೀಯ ಬಿ.ಕಾಂ. ವಿದ್ಯಾರ್ಥಿನಿ, ರಾ.ಸೇ. ಯೋ. ಯ ಸ್ವಯಂಕರ್ತೆಯೂ ಹೌದು.

ನಾವು ಕಾಲೇಜಿನಿಂದ ದಿನಾಂಕ 12ರಂದು ಅಂದರೆ ಶನಿವಾರ ಬೆಳಗ್ಗಿನ ಪಾಠ ಪ್ರವಚನಗಳನ್ನು ಮುಗಿಸಿಕೊಂಡು ಅಪರಾಹ್ನ 2 ಗಂಟೆಗೆ ಕಕ್ಕಬ್ಬೆಯತ್ತ ಪ್ರಯಾಣವನ್ನು ಆರಂಭಿಸಿದೆವು. ಪರೀಕ್ಷಾವಧಿ ಹತ್ತಿರವಾಗುತ್ತಿದ್ದರಿಂದ ನಾವು ತರಗತಿಗಳನ್ನು ಹಾಳು ಮಾಡಿಕೊಳ್ಳುವಂತಿರಲಿಲ್ಲ. ಶಿಬಿರಾರ್ಥಿಗಳೂ, ಶಿಬಿರಾಧಿಕಾರಿಗಳು, ಪ್ರಾಂಶುಪಾಲರೂ, ವಿಜ್ಞಾನದ ಪ್ರಾಧ್ಯಾಪಕರೂ ಮತ್ತು ಶಿಬಿರಾಧಿಕಾರಿಯ ಪತ್ನಿ ಹೀಗೆ ನಾವು ನಲವತ್ತು-ನವವತ್ತೈದು ಜನರು ಸರಣಿ ಬಸ್ಸಲ್ಲಿ ಹೋಗಿ ಕಕ್ಕಬ್ಬೆಯನ್ನು ತಲುಪಿದೆವು. ನಂತರ ನಾಲ್ಕು ಕಿಲೋಮೀಟರ್ ನಡೆದು ನಾಲ್ಕು ನಾಡು ಅರಮನೆಯನ್ನು ತಲುಪಿದಾಗ ಹಕ್ಕಿಗಳು ಗೂಡು ಸೇರುವ ಸಮಯ.

ನಾವು ದಣಿವಾರಿಸಿಕೊಂಡು, ಮೇಲೊಂದು ಮನೆಗೆ ಹೋದೆವು. ಅವರು ಅರಮನೆಯ ಕೀಯನ್ನು ಇಟ್ಟುಕೊಳ್ಳುವವರು. ಅಲ್ಲದೆ ಆ ಮನೆಯ ಭತ್ತದ ಕಣಜವನ್ನು ಅವರು ಕಾಟೇಜಿನ ರೂಪದಲ್ಲಿ ಬದಲಿಸಿದ್ದಾರೆ. ಅವರು ಕಾಟೇಜಿನಲ್ಲಿ ಉಳಿಯುವವರಿಗೆ ಊಟ ತಿಂಡಿಗಳನ್ನು ನೀಡುತ್ತಾರೆ. ನಾವು ಹೋದಾಗ ಅಲ್ಲಿ ವಿದೇಶಿಯರೇ ತುಂಬಿದ್ದರು. ಅವರು ಕೊಡಗಿನ ಸೌಂದರ್ಯವನ್ನು ವೀಕ್ಷಿಸಲು ಬಂದವರು.

ನಾವು ಅರಮನೆ ಬದಿಯ ಒಂದು ಕೋಣೆಯ ಕೀಯನ್ನು ಪಡೆದು ಹಿಂತಿರುಗಿದೆವು. ನಮಗೆ ಅರಮನೆಯೊಳಗಿನ ದರ್ಶನ ಲಭ್ಯವಾಗಲಿಲ್ಲ. ಮೊದಲೊಮ್ಮೆ ನೋಡಿದ್ದರಿಂದ ನಿರಾಶೆಯಾಗದಿದ್ದರೂ ನೋಡದೇ ಇದ್ದವರು ಸಹ ಇದ್ದರು. ಈ ವಿಷಯದಲ್ಲಿ ನಾವು ವಂಚಿತರಾದೆವು.

ಅದು ನಮಗೆ ಕೇವಲ ಚಾರಣವಾಗದೆ, ಕಲಿಕೆಯೂ ಆಗಬೇಕೆಂದು ಪರಿಸರ ಇಲಾಖೆಯ ಕೆಲವು ಜನ ನಮ್ಮೊಡನೆ ಬಂದಿದ್ದರು. ಅಲ್ಲದೆ ಅರಣ್ಯ ಇಲಾಖೆಯಿಂದ ಗಾರ್ಡ್ ಒಬ್ಬರು ಬಂದಿದ್ದರು. ಅವರು ನಮಗೆ ಮಾರ್ಗದರ್ಶನವನ್ನೂ, ಸುತ್ತ ಮುತ್ತಲಿನ ಪರಿಸರದಲ್ಲಿರುವ ಗಿಡ ಮೂಲಿಕೆಗಳನ್ನು ಅದರ ಉಪಯುಕ್ತತೆಯನ್ನು ಹೇಳಿಕೊಡುವರಿದ್ದರು.

ನಾವು ಅಂದು ಸಂಜೆಯನ್ನು ಸಂತೋಷವಾಗಿ ಸುತ್ತಲಿನ ಪರಿಸರದಲ್ಲಿ ಕಳೆದೆವು ಸೂರ್ಯ ಮುಳುಗುವ ಸಮಯ, ಹಕ್ಕಿಗಳಿಗೆ ಗೂಡು ಸೇರುವ ತವಕ, ಕೀಟಗಳ ಕಿರುಚಾಟ, ಬಣ್ಣಬಣ್ಣದ ಮೋಡಗಳು ತೇಲುತ್ತಾ ಸಾಗುತ್ತಿರುವುದೂ, ಓಹ್! ಅದೊಂದು ದಿವ್ಯ ಅನುಭೂತಿ **"ಸಂಧ್ಯಾ ಶಿಲ್ಪಿಯ, ಸುವರ್ಣ ಯಕ್ಷಿಣಿ ಮೇಘ ಲೋಕಕ್ಕೆ ಓಕುಳಿ ಎರಚಿದೆ. ವಿಧ ವಿಧ ರೂಪದ, ವಿಧ ವಿಧ ವರ್ಣದ ಚಿತ್ರೋತ್ಸವಕೆ"** ಬಹುಶಃ ಪ್ರಕೃತಿ ಕವಿ ಕುವೆಂಪು ಈ ಮೇಲಿನ ಮಾತನ್ನು ಪ್ರಕೃತಿ ಪವಾಡವನ್ನು ಕಂಡು ಅಚ್ಚರಿಯಿಂದ ಉದ್ಗರಿಸಿರಬಹುದು.

ನಾವು ರಾತ್ರಿಗೆ ಸ್ವತಃ ಅಡುಗೆ ತಯಾರಿಸಿ ಆ ನಳಪಾಕವನ್ನೇ ಉಂಡು, ರಾತ್ರಿಯನ್ನು ಆ ಕೊರೆಯುವ ಚಳಿಯಲ್ಲಿ ಕಳೆದೆವು. ಮಾರನೆಯ ದಿನ 6 ಗಂಟೆಗೆ ನಮ್ಮ ಸರ್ವ ವಿಧಿಕರ್ಮಗಳನ್ನು ಮುಗಿಸಿಕೊಂಡು, ಬ್ಯಾಗುಗಳನ್ನು ಒಬ್ಬರ ಮನೆಯಲ್ಲಿ ಇಟ್ಟು ಶಿಖರಾರೋಹಣಕ್ಕೆ ತೊಡಗಿದಾಗ ಗಂಟೆ 6-30 ನಮ್ಮ ಕಿರುಚಾಟ, ಸಂಭ್ರಮಕ್ಕೆ ವಿರಾಮವಿತ್ತವರು ಪರಿಸರ ಇಲಾಖೆಯ ವಿಜಯ ಕುಮಾರ್‌ರವರು. ಒಂದೈದು ನಿಮಿಷ ಮೌನದಿಂದಿದ್ದು ಹಕ್ಕಿಗಳ ಕಲರವನ್ನಾಲಿಸಿ ಎಂದರು.

**ಆ : ಆಲಿಸು ! ಆಕಾಶದಿ**
**ತೇನೆಯ ಸುರವಾಣಿ**
**ಜುಮ್ಮೆಂದಿದೆ ಅದನ್ನಾಲಿಸಿ**
**ಸಹ್ಯಾದ್ರಿಯ ಶ್ರೇಣಿ**

ಪ್ರಕೃತಿ ಸೌಂದರ್ಯ ಕಂಡು ನಮ್ಮ-ನಿಮ್ಮ ಬಾಯಿಕಟ್ಟಿದರೆ, ಮಹಾ ಕವಿ ಕುವೆಂಪುರವರಿಗೆ ಭಾವನೆಗಳು ಕವನವಾಗಿ ಹರಿದು ಬರುತ್ತದೆ. ಚೈತನ್ಯಕ್ಕೆ ಜಡವೆಂಬುದು; ಕವಿಭಾವಕೆ ಭಾಷೆ ಎಂದು ಕವಿ ಇನ್ನೊಂದೆಡೆ ಹೇಳಿದ್ದಾರೆ.

ಸಮುದ್ರ ಮಟ್ಟದಿಂದ 1717 ಮೀಟರ್ ಎತ್ತರವಿರುವ ತಡಿಯಂಡಮೋಳನ್ನು ಏದುಸಿರು ಬಿಡುತ್ತಾ ಹತ್ತುತ್ತಾ ಕೆಲವೊಮ್ಮೆ ಸುಸ್ತಾಗಿ ಕೂತೇ ಬಿಡುತ್ತಾ ಅಂತೂ... 8-30 ಘಂಟೆಗೆ ಪರ್ವತದ ಮೇಲ್ತುದಿಯನ್ನು ತಲುಪಿದೆವು. ಎಲ್ಲರ ಬಳಿಯಿದ್ದ ನೀರಿನ ಬಾಟಲ್ ಖಾಲಿ ! ನೀರಿಗಾಗಿ ಹಾಹಾಕಾರ ! ಒಬ್ಬರ ಬಳಿಯಲ್ಲೂ ಇಲ್ಲ. ಯಾರದೋ ಕೈಯಲ್ಲಿದ್ದ ಅರ್ಧ ಬಾಟಲ್ ನೀರನ್ನು ಎಲ್ಲರೂ ಒಂದೊಂದು ಗುಟುಕು ಕುಡಿದು ಆರಿದ ನಾಲಿಗೆಯನ್ನು ತೇವವಾಗಿರಿಸಿ ಕೊಂಡರು. ಬೆಳಗ್ಗಿನ ಉಪಹಾರವಾದ ಬ್ರೆಡ್-ಜ್ಯಾಂ ಅನ್ನು ತಿಂದು ವಿರಮಿಸಿಕೊಂಡೆವು.

ಸುತ್ತಲೂ ಪರ್ವತದ ಶ್ರೇಣಿಗಳೂ, ಎರಡೂ ಪರ್ವತದ ನಡುವಿನ ಕೊರಕಲುಗಳಲ್ಲಿ ದಟ್ಟ ಕಾಡುಗಳೂ, ಬೆಟ್ಟದ ಮೇಲ್ಭಾಗದಿಂದ ಕೆಳಗೆ ನೀರು ಹರಿದು ಓಣಿಯಾದಂತೆ ಏರುತಗ್ಗುಗಳಿಂದ ಕೂಡಿ ಜಾಗ, ಬೀಸುವ ಮಂಜುಮಿಶ್ರಿತ ತಂಗಾಳಿ...... ಈ ಅನುಭವವನ್ನು ವರ್ಣಿಸಲಸದಳ.

ನಮ್ಮೊಡನೆ ಬಂದಿದ್ದ ಗಾರ್ಡ್, ಪರ್ವತದ ಆ ಬದಿಯಲ್ಲಿ ಆನೆ-ಹುಲಿಗಳಿವೆ ಎಂದರು. ಶಿಖರದಿಂದ ಮೂರೇ ಮೂರು ಕಿಲೋಮೀಟರ್ ನಡೆದರೆ ಕೇರಳದ ಗಡಿ ಸಿಗುವುದಂತೆ. ಪರ್ವತದ ತುದಿಯಲ್ಲಿ ನಿಂತು ಅತ್ತಲಿನ ಜಾಗವನ್ನು ಕೇರಳದ ಗಡಿ ಎಂದು ತೋರಿಸಿದರು.

ಕೆಲವರು ಕಾಲಿಗೆ ಚಕ್ರ ಕಟ್ಟಿ ಕೊಂಡವರಂತೆ ಹತ್ತಿರದ ಬೆಟ್ಟಗಳನ್ನು ಹತ್ತಿ ಇಳಿಯಲು ತೊಡಗಿದ್ದರು. ನಾವು ಕೆಲವೊಂದು

**ಪುಷ್ಪ ಡೊಂಕಾದರೇನು, ಪರಿಮಳ ಡೊಂಕೇ?**

ಜನ ದೊಡ್ಡ ದೊಡ್ಡ ಬಂಡೆಗಳ ಮೇಲೆ ಕುಳಿತು ಆ ಪ್ರಕೃತಿ ಲೀಲೆಯನ್ನು ಬೆರಗಾಗಿ ವೀಕ್ಷಿಸುತ್ತಿದ್ದೆವು. ಬೆಟ್ಟಗಳನ್ನು ಪೂರ್ಣವಾಗಿ ಮಂಜಿನ ಮೋಡ ಆವರಿಸಿ ಬಿಟ್ಟಿತ್ತು. ಅದು ಕರಗ ಬೇಕಾದರೆ ಸಂಜೆಯೇ ಆಗ ಬೇಕಂತೆ ! ಸೂರ್ಯ ಮೇಲೇರುತ್ತಾ ಹೋದಂತೆ ಮಂಜಿನ ಮೋಡಗಳು ಆವರಿಸಿದ್ದ ಬೆಟ್ಟವನ್ನು ಬಿಟ್ಟು ನೋಡು ನೋಡುತ್ತಿದ್ದಂತೆಯೇ ಇನ್ನೊಂದು ಬೆಟ್ಟವನ್ನು ಅಪ್ಪುತಿತ್ತು. ಒಂದರ ದರ್ಶನವನ್ನು ಕೊಟ್ಟು ಇನ್ನೊಂದು ಬೆಟ್ಟವನ್ನು ಮುಚ್ಚುತ್ತಿತ್ತು. ಕೊನೆಗೂ ಪರಿಪೂರ್ಣವಾಗಿ ಸುತ್ತಲೂ ಒಮ್ಮೆಗೆ ನೋಡಲಾಗಲಿಲ್ಲ ಪ್ರಕೃತಿ ದೇವಿಯ ಕಣ್ಣು ಮುಚ್ಚಾಲೆ ಆಟ ಹಾಗಿತ್ತು.

ಹಾಗೆಯೇ ಕೆಲವೊಂದು ಗಂಟೆಗಳನ್ನು ಸಂತೋಷದಿಂದ ಕಳೆದು ಹನ್ನೆರಡು ಗಂಟೆಗೆ ಶಿಖರವರೋಹಣಕ್ಕೆ ಸುರು ಮಾಡಿದೆವು. ಇಳಿಯುವಾಗ ಎಲ್ಲರೂ ಓಡಿಕೊಂಡೇ ಇಳಿದರು. ಕೆಲವರು ಉರುಳುಸೇವೆಯನ್ನೂ.. ಮಾಡಿದರು. "ಅಬ್ಬಾ! ಇನ್ನುಮುಂದೆ ಬೆಟ್ಟ ಮಾತ್ರ ಹತ್ತಲಪ್ಪಾ..."ಎನ್ನುವ ಉದ್ಗಾರಗಳು ಕೆಲವೊಂದು ಹುಡುಗಿಯರ ಬಾಯಿಯಿಂದ ಬರುತಿದ್ದವು. ಅದಕ್ಕೊಬ್ಬ ತಮಾಷೆಯಾಗಿ "ಮುಂದೆ.. ನಿನ್ನ ಮಕ್ಕಳೂ, ನೀನೇನು ಮಾಡಿದ್ದೀಯ ಮಮ್ಮಿ ಎಂದು ಕೇಳಿದರೆ, ಕೊಡಗಿನ ಅತಿದೊಡ್ಡ ಬೆಟ್ಟ ಹತ್ತಿದ್ದೀನಿ ಎಂದು ಹೇಳಬಹುದಲ್ಲ" ಎಂದನು.

ಮತ್ತೊಬ್ಬ ವಿದ್ಯಾರ್ಥಿನಿ, ಈ ಬೆಟ್ಟವನ್ನೇ ಹತ್ತಲು ಕಷ್ಟಪಡುತ್ತಿದ್ದವಳೂ..' ಒಂದು ದೊಡ್ಡ ಬೆಟ್ಟ ಇರ್ಬೇಕು ಅದ್ರಲ್ಲಿ ನಿಂತು ನೋಡಿದ್ರೆ ಇಡೀ ಕರ್ನಾಟಕ ಕಾಣುವ ಹಾಗೆ ಇರ್ಬೆಕು' ಎಂದು ಕನಸು ಕಟ್ಟುತ್ತಿದ್ದಳು. ಮಂಜು ಮುಸುಕಿ ಹತ್ತಿರದ ಬೆಟ್ಟವೇ ಕಾಣದಿದ್ದಾಗ ಕೆಲವರು ನಾನು ಮಡಿಕೇರಿ ಕಂಡೆ, ನಾನು ಅರಬ್ಬಿ ಸಮುದ್ರ ಕಂಡೆ ಎಂದು ಹೇಳುತಿದ್ದನ್ನು ಕೇಳಿ ನಮ್ಮ ತುಟಿಯರಳುತ್ತಿದ್ದವು.

ಈ ಮಂಜಿನ ಮೋಡ ಶಿಖರದ ತುದಿಗೂ ಹೋಗದೆ ಕೆಳಕ್ಕೂ ಬಾರದೆ ಮದ್ಯದಲ್ಲಿ ತೇಲುತ್ತಾ ನಿಂತದ್ದನ್ನು ನೋಡಲೆ ಚಂದ ! ಇಳಿಯುವಾಗ ಮಧ್ಯೆ ಮಧ್ಯೆ ಸಿಗುತ್ತಿದ್ದ ತೊರೆಗಳಲ್ಲಿ ದಾಹವನ್ನಾರಿಸಿಕೊಂಡು ಇಳಿದು ಮಧ್ಯಾಹ್ನಕ್ಕೆ ಏನೋ ಒಂದು ತಯಾರಿಸಿ ಹೊಟ್ಟೆ ತುಂಬಿಸಿ ಕೊಂಡು ಸುತ್ತಲಿನ ಪರಿಸರವನ್ನು ಆದಷ್ಟು ಚೊಕ್ಕ ಮಾಡಿ ಪ್ರಕೃತಿ ಮಾತೆಗೆ ಕೈ ಬೀಸಿ, ನಮ್ಮೊಡನೆ ಇದ್ದ ಅರಣ್ಯ-ಪರಿಸರ ಇಲಾಖೆಯವರಿಗೆ ಮನದುಂಬಿ ವಿದಾಯ ಹೇಳಿ ಬಸ್ಸಿನತ್ತ ಹೊರಟಾಗ ಸೂರ್ಯ ಪಡುವಣ ದಿಕ್ಕಿನತ್ತ ಸರಿಯ ತೊಡಗಿದ್ದ.

ಕೊಡಗು ದೇಶ - ವಿದೇಶಗಳಲ್ಲಿ **"ದಕ್ಷಿಣ ಕಾಶ್ಮೀರ", "ಭಾರತದ ಸ್ಕಾಟ್ ಲ್ಯಾಂಡ್"** ಎಂಬ ಹೆಗ್ಗಳಿಕೆಯನ್ನು ಪಡೆದು ಎಲ್ಲರನ್ನು ತನ್ನ ಸೌಂದರ್ಯದಿಂದ ಕೈಬೀಸಿ ಕರೆಯುತ್ತಿದೆ. ಈ **'ಹಿಲ್ ಸ್ಟೇಷನ್'** ಅನ್ನು ಹೊರಗಿನಿಂದ ವೀಕ್ಷಿಸಲು ತಂಡೋಪಾದಿಯಾಗಿ ಬರುವಾಗ ಇಲ್ಲೇ.... ಇರುವ ನಾವು ಒಮ್ಮೆಯಾದರು ನೋಡಬೇಕಲ್ಲವೆ? ಏನಂತೀರಾ...?

**ಮೂಡಗದ್ದೆ ಕೃಪಾ ಈರಪ್ಪ, ತಿತಿಮತಿ.**

---

## ಆನೆಗೆ ಏಕೆ ಸೊಂಡಿಲಿದೆ?

ಆನೆ ಇಂದು ಭೂಮಿಯ ಮೇಲಿರುವ ಅತಿ ದೊಡ್ಡ ಪ್ರಾಣಿ. ಅದು ಬಹಳ ಸಾಧು. ಅದು ಶಾಂತವಾಗಿರುತ್ತದೆ. ಆದ್ದರಿಂದ ಅದನ್ನು ಸುಲಭವಾಗಿ ಪಳಗಿಸಬಹುದು ಮತ್ತು ತರಬೇತಿ ಕೊಡಬಹುದು. ಆನೆಯ ತೂಕ ಸುಮಾರು 5 ಟನ್ನುಗಳಷ್ಟಿರುತ್ತದೆ. ಅದಕ್ಕೆ ನಾಲ್ಕು ಕಾಲುಗಳಿವೆ. ಈ ಕಾಲುಗಳು ಚಿಕ್ಕದಾಗಿರುತ್ತವೆ ಮತ್ತು ದಪ್ಪನಾಗಿರುತ್ತೆ. ಕಾಲುಗಳು ಚಿಕ್ಕದಾಗಿ ಮತ್ತು ದಪ್ಪನಾಗಿ ಇರುವುದರಿಂದ ಆಯ ತಪ್ಪದಂತೆ, ಹೆಚ್ಚು ಭಾರವನ್ನು ಅದು ಹೊರಬಲ್ಲುದು. ಅದಕ್ಕೆ ಮೇಲ್ದವಡೆಯಿಂದ ಹೊರಚಾಚಿ ಕೊಂಡಿರುವ ದಂಷ್ಟ್ರ ಅಥವಾ ದಂತಗಳಿರುತ್ತವೆ. ಈ ದಂತಗಳಿಂದ ಅದು ತನ್ನ ರಕ್ಷಣೆ ಮಾಡಿ ಕೊಳ್ಳುತ್ತದೆ. ಇದನ್ನೇ ಅದು ಆಯುಧಗಳಾಗಿ ಉಪಯೋಗಿಸುತ್ತದೆ. ಆದರೂ ಆಹಾರವನ್ನು ಅಗಿಯುವುದಕ್ಕೆ ಅದರ ಬಾಯಿಯೊಳಗೆ ದಂತಗಳಿವೆ.

ಆನೆ, ಹಿಂಡುಗಳಲ್ಲಿ ವಾಸಿಸುತ್ತದೆ. ಒಂದು ಹಿಂಡಿನಲ್ಲಿ ಹತ್ತರಿಂದ ಐವತ್ತು ಆನೆಗಳಿರುತ್ತವೆ. ಆನೆ ಹಿಂಡುಗಳು ಕಾಡುಗಳಲ್ಲಿ ಅಲೆದಾಡುತ್ತಿರುತ್ತವೆ. ಆನೆಯ ಬಣ್ಣ ಕಪ್ಪು ಛಾಯೆಯ ಮೇಲಿರುತ್ತದೆ. ಕೆಲವು ಬಿಳಿ ಆನೆಗಳು ಸಹ ಇರುತ್ತವೆ. ಇಂದು, ಆನೆಗಳಲ್ಲಿ ಎರಡು ವರ್ಗಗಳಿವೆ. ಒಂದು ಆಫ್ರೀಕಾದ ಆನೆಗಳು. ಮತ್ತೊಂದು ಏಷಿಯಾದ ಆನೆಗಳು.

ಸೊಂಡಿಲು ಆನೆಯ ಅತಿ ಮುಖ್ಯ ಅಂಗ. ಅದಿಲ್ಲದೇ ಅದು ಬದುಕಲಾರದು. ನಮಗೆ ಕೈ ಹೇಗೋ, ಆನೆಗೆ ಸೊಂಡಿಲು ಹಾಗೆ. ಇದು ಅದರ ಮೂಗಿನ ಮತ್ತು ಮೇಲ್ತುಟಿಯ ವಿಸ್ತೃತ ಭಾಗ ಇದು ಆನೆಯ ಕೈಗಳು. ಮೂಗು ಮತ್ತು ತುಟಿಗಳಂತೆ ಕೆಲಸ ಮಾಡುತ್ತದೆ. ಸೊಂಡಿಲಲ್ಲಿ ಸುಮಾರು 40,000 ಸ್ನಾಯುಗಳಿವೆ. ಇಷ್ಟೊಂದು ಅಧಿಕ ಸಂಖ್ಯೆಯ ಸ್ನಾಯುಗಳಿರುವುದ ರಿಂದ, ಅದು ಹೇಗೆ ಬೇಕಾದರೆ ಹಾಗೆ ಬಾಗುತ್ತದೆ ಮತ್ತು ಬಲಿಷ್ಠವಾಗಿರುತ್ತದೆ. ಆನೆ ತನ್ನ ಸೊಂಡಿಲಿ ನಿಂದ ಅತ್ಯಂತ ಭಾರವಾದ ಮರದದಿಮ್ಮಿಗಳನ್ನು ಎತ್ತಬಲ್ಲದು. ಅದರ ಸೊಂಡಿಲಿನ ತುದಿ, ಬೆರಳುಗಳಂತೆ ಕೆಲಸ ಮಾಡುತ್ತದೆ. ಅದು ಎಷ್ಟುಸೂಕ್ಷ್ಮವಾಗಿರುತ್ತದೆ ಎಂದರೆ, ಅದರ ಸಹಾಯದಿಂದ ಆನೆ ಒಂದು ಸಣ್ಣ ಸೂಜಿಯನ್ನು ಸಹ ಎತ್ತುತ್ತದೆ. ಈ ಸೊಂಡಿಲಿನಿಂದ ಆಹಾರವನ್ನು ತನ್ನ ಬಾಯಿಗೆ ಇಟ್ಟುಕೊಳ್ಳುತ್ತದೆ. ಅದು ನೀರನ್ನು ಸೊಂಡಿಲಿನಿಂದಲೇ ಕುಡಿಯುತ್ತದೆ. ಅದು ಸೊಂಡಿಲಿನಿಂದ ನೀರು ತುಂಬಿಸಿಕೊಂಡು ದೇಹದ ಮೇಲೆ ಎರಚಿ ಕೊಳ್ಳುತ್ತದೆ. ಹೀಗೆ ಸೊಂಡಿಲು ಆನೆಗೆ ತುಂಬ ಪ್ರಯೋಜನಕಾರಿ.

ಆನೆ 90 ವರ್ಷಗಳ ಕಾಲ ಬದುಕಿರುತ್ತದೆ. ಅದರಿಂದ ನಮಗೆ ಬಹಳ ಪ್ರಯೋಜನವುಂಟು. ಕಾಡಿನಲ್ಲಿ ಮರದ ದಿಮ್ಮಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ಆನೆಗಳನ್ನು ಬಳಸಿ ಕೊಳ್ಳಲಾಗುವುದು. ಸರ್ಕಸ್‌ಗಳಲ್ಲಿ ಆನೆಗಳು ನಮ್ಮನ್ನು ರಂಜಿಸುತ್ತವೆ.

**— ಪಿ. ಪಿ. ನೀಶಾ.**

---

# ಕೊಡಗಿನ ಗ್ರಾಮಗಳೆಷ್ಟು? ಗೊತ್ತಿದೆಯೇ?

ಕೊಡಗಿನ ಎಲ್ಲಾ ಮೂರು ತಾಲ್ಲೂಕುಗಳಲ್ಲಿ ಎಷ್ಟು ಗ್ರಾಮಗಳಿವೆ ಎಂಬುವುದು ಬಹುತೇಕ ಜನರಿಗೆ ತಿಳಿಯದ ವಿಷಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 1995ರಲ್ಲಿ ಹೊರತಂದಿರುವ 'ಕರ್ನಾಟಕ ಗ್ರಾಮ ಸೂಚಿ" ಯಲ್ಲಿ ಪ್ರಕಟವಾಗಿರುವಂತೆ ಸುಮಾರು 346 ಗ್ರಾಮಗಳಿವೆ. 1971ರ ಜನಗಣತಿಯಲ್ಲಿ ಕಾದಿಟ್ಟ ಅರಣ್ಯ ಪ್ರದೇಶಗಳನ್ನು ಕೂಡ ಗ್ರಾಮವೆಂದು ಪರಿಗಣಿಸಲಾಗಿದೆ. ಅವುಗಳನ್ನು ನಕ್ಷತ್ರ(*) ಚಿಹ್ನೆಯ ಮೂಲಕ ಇಲ್ಲಿ ತೋರಿಸಲಾಗಿದೆ. ಕೆಲವು ಗ್ರಾಮಗಳ ಹೆಸರುಗಳು ಬಿಟ್ಟು ಹೋಗಿರಬಹುದು ಓದುಗರು ಅದನ್ನು ಪಟ್ಟಿ ಮಾಡಿ ಕಳುಹಿಸಿ.

## ಮಡಿಕೇರಿ ತಾಲ್ಲೂಕು

ಅವಂದೂರು,
ಅಪ್ಪಂಗಳ
ಅಯ್ಯಂಗೇರಿ ಮತ್ತು ಕಾಡು
ಅರಪಟ್ಟು
ಅರುವತ್ತೊಕ್ಲು
ಅರೆಕಾಡು
ಇಬ್ಬನಿವಳವಾಡಿ
ಎಮ್ಮೆಮಾಡು
ಕಗ್ಗೊಡ್ಲು
ಕಡಗದಾಳು
ಕಡಮಕಲ್ಲು *
ಕರಡ
ಕರಣಂಗೇರಿ
ಕರಿಕೆ
ಕಳಕೇರಿ ನಿಡುಗಣೆ
ಕಾಟಕೇರಿ
ಕೊಟ್ಟೂರು
ಕಾರ್ಗುಂದ
ಕಾಲೂರು
ಕಾಂತೂರು
ಕಿಗ್ಗಾಲು
ಕಿರಂದಾಡು
ಕುಂಜಿಲ
ಕುಂದಚೇರಿ
ಕುಂಬಳದಾಳು
ಕೊಕೇರಿ
ಕೊಣಜಕೇರಿ
ಕೊಳಕೇರಿ
ಕಕ್ಕಬ್ಬೆ
ಕೊಳಗದಾಳು
ಕೊಯನಾಡು*
ಕೋಪಟ್ಟಿ
ಗಾಳಿಬೀಡು
ಚೇರಂಗಾಲ
ಚೇಲವಾರ
ತಣ್ಣಿಮಾನಿ
ತಲಕಾವೇರಿ ನಾಡು*
ನರಿಯಂದಡ
ನಾಪೋಕ್ಲು
ನಾಲಡಿ
ನೆಲಜಿ
ಪಾಲೂರು
ಸಣ್ಣಪುಲಿಕೊಟು
ಪುಷ್ಪಗಿರಿ
ಪೆರಾಜೆ
ಪೆರೂರು
ಬಲಮುರಿ
ಬಲ್ಲಮಾವಟಿ
ಬಾಡಗ (ಮಡಿಕೇರಿ ನಾಡು)
ಬಾಡಗ (ಭಾಗಮಂಡಲ ನಾಡು)
ಬಿಳಿಗೇರಿ
ಬೆಟ್ಟಗೇರಿ
ಬೆಟ್ಟತ್ತೂರು
ಬೇತು
ಬೇಂಗೂರು
ಭಾಗಮಂಡಲ
ಮಕ್ಕಂದೂರು
ಮಡಿಕೇರಿ
ಮದೆ
ಮರಗೋಡು
ಮುತ್ತಾರುಮುಡಿ
ಮುಂಡ್ರೋಟು
ಮೂಕ್ಕೊಡ್ಲು
ಮೇಕೇರಿ
ಮೇಲ್‌ಚೆಂಬು (ಚಂಬು)
ಮೊಣ್ಣಂಗೇರಿ
ಯವಕಪಾಡಿ
ಸಿಂಗತ್ತೂರು
ಸಂಪಾಜೆ
ಸೂರ್ಲಬ್ಬಿ
ಸೊಡ್ಲುರು ಕಟ್ಟೆಮಾಡು
ಹಮ್ಮಿಯಾಲ
ಹಾಕತ್ತೂರು
ಹೆಬ್ಬೆಟ್ಟಗೇರಿ
ಹೆರವನಾಡು
ಹೊದವಾಡ
ಹೊದ್ದೂರು
ಹೊಸಕೇರಿ

## ವೀರರಾಜ ಪೇಟೆ ತಾಲ್ಲೂಕು (ವಿರಾಜಪೇಟೆ)

ಅಟ್ಟೂರು
ಅಮ್ಮತಿ
ಅರಕೇರಿ ಕಾಡು ೧
ಅರಕೇರಿ ಕಾಡು ೨
ಅರಕೇರಿ ಕಾಡು ೩
ಅರಮೇರಿ
ಅರವತ್ತೊಕ್ಲು
ಅರೆಕಾಡು
ಆರ್ಜಿ
ಈ ಚೂರು
ಎಡೂರು
ಐಮಂಗಲ
ಕಡಂಗಮರೂರು
ಕಣ್ಣಂಗಾಲ
ಕದನೂರು
ಕರಡಿಗೋಡು
ಕಳತ್ಮಾಡು
ಕಾನೂರು
ಕಾರ್ಮಾಡು
ಕಾವಡಿ
ಕಿರ್ಗೂರು

ಕುಕ್ಲೂರು
ಕುರ್ಚಿ
ಕುಟ್ಟಾಂಡಿ
ಕುಮಟೂರು
ಕುಂಜಲಗೇರಿ
ಕುಂದ
ಕುಂಬೇರಿ
ಕೆದಮಳ್ಳೂರು
ಕೈಕೇರಿ
ಕೊಟ್ಟಗೇರಿ
ಕೊಟ್ಟಳ್ಳಿ
ಕೊಂಗಣ
ಕೋಳ್ತೋಡು ಬೈಗೋಡು
ಕೋಣಗೇರಿ
ಗುಯ್ಯ
ಚನ್ನಂಗಿ
ಚನ್ನಯ್ಯನ ಕೋಟೆ
ಚಿಕ್ಕಮಂಡೂರು
ಚೆಂಬೆ ಬೆಳ್ಳೂರು
ಚೇಣಿವಾಡ
ತಾವಳಗೇರಿ
ತುಚುಮಕೇರಿ
ತೆರಾಳು ಮತ್ತು ಕಾಡು
ತೈಲ
ದೇವನಗೇರಿ
ದೇವನೂರು
ದೇವಮುಚಿಕಾಡು
ಧನುಗಾಲ
ನಡಿಕೇರಿ
ನಲವತ್ತೊಕ್ಲು
ನಲ್ಲುಗೋಟೆ
ನಲ್ಲೂರು
ನಾಗರಹೊಳೆ
ನಾಲ್ಕೇರಿ
ನಾಲ್ಕೇರಿ ಕಾಡು ೧
ನಾಲ್ಕೇರಿ ಕಾಡು ೨
ನಾಂಗಾಲ
ನಿಟ್ಟೂರು
ನಿಡುಗುಂಬ
ನೆಮ್ಮಲೆ ಪೂರ್ವ
ನೆಮ್ಮಲೆ ಪಶ್ಚಿಮ
ನೆಲ್ಲಿ ಹುದಿಕೇರಿ
ನೊಕ್ಯ
ಪರಗಟಗೇರಿ
ಪಾಲಂಗಾಲ ಕಾಡು
ಪುಲಿಯೇರಿ
ಪೊನ್ನಂಪೇಟೆ
ಪೊರಾಡು
ಬಡಗರಕೇರಿ
ಭದ್ರಗೋಳ
ಬಲ್ಯಮಂಡೂರು
ಬಾಡಗ (ಶ್ರೀಮಂಗಲ ನಾಡು)
ಬಾಡಗ (ವಿರಾಜಪೇಟೆ ನಾಡು)
ಬಾಡಗ ಬಾಣಂಗಾಲ
ಬಾಲಾಜಿ
ಬಾಳೆಲೆ
ಬಿಟ್ಟಂಗಾಲ
ಬಿರುನಾಣಿ
ಬಿಳುಗುಂದ
ಬೀರುಗ
ಬೀಳೂರು
ಚಿಕ್ಕೆಸೂಡ್ಲೂರು
ಬೆಸಗೂರು
ಬೆಳ್ಳುಮಾಡು
ಬೆಳ್ಳೂರು
ಬೇಗೂರು
ಬೇಟೋಳಿ
ಬೈರಂಬೆಡ
ಮಗ್ಗುಲ
ಮತ್ತೂರು
ಮಂಚಳ್ಳಿ ಕಾಡು
ಮಾಲ್ದಾರೆ
ಮಾಯಾಮುಡಿ
ಮುಗಟಗೇರಿ (ಪೊನ್ನಂಪೇಟೆ ನಾಡು)
ಮುಗಟಗೇರಿ (ಶ್ರೀಮಂಗಲ ನಾಡು)
ಮೇಕೂರು ಹೊಸಕೇರಿ
ಮೈತಾಡಿ
ರುದ್ರಗುಪ್ಪೆ
ರುದ್ರಬೀಡು
ವಿರಾಜಪೇಟೆ
ಶ್ರೀಮಂಗಲ
ಸಿದ್ದಾಪುರ (ಅಮ್ಮತಿ)
ಸಿದ್ದಾಪುರ (ಪೊನ್ನಂಪೇಟೆ)
ಬಿ. ಸೆಟ್ಟಿಗೇರಿ
ಟಿ. ಸೆಟ್ಟಿಗೇರಿ
ಹಚ್ಚಿನಾಡು
ಹತ್ಗೂರು ಕಾಡು ೧
ಹತ್ಗೂರು ಕಾಡು ೨
ಹರಿಹರ
ಹಲುಗುಂದ
ಹಳ್ಳಿಗಟ್ಟು
ಹಾತೂರು
ಹುದಿಕೇರಿ
ಹುದೂರು
ಹೆಗ್ಗಳ
ಹೆಬ್ಬಾಲೆ
ಹೈಸೊಡ್ಲೂರು
ಹೊಸೂರು

**ಸೋಮವಾರ ಪೇಟೆ ತಾಲ್ಲೂಕು**

ಅಟ್ಟೂರು ಕಾಡು
ಅತ್ತೂರು ನೆಲ್ಲೂರು
ಅಬ್ಬಿಮಠ
ಅಬ್ಯೆತ್‌ಮಂಗಲ
ಅವರೆದಾಳು
ಅಂಕನ ಹಳ್ಳಿ
ಅಂಜನಗೇರಿ ಬೆಟ್ಟಕೇರಿ
ಅಂದಗೋವೆ
ಅಗಳಿ
ಆಲೂಕು ಸಿದ್ದಾಪುರ
ಆನೆಕಾಡು
ಎಡವನಾಡು ಕಾಡು ೧
ಎಡವನಾಡು ಕಾಡು ೨
ಊರುಗುತ್ತಿ
ಉಲುಗುಲಿ
ಎಡೂರು
ಐಗೂರು (ಸೋಮವಾರಪೇಟೆ ನಾಡು)
ಐಗೂರು (ಸುಂಟಿಕೊಪ್ಪ ನಾಡು)
ಐರಲೆವಲಮುಡಿ
ಕಟ್ಟೆಪುರ
ಕಟ್ಟೆಪುರ ಕಾಡು
ಕಲ್ಕಂದೂರು
ಕಲ್ಲೂರು
ಕಸೂರು
ಕಾಜೂರು
ಕಾನಬೈಲು ಬೈಚನಹಳ್ಳಿ

---

**ಬೋಳು ತಲೆಗೆ ಎಣ್ಣೆ ಹಚ್ಚಬೇಡ, ಉಂಡವರಿಗೆ ಊಟ ಇಕ್ಕಬೇಡ**

ಕಾಂಡನ ಕೊಲ್ಲಿ
ಕಿತ್ತೂರು
ಕಿರಗಂದೂರು
ಕಿರುಕೊಡ್ಲಿ
ಕುಮರಳ್ಳಿ
ಕುಮರಳ್ಳಿ ಕಾಡು
ಕುಶಾಲನಗರ (ಫ್ರೇಜರ ಪೇಟೆ)
ಕುಸುಬೂರು
ಕುಂದಳ್ಳಿ
ಕುಂಬೂರು
ಕೂಡಿಗೆ
ಕೂಡುಮಂಗಳೂರು
ಕೂಡ್ಲೂರು ಶೆಟ್ಟಿಹಳ್ಳಿ
ಕೂತಿ
ಕೆದಕಲ್ ಮೇಗದಾಳು
ಕೆರೆಕೇರಿ
ಕಳಕೊಡ್ಲಿ
ಕೊತ್ತನ ಹಳ್ಳಿ
ಕೊರ್ಗಲ್ಲು
ಗಡಿನಾಡು ಕಾಡು
ಗಣಂಗೂರು
ಗರಗಂದೂರು
ಗರವಾಲೆ
ಗಂಧದ ಕೋಟೆ ಕಾಡು
ಗೋಣಿ ಮಾರೂರು
ಗೋಪಾಲಪುರ
ಗೌಡಳ್ಳಿ
ಚನ್ನನಪುರ (ಚನ್ನಾಪುರ)
ಚಿಕ್ಕತೋಳೂರು
ಚಿಕ್ಕನಹಳ್ಳಿ (ಚಿಕ್ಕಹಳ್ಳಿ)
ಚೇರಳ ಶ್ರೀಮಂಗಲ
ಚೌಡೇನಹಳ್ಳಿ
ಚೌಡ್ಲು
ಜನಾರ್ಧನಹಳ್ಳಿ
ಜೇನುಕಲ್ಲು ಕಾಡು
ತಳತಾರೆ ಶೆಟ್ಟಳ್ಳಿ
ತಾಕೇರಿ
ತೋರೆನೂರು
ತೋಳೂರು ಶೆಟ್ಟಳ್ಳಿ
ದುಂಡಳ್ಳಿ
ದೊಡ್ಡಕಣಗಾಲು
ದೊಡ್ಡ ಕೊಡ್ಲಿ

ದೊಡ್ಡ ಕೋಲತೂರು
ದೊಡ್ಡ ತೋಳೂರು
ದೊಡ್ಡ ಬಿಳಹ
ದೊಡ್ಡ ಭಂಡಾರ
ದೊಡ್ಡ ಮಾಳ್ತೆ
ನಂಜರಾಯ ಪಟ್ಟಣ
ನಂದಿಗುಂದ
ನಾಕಲಗೋಡು
ನಾಲ್ಕೂರು ಶಿರಂಗಾಲ
ನಿಡ್ತ
ನಿಡ್ತ ಕಾಡು ೧
ನಿಡ್ತ ಕಾಡು ೨
ನಿಲುವಾಗಿಲು
ನೀರುಗುಂದ
ನೆಲ್ಲಿಯ ಹುದಿಕೇರಿ
ನೇಗಳ್ಳಿ ಕಕ್ಕಳ್ಳಿ
ನೇರುಗಳಲೆ
ಬಗೇರಿಕಾಡು
ಬಸವನಹಳ್ಳಿ
ಬಳಗುಂದ
ಬಂಡೀ ಬೆಟ್ಟಕಾಡು
ಬ್ಯಾಡಗೊಟ್ಟ
ಬಿದರೂರು
ಬಿಳಿಗೇರಿ
ಬಾಳುಗೋಡು
ಬೆಟ್ಟದಳ್ಳಿ
ಬೆಟಗೇರಿ
ಬೆಲ್ಲಾರಳ್ಳಿ
ಬೆಂಬಳೂರು
ಬೇಳೂರು ಬಸವನಹಳ್ಳಿ
ಬೈಚನಹಳ್ಳಿ
ಮಕ್ಕಂದೂರು
ಮಣಗಲಿ
ಮಣಜೂರು
ಮರೂರು
ಮಸಗೋಡು
ಮಂಜೂರು
ಮಾಡ್ರೆ
ಮಾಲಂಬಿ
ಮಾಲಂಬಿ ಕಾಡು ೨
ಮಾಲಂಬಿ ಕಾಡು ೩
ಮಾವಿನಹಳ್ಳಿ ಕಾಡು

ಮುಳ್ಳುಸೋಗೆ
ಮುಳ್ಳೂರು
ಮೂದ್ರವಳ್ಳಿ
ಮೂಕ್ಕೊಡಲು
ಮೂವತ್ತೊಕ್ಕಲು
ಮೆಣಸೆ
ಮೈಲಾತಪುರ
ಯಲಕ್ನೂರು
ರಸೂಲಪುರ ಬೆಟ್ಟಕೇರಿ
ವಾಲ್ನೂರು ತ್ಯಾಗತ್ತೂರು
ಶನಿವಾರಸಂತೆ
ಶಾಂತಳ್ಳಿ
ಶಿರಂಗಾಲ
ಶಿವರಳ್ಳಿ
ಶುಂಠಿ
ಸಂದಲೋಟಿಕಾಡು
ಸಿಡಿಗಳಲೆ
ಸಿದ್ದಾಪುರ
ಸಿದ್ದಾಪುರ ಮತ್ತು ಆಲೂರು ಕಾಡು
ಆಲೂರು ಸಿದ್ದಾಪುರ
ಸಿರಂಗಳ್ಳಿ
ಸುಂಟಿಕೊಪ್ಪ
ಸೂರ್ಲಬಿ
ಸೋಮವಾರ ಪೇಟೆ
ಹಮ್ಮಿಯಾಲ
ಹರಗ
ಹಾನಗಲ್ಲು (ಹಾನಗಲ್ಲು ಶೆಟ್ಟಳ್ಳಿ)
ಹಾರೋಹಳ್ಳಿ
ಹಿತ್ತುಕೇರಿ
ಹುಲಸೇ (ಶನಿವಾರಸಂತೆ ಹೋಬಳಿ)
ಹುಲಸೆ (ಕುಶಾಲನಗರ ಹೋಬಳಿ)
ಹೆಗ್ಗುಳ
ಹೆಬ್ಬಾಲೆ
ಹೆಬ್ಬುಲಸೆ
ಹೇರೂರು
ಹೊನ್ನೆಕೋಡ
ಹೊನ್ನೇಹನ ಕೋಡು
ಹೊಸಕೋಟೆ
ಹೊಸರಂಗಪುರ
ಹೋರೂರು
ಕೂಡ್ಲೂರು

ಗೋವಿಂದಮ್ಮನ ಪ್ರವೀಣಕುಮಾರ,
ಬೆಂಗಳೂರು.

ಬೇವು ಬಿತ್ತಿ ಮಾವು ಪಡೆಯಲಾಗದು

# ಪತ್ರ ವಿಭಾಗ :

KODAGU SANGATHI JAYALAKSHMIPURAM MYSORE 570012

## ಅರೆ ಭಾಷೆಯಲ್ಲಿ ಪ್ರಶ್ನೋತ್ತರ

ಮಾನ್ಯರೇ,

ನಿಮಗೆ ನನ್ನ ಪುಟ್ಟ ಸಲಹೆ ಅಥವಾ ಕೋರಿಕೆ ಏನು ಅಂತ ಹೇಳಿದ್ರೆ ನೀವು ಈ ನಮ್ಮ ಗೌಡ ಜನಾಂಗದ ಹೆಮ್ಮೆಯ ಪತ್ರಿಕೆಯಾದ "ಕೊಡಗು ಸಂಗಾತಿ" ಪತ್ರಿಕೆಯಲ್ಲಿ, ಇತರ ಪತ್ರಿಕೆಯಲ್ಲಿರುವಂತೆ, ಉದಾಹರಣೆಗೆ ಮಲೆನಾಡುವಾರ್ತೆ, ಮಂಗಳಾ ಇತ್ಯಾದಿಗಳಲ್ಲಿ ಓದುಗರ ಪ್ರಶ್ನೆಗಳಿಗೆ ಸಂಪಾದಕರ ಉತ್ತರ ಇರುತ್ತದೆ. ಹಾಗೆಯೇ ಈ ನಮ್ಮ "ಕೊಡಗು ಸಂಗಾತಿ" ಪತ್ರಿಕೆಯಲ್ಲೂ ಕೂಡ "ಅರೆ ಭಾಷೆಯಲ್ಲಿಯೇ ಪ್ರಶ್ನೆ ಕೇಳಿ, ಅರೆಭಾಷೆಯಲ್ಲೇ ಉತ್ತರ ಇರುವಂತೆ ನೀವು ಈ ಒಂದು ವಿಷಯವನ್ನು ಒಂದು ಪುಟದಲ್ಲಿ ಅಂದ್ರೆ 15-20 ಪ್ರಶ್ನೆಗೆ ಸಂಪಾದಕರ ಉತ್ತರ ಇರಲಿ ಅಂತ ನನ್ನ ವಿನಮ್ರ ಕೋರಿಕೆ. ನೀವು ದಯವಿಟ್ಟು ಪತ್ರಿಕೆಯ ಮೂಲಕ ಜನಾಂಗದವರಿಗೆ ತಿಳಿಸಿ ಪ್ರಶ್ನೆಗಳು ಬರುವಂತೆ ಮಾಡಿ ಈ ಒಂದು ಹೊಸ ವಿಭಾಗವನ್ನು ಪ್ರಾರಂಭಿಸಬೇಕು ಅಂತ ಕೇಳಿಕೊಳ್ಳುತ್ತಿದ್ದೇನೆ. ಇದರಿಂದ ನಮ್ಮ ಹಾಗೂ ನಿಮ್ಮಲ್ಲಿಯ ನಡುವೆ ಪತ್ರದ ಮೂಲಕ ಹಲವು ಪ್ರಶ್ನೆಗಳಿಗೆ ಸ್ವಾರಸ್ಯಕರವಾದ, ಅರ್ಥಪೂರ್ಣವಾದ, ಉತ್ತರ ಸಿಗುವಂತಾಗಲಿ ಅಂತ ಕೇಳಿಕೊಳ್ಳುತ್ತಿದ್ದೇನೆ.

ವಂದನೆಗಳು, ನೈಯಣ್ಣೀರ . ಎಂ . ರಶಿ, ಕಡಿಯತ್ತೂರು.

## ಪ್ರೌಢಶಾಲಾ ಮಕ್ಕಳಿಗೆ ಸೋಬಾನೆ

ಮಾನ್ಯರೆ,

ಕೊಡಗಿನ ಗೌಡರು ಮತ್ತು ದಕ್ಷಿಣ ಕನ್ನಡ ಗೌಡರು ಎಲ್ಲೆಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವರೋ ಅಲ್ಲೆಲ್ಲಾ ಗೌಡ ಸಮಾಜಗಳು ಸ್ಥಾಪನೆಯಾಗಿದೆ. ಇನ್ನು ಕೆಲವೆಡೆ ಸ್ಥಾಪನೆ ಆಗುತಿದೆ. ಇದೊಂದು ಸ್ವಾಗತಾರ್ಹ ವಿಷಯ. ಆದರೆ ಬಹುತೇಕ ಸಮಾಜಗಳು ವರ್ಷಕೊಂದು ಕೈಲುಮುಹೂರ್ತ(ವಾರ್ಷಿಕ ಸಭೆ ಸೇರಿದಂತೆ) ನಡೆಸುವುದನ್ನು ಬಿಟ್ಟರೆ ಗೌಡರ ಸಂಸ್ಕೃತಿ ಮತ್ತು ಅರೆಭಾಷೆಗಳ ಬೆಳವಣಿಗೆಗೆ ಸಾಕಷ್ಟು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿಲ್ಲ ಎಂಬುದು ನನ್ನ ಭಾವನೆ.

ಕಳೆದ ವರ್ಷದ ಪ್ರಾರಂಭದಲ್ಲಿ ನಾನು ಕೊಡಗಿಗೆ ಹೋಗಿದ್ದಾಗ ಅಲ್ಲಿ ಗೌಡ ಸಾಂಸ್ಕೃತಿಕ ಅಕಾಡೆಮಿಯ ಕೆಲ ಕಾರ್ಯಕಾರಿ ಮಂಡಳಿ ಸದಸ್ಯರನ್ನು ಭೇಟಿಯಾಗಿದ್ದೆ. ಆ ಸಂದರ್ಭದಲ್ಲಿ ಕೊಡಗು ಜಿಲ್ಲೆಯ ಪ್ರೌಢ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ "ಸೋಬಾನೆ" ಸ್ಪರ್ಧೆಯನ್ನು ಏರ್ಪಡಿಸುವ ಸಲಹೆ ನೀಡಿದ್ದೆ. ಆದರೆ ಇದು ಕಾರಣಾಂತರಗಳಿಂದ ಚಾಲನೆಗೆ ಬರಲಿಲ್ಲ. ಕೊಡಗಿನಲ್ಲಿ ನಡೆಯುವ ಹೆಚ್ಚಿನ ಮದುವೆಗಳಲ್ಲಿ "ಸೋಬಾನೆ" ಹಾಡು ಕೇಳುವುದೇ ದುರ್ಲಭವಾಗಿದೆ. ನಮ್ಮ ಸಂಘ ಸಂಸ್ಥೆಗಳು ಈ ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಬೇಕು ಬಹುಮಾನದ ಆಸೆ ತೋರಿಸಿ ಸಂಸ್ಕೃತಿಯು ಕಳೆದು ಹೋಗುತ್ತಿರುವ ಕೊಂಡಿಯೊಂದನ್ನು ಉಳಿಸಿಕೊಳ್ಳುವುದು ಸೂಕ್ತ. ಸರ್ಕಾರಿ ಸಂಸ್ಥೆಗಳ ನೆರವು ಪಡೆದು ಭಾಗವಹಿಸಿದವರಿಗೆ ಪ್ರಮಾಣ ಪತ್ರಗಳನ್ನು ನೀಡಿದರೆ ಸ್ಪರ್ಧಿಗಳಿಗೂ ಸಹಾಯವಾಗುವುದು. ಒಮ್ಮೆ ಈ ಕಾರ್ಯಕ್ರಮ ಪ್ರಾರಂಭವಾದರೆ ಮುಂದೆ ವಿವಿಧ ವಯೋವರ್ಗದವರಿಗೆ ಸ್ಪರ್ಧೆ ನಡೆಸಬಹುದು. ಸಂಸ್ಕೃತಿಯನ್ನು ಉಳಿಸುವ ಪ್ರಥಮ ಹೆಜ್ಜೆಯಾಗಿ ಈ ಕಾರ್ಯಕ್ರಮವನ್ನುನಡೆಸಲು ಯಾವುದಾದರು ಒಂದು ಸಮಾಜವು ಅಕಾಡೆಮಿ ಮುಂದೆ ಬಂದರೆ ಸ್ವಾಗತಾರ್ಹ.

— ಗೊಂವಿಂದಮ್ಮನ ಪ್ರವೀಣಕುಮಾರ್, ಬೆಂಗಳೂರು

## ಅರಿವಿಲ್ಲದೆಯೇ ಜ್ಞಾನಾರ್ಜನೆ

"ಕೊಡಗು ಸಂಗಾತಿಯ ಪುಸ್ತಕವು ಚಿಕ್ಕದಾದರೂ ಅದರಲ್ಲಿ ಅಡಕವಾಗಿರುವ ಕೊಡಗಿನ ವೀರರು ಅಲ್ಲಿಯ ಜನಾಂಗದವರು ಯಾವ ರೀತಿಯಲ್ಲಿ ಮುಂದುವರೆದು ಕಷ್ಟ ಸಹಿಸಿ ಶ್ರಮ ವಹಿಸಿ ಜೀವವನ್ನು ಮುಡುಪಾಗಿಟ್ಟಿದ್ದರು, ಈ ಜನಾಂಗದ ಅರೆಭಾಷೆ ಪಾಕ್ಷಿಕ ಪತ್ರಿಕೆ, ಮದುವೆ ಸಮಾರಂಭಗಳನ್ನು ನೋಡಿದಾಗ, ಕೊಡಗು ಜನಾಂಗದ ಆಚರಣೆಗಳು ಮನಸ್ಸಿಗೆ ನಿಜವಾಗಿ ಒಂದು ರೀತಿಯ ವಿಶಿಷ್ಟ ಉತ್ಸಾಹದ ಚಿಲುಮೆ ಎನಿಸುತ್ತದೆ. ಅಂತರಂಗದಲ್ಲಿ ಹುದುಗಿರುವ ಕಥೆಗಳನ್ನೆಲ್ಲಾ ಸ್ವಾರಸ್ಯಕರವಾಗಿ ಹನಿ-ಹನಿಯಾಗಿ ನಮಗೆ ಉಣಿಸಿ ನಮಗರಿವಿಲ್ಲದೆ ನಮ್ಮ ಜ್ಞಾನಾರ್ಜನೆಗೆ ನಾಂದಿಯಾಗಿದೆ.

"ಪುಸ್ತಕಗಳಿಲ್ಲದೆ ಈಶ್ವರನೂ ಮೌನಿ, ನ್ಯಾಯದೇವತೆ ನಿದ್ರಿಸುತ್ತಾಳೆ. ಪುಸ್ತಕಗಳ ಬೆಲೆ ರತ್ನಗಳಿಗಿಂತಲೂ ಅಧಿಕ, ರತ್ನಗಳಿಗೆ ಹೊರಗಿನ ಹೊಳಪು ಇದ್ದರೆ ಪುಸ್ತಕಗಳಲ್ಲಿ ಗಾಢ ವಿಚಾರ ಇರುತ್ತದೆ. "ಉರಿಸಲು ಹಳೆಯ ಸೌದೆ, ಕುಡಿಯಲು ಹಳೆಯ ಮದ್ಯ, ಓದಲು ಹಳೆಯ ಪುಸ್ತಕಗಳು ಚೆಂದ" ಕೇವಲ ಓದಿದರೆ ಸಾಲದು, ಅದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಕಲಿಯಬೇಕು.

"ಓದುಬಾರದ ದೊರೆ, ಕಿರೀಟ ಹೊತ್ತ ಕತ್ತೆ" ಎರಡೂ ಒಂದೇ. ಮನುಷ್ಯ ಕಲಿಯಬೇಕೆಂದಿದ್ದರೆ, ಅವನ ಪ್ರತಿಯೊಂದು ತಪ್ಪು ತಿದ್ದಿಕೊಳ್ಳಬೇಕು. ಸಂಸಾರ ಸಾಗರ, ಮನುಷ್ಯ ಮತ್ತು ಅವನ ಕಾರ್ಯಕಲಾಪಗಳು, ಅವನ ಆತ್ಮಕ್ಕೆ ಒಂದು ಆಕಾರ ರೂಪಿಸುತ್ತದೆ. ಜೀವನದಲ್ಲಿ ಏರಿಳಿತಗಳು ಸಹಜ, ತುಂಬಾ ಬೇಜಾರಾದಾಗ ಯಾರ ಜೊತೆಗೂ ಬೆರೆಯಬೇಕೆಂಬ ಇಚ್ಛೆಯು ಆಗುವುದಿಲ್ಲಾ. ಒಂಟಿತನದಿಂದ ಇದ್ದರೆ ಅದು ನಮ್ಮನ್ನು ಕಾಡುತ್ತಿರುತ್ತದೆ. ಆಗ ನಮಗೆ ಅತ್ಯುತ್ತಮ ಸಂಗತಿಗಳನ್ನು ಓದುತ್ತಾ ಹೋದಂತೆ ಮನಸ್ಸು ಹಗುರವಾಗಿ ಮೈಮನಗಳಲ್ಲಿ ನವಚೈತನ್ಯ ಬರುತ್ತದೆ. ನಮ್ಮ ಜೀವನದ ದಿಶೆಯನ್ನು ಬದಲಾಯಿಸಲು ಸಾಧ್ಯ. ಹಾಗೂ ಒಳ್ಳೆಯ ವ್ಯಕ್ತಿತ್ವ ಬೆಳೆಸಿಕೊಳ್ಳಲು ಮಾರ್ಗದರ್ಶನ ವಾಗುವುದು.

"ಮಲೆನಾಡಿನ ಮಡಿಲಲ್ಲಿ ಬೆಳೆದ ಮಗಳು ತೀರ್ಥಹಳ್ಳಿಯ ಜಯಶ್ರೀ ಸುಬ್ಬಯ್ಯ ಉಳುವಾರನ, ನಾನು ಉಳುವಾರ ಲಲಿತಮ್ಮ ಮಾದಯ್ಯನವರ ಸೊಸೆಯಾಗಿ, ನನ್ನ ಅಚ್ಚುಮೆಚ್ಚಿನ ಸಂಗಾತಿಯಾದ ಕೊಡಗು ಸಂಗಾತಿಯೇ ನಿನಗಾಗಿ ಕಾಯುತ್ತಿರು ಪೆನು. ಹೊಸ ಹೊಸ ವಿಷಯಗಳನ್ನು ಹೊತ್ತು ತಂದು, ನಮ್ಮ ಜನಾಂಗಕ್ಕೆ ದಾರಿ ದೀಪವಾಗಿ, ಸದಾ ನಗುವ ಸಂಗಾತಿಯಾಗಿ, ಹೀಗೆ ದೀರ್ಘಕಾಲ ಪ್ರಸಿದ್ಧಿ ಯಶಸ್ಸು ಗಳಿಸಲಿ ಎಂದು ನನ್ನ ಹಾರೈಕೆ.....

— ಉಳುವಾರನ ಸುಬ್ಬಯ್ಯ ಜಯಶ್ರೀ, ಮೈಸೂರು

ಬೆಕ್ಕಿಗೆಚೆಲ್ಲಾಟ ಇಲಿಗೆ ಪ್ರಾಣ ಸಂಕಟ

# ನನ್ನ ಮಗ್ಳ್

ನನ್ನ ಮಗ್ಳ್‌ನ ಇಲ್ಲಿವರೆಗೆ ಸಾಂಕಿಕೆ ಎರ್ಡ್ ಲಕ್ಷ ಕರ್ಚ್ ಆಗುಟ್ಟು. ಕಾಲೇಜ್‌ಗೆ ಕಳ್ಸಿದೆ. ಬಟ್ಟೆ. ಚಪ್ಪಲ್, ಕ್ಯೂಟೆಕ್ಸ್, ಪಿಚ್ಚರ್ ತಿಯೇಟರ್‌ಗೆ ಭಂಡಾರ ಹಾಕಿ, ಇಪ್ಪತ್ತೆಂಟ್ ಟ್ರೈನಿಂಗ್ ಆಗಿ, ಅದ್ ಸಾಲದೆ ಲಂಚ ಕೊಟ್ಟ್ ನರ್ಸ್ ಟ್ರೈನಿಂಗ್ ಮಾಡ್ಸಿದೆ ಹಿಂಗೆ ತುಂಬಾ ಕರ್ಚ್ ಆಗುಟ್ಟು. ಅದರಿಂದ ನನ್ನ ಮಗ್ಳ್‌ನ ಮದ್ವೆ ಆಗೊ ವರದಕ್ಷಿಣೆ ನಂಗೆ ಕೊಡಕುತ ದಿನಂದಿನಕೆ ತುಂಬಾ ಅರ್ಜಿಗ ಬಂದೊ. ಒಂದ್‌ದಿನ ಎಲ್ಲವರ್ನ ಒಟ್ಟಿಗೆ ಬಾಕೇಳ್ದೆ. ಎಲ್ಲವೂ ಬಂದೊ. ನೋಡಿ ನಿಮ್ಮ ವಯ್ಸ್, ಕೆಲ್ಸ, ಸಂಬಳ ಎಷ್ಟ್ ಹೇಳಿತ ಕೇಳ್ದೆ. ಎಲ್ಲವೂ ಹೇಳ್ದೊ ಒಬ್ಬ ಮಾತ್ರ ಸುಮ್ಮನೆ ಇತ್ತ್. ಅಂವ ಕೋಟ್ ಹಾಕಿ, ಟೈ ಕಟ್ಟಿ, ಶೂ ಹಾಕಿ ಜೋರಾಗಿತ್ತ್. ನೋಡಿಕೆ ಒಳ್ಳೆ ಪೊರ್ಲಾಗಿ ಉಟ್ಟು. ನಾನ್ ಕೇಳ್ದೆ ನೀನ್ ಎಂತ ಕೆಲ್ಸಲಿ ಇರ್ದುಯಾ. ಅಂವ ಹೇಳ್ತ್ ನಾನ್ "T.M.B."ತ ನಂಗೆ ಅರ್ಥ ಆತ್‌ಲೆ. ಮಗ್ಳ್‌ನ ಕೇಳ್ದೆ ಹಂಗೆ ಹೇಳ್ರೆ ಎಂತನೇ? ಅವು "ತಾರ ಮಾರ ಬಿಸ್‌ನೆಸ್" ಮಾಡ್‌ತೊಳೊತಾ ಹೇಳ್ತ್. ನಂಗೆ ಕುಷಿ ಆತ್. ಇವನ ಹತ್ರ ತುಂಬಾ ಲಕ್ಷಗ ದುಡ್ಡ್ ಇರ್ದ್. ಹೆಂಗಾರ್ ಮಗಳ ಒಪ್ಪಿಸಿದೆ. ಇವನ ಹತ್ರ ವರದಕ್ಷಿಣೆ ವಿಷಯ ಮಾತಾಡ್ದುಲೆ, ಮಗಳ ಮದ್ವೆ ಆಗಲಿ ಮತ್ತೆ ಲಕ್ಷನ ವಸೂಲಿ ಮಾಡ್‌ನೆ. ಆತ್ ಏಳ್ ದಿನಲಿ ತುಪ್ಪ ತರವು ಮೂರೇ ದಿನಲಿ ತಂದ್ ಬುಟ್ಟೋ. ಮಗ್ಳುನ ಕೇಳ್ದೆ ಹೆಂಗೆ ದುಡ್ಡ್ ಎಲ್ಲಾ ಬ್ಯಾಂಕ್‌ಲಿ ಉಟ್ಟಾ, ಪೆಟ್ಟಿಗೆಲಿ ಉಟ್ಟಾ. ಇವ್ಳು ಅಪ್ಪ ನಾನ್ ಗುಂಡಿಗೆ ಬಿದ್ದ್ ಬುಟ್ಟೆತೇಳಿ ಮರ್ಬತ್. ನಾನ್ ಸುತ್ತಾ ನೋಡ್ದೆ. ಎಲ್ಲಿ ಗುಂಡಿನೇ ಕಾಣ್‌ತಿಲ್ಲೆ. ಹಂಗೆ ಅಲ್ಲಪ್ಪ ನನ್ನ ಕಟ್ಟಿ ಕಂಡವು ಯಾವ ಬಿಸ್‌ನೆಸ್ ಮಾಡ್‌ತಿಲ್ಲೆ. ತಾರಾ ಮಾರಾ ಬಾರ್‌ಗೆ ಹೋದು, ಸಿಕ್ಕಿದ ಗೂಡೆನ ಒಟ್ಟಿಗೆ ತಿರ್ಗ್ದು ತೇಳ್‌ಕನ ನಾನ್ ಹಾಕಿದ ಎರ್ಡ್ ಪೆಗ್ ಇಳ್ದ್ ಹೋತ್. ನಾನ್ ಸ್ವಲ್ಪ ಗ್ಯಾನ ಮಾಡ್ದೆ ಅಂವ ಯಾಕೆ ಹಿಂಗಾತ್. ಈತರ ಆಕೆ ನಾ ಬುಡ್ಕ್‌ಲೆ ಅವನ ಒಳ್ಳದಾರಿಗೆ ತನ್ನೆ. ಕರಿ ಇಲ್ಲಿ. ಅಂವ ಬಾತ್ ಎರ್ಡ್ ಜೋಬಿಗೆ ಕೈ ಹಾಕಂಡ್. ನೋಡ್ ನೀನ್ ಇಲ್ಲಿವರೆಗೆ T.M.B. ಮಾಡ್ದ್ ಸಾಕ್? ಅಪ್ಪ ಇಂತ ಗಂಡನೊಟ್ಟಿಗೆ ನಂಗೆ ಬದ್ಕ್‌ಕೆ ಆಲೆ. ನಾನ್ ಇಲ್ಲೆ ಇದ್ದನೆ. ನೋಡವ್ವ ನೀನ್ ದುಡ್ಕ್‌ಬಡ. ಮನ್‌ಸ ಎಷ್ಟೆ ಕೆಟ್ಟಂವ ಆದ್ರೂ ಒಳ್ಳೆತನಂದ ಬುದ್ಧಿ ಹೇಳ್ರೆ ಕೇಳೆ ಕೇಳ್ಟೆ. ನೋಡಿ ಅಳಿಯಂದ್ರೆ, ನಿಮ್ಮ ದುಶ್ಚಟನ ನಿಲ್ಸಿ. ನಿಮ್ಮನ ನೀವೆ ಹಾಳ್ ಮಾಡಕಣ್‌ತೋಳರಿ. ನೀವು ಬದ್ಕುಕು ಸುಖ ಸಂಪತ್ತ್ಂದ ಬಾಳಕು ನಂಗೆ ಮಂಜ, ಮಗ್ಳುತೇಳಿ ಇರ್ದ್ ಇವ್ಳು ಒಬ್ಬೆ. ಮಾಂವ ನನ್ನ ಕ್ಷಮಿಸಿ ಇನ್ನ್ ಮುಂದೆ ನಾನ್ ಇಂತ ಕೆಟ್ಟ ಚಟಕ್ಕೆ ಬಲಿ ಆದುಲೆ. ನೋಡವ್ವ, ನಿನ್ನ ಗಂಡ ತಿಳಿಯದೆ ತಪ್ಪು ಮಾಡಿರ್ದ್. ಅವನ ಹಂಗೆ ಬುಟ್ಟರೆ ಇನ್ನೂ ಕೆಟ್ಟಂವ ಆದೆ, ಹೆಂಗಾರ್ ಮಾಡಿ ಒಳ್ಳದಾರಿಗೆ ತರಕು. ನಮ್ಮ ಸಮಾಜಲಿ ಎಷ್ಟೋ ಜನ ಕೆಟ್ಟವು ಆಗ್ತಾ ಇದ್ದವೆ, ಬಡವ ಬಡವ ಆಗ್ತಾ ಇದ್ದದೆ. ಶ್ರೀಮಂತ ಶ್ರೀಮಂತ ಆಗ್ತಾ ಇದ್ದದೆ. ಯಾಕೆ ಗೊತ್ತಾ ಜನಂದಾಗಿ ಅವು ಆಡ್‌ವ ಚುಚ್ಚ್ ಮಾತ್‌ಗಳಿಂದ ಅವು ಮಾಡ್‌ವ ಮೋಸ ವಂಚನೆಗಳಿಂದ ಬಡವ ಕಷ್ಟಬಾಕನ ಇರ್‌ವವನ ಹತ್ರ ಸಾಲ ಕೇಳ್ದೆ. ಆಗ ಅಂವ ಆಸ್ತಿ ಮಾರಿಯಾ, ಬೋಗ್ಯಕ್ಕೆ ಕೊಟ್ಟೆಯಾತ ಕೇಳ್ದೆ. ಇವಂಗೆ ವಿಧಿ ಇಲ್ಲದೆ ಕೊಟ್ಟ್ ಆರ್ ಮೂರ್ ದುಡ್ಡ್‌ಗೆ ಆಸ್ತಿ ಕೊಟ್ಟದೆ. ಅವನೂ ನಮ್ಮಂಗೆ ಒಂದ್ ಜೀವ ಅಂವ ಸಂಸಾರ ಸಾಂಕಕು. ಮನ್‌ಷನ ಕಷ್ಟ ಸುಖಕೆ ನಾವು ಸಹ ಬಾಗಿಯಾಗಿರಕು ತೇಳ್‌ವಂತ ಭಾವನೆ ಎಲ್ಲವರ ಆತ್ಮಲಿ ಮೂಡಿ ಬರ್ಲಿ.

**ಬರಹ : ಕುಂಜಿನಲ ಆರ್. ರಾಜ, ಕುಂಬಳದಾಳ್**

13ನೇ ಪುಟದಿಂದ

ಕಿಟಕಿ ಮೂಲಕ ಆ ದೃಶ್ಯ ಕಂಡಳು. ಮುಸುಕುದಾರಿ ಇವಳಿಗೆ ಬೆನ್ನು ತಿರುಗಿಸಿ ನಿಂತುಕೊಂಡು ಪ್ರಸನ್ನನನ್ನೇ ನೋಡುತ್ತಿದೆ !

ಸೊಂಟದಿಂದ ಏನೋ ತೆಗೆಯಿತು !

ಅದು.... ಅದು ಪಿಸ್ತೂಲು !

ರೇವತಿ ಹೌ ಹಾರಿದಳು ! ಪ್ರಸನ್ನನನ್ನು ಯಾರೋ ಕೊಲೆ ಮಾಡಲು ಪ್ರಯತ್ನಿಸುತ್ತಿದ್ದಾರೆ !

ಕಿಟಾರನೆ ಕಿರುಚಿಕೊಂಡಳು !

ಆ ಮುಸುಕುದಾರಿ ಹಾಸಿಗೆಯ ಮೇಲೆ ಇದ್ದ ದಿಂಬನ್ನು ಎತ್ತಿ ತನ್ನ ಮುಖಕ್ಕೆ ಅಡ್ಡ ಹಿಡಿದುಕೊಂಡು ರೂಮಿನಿಂದ ಹೊರಗೆ ನುಗ್ಗಿತು !

ರೇವತಿ ಕಿರುಚುತ್ತಿದ್ದಾಳೆ !

ರೇವತಿ ತನ್ನ ಮುಖ ನೋಡಬಾರದೆಂದು ತನ್ನ ಕೈಯಲ್ಲಿ ಇದ್ದ ದಿಂಬನ್ನು ಎಸೆಯಿತು !

ದಿಂಬು ಅವಳ ಮುಖಕ್ಕೆ ಬಡಿಯಿತು !

ರೇವತಿ ಚೇತರಿಸಿಕೊಳ್ಳುವುದರಲ್ಲಿ ಆ ಮುಸುಕುದಾರಿ ಅದ್ಯಾವುದೋ ರೂಮನ್ನು ಸೇರಿ ಕೊಂಡಿದ್ದನು.

ಅದೇ ಸಮಯಕ್ಕೆ ಪ್ರಸನ್ನ ಸಹ ಭಯ, ಗಾಬರಿಯಿಂದ ಹೊರಗೆ ಬಂದನು.

ರೇವತಿ ಭಯದಿಂದ ಕಂಪಿಸುವ ಸ್ವರದಲ್ಲಿ "ಯಾರೋ... ಯಾರೋ ನಿಮ್ಮನ್ನು ಪಿಸ್ತೂಲಿನಿಂದ ಕೊಲೆ ಮಾಡಲು ಪ್ರಯತ್ನಿಸಿದರು."

"ಯಾರು.... ಎಲ್ಲಿ ಹೋದರು?"

ರೇವತಿ "ಯಾರು ಅಂತ ಗೊತ್ತಿಲ್ಲ, ಕಾರಿಡಾರ್‌ನಲ್ಲಿಯೇ ಓಡಿ ಹೋದರು !"

ಪ್ರಸನ್ನನಿಗೆ ಅದು ಕಂಡಿತು !

ಕೊಲೆ ಮಾಡಲು ಬಂದಿದ್ದ ವ್ಯಕ್ತಿಯ ಚಪ್ಪಲಿ !?

(ಮುಂದುವರೆಯುತ್ತದೆ)

**ಬೆಳ್ಳಗಿರುವುದೆಲ್ಲಾ ಹಾಲಲ್ಲ, ನಮ್ಮ ಹಾಗೆ ಎಲ್ಲರೂ ಇರುವುದಿಲ್ಲ**

## ಎರಡನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು



ಉಳುವಾರನ ಲಿಖಿತ್ ಸುಬ್ಬಯ್ಯ
ಜನನ :30-3-1998

ಶುಭ ಕೋರುವವರು :

ಅಜ್ಜಿ: ಉಳುವಾರನ ಮಾದಯ್ಯ ಲಲಿತಮ್ಮ, ತಂದೆ: ಉಳುವಾರನ ಮಾದಯ್ಯ ಸುಬ್ಬಯ್ಯ,
ತಾಯಿ : ಜಯಶ್ರೀ ಸುಬ್ಬಯ್ಯ, ಅತ್ತೆಯಂದಿರು : ನೀನಾ, ಯಮುನಾ ಗಣಪತಿ,
ದೊಡ್ಡಪ್ಪ : ಗಿರೀಶ್, ನವೀನ್, ನೈಜೀರಿಯಾ,
ಚಿಕ್ಕಪ್ಪಂದಿರು : ಅಶೋಕ್, ಶ್ವೇತಾ ದುಬಾಯ್, ಕಿರಣ್, ದಿನೇಶ್ ಮಸ್ಕಟ್,
ಅಣ್ಣಂದಿರು : ವಿಲಾಸ್, ಸುರಾಜ್, ಅಕ್ಕ: ಆಶಿಕಾ ಮತ್ತು ಉಳವಾರ ಕುಟುಂಬದವರು.

Sri Kalki Finance Corporation (R)
Sri Kalki Chits (R)
Kalki Yajna Chits (Pvt) Ltd. Mysore
Decor Coats Clours Coats Bangalore.

---

## ವಾಯುಪಡೆಯಲ್ಲಿ ಏರ್‌ಮೆನ್ ಟೆಕ್ನಿಕಲ್ ಹುದ್ದೆಗಾಗಿ ಆಯ್ಕೆ.

ಭಾರತೀಯ ವಾಯುಪಡೆಯಲ್ಲಿ ಪುರುಷ ಅಭ್ಯರ್ಥಿಗಳಿಗಾಗಿ ಏರ್‌ಮೆನ್ ಟೆಕ್ನಿಕಲ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಹತೆ ಕನಿಷ್ಠತೆ ಶೇಕಡಾ 60 ಅಂಕಗಳೊಂದಿಗೆ ಎಸ್ಸೆಸ್ಸೆಲ್ಸಿ ತೇರ್ಗಡೆ, ವಯೋಮಿತಿ 1-9-81ರಿಂದ 1-9-84ರೊಳಗೆ ಜನಿಸಿದವರಾಗಿರಬೇಕು.ದೇಹದಾರ್ಢ್ಯತೆ ಎತ್ತರ ಕನಿಷ್ಠ 152.5 ಸೆ. ಮೀ., ಎದೆಯ ಸುತ್ತಳತೆ ಕನಿಷ್ಠ 75 ಸೆ.ಮೀ. ನಿಂದ 80ಸೆ. ಮೀ., ವೇತನ ತರಬೇತಿ ಅವಧಿಯಲ್ಲಿ 2850 ಬಳಿಕ 3000 ಮತ್ತು ಇತರ ಭತ್ಯೆ ಹಾಗೂ ಇತರ ಸೌಲಭ್ಯಗಳು. ಉನ್ನತ ಮುಂಬಡ್ತಿಗೆ ಅವಕಾಶವಿದೆ. ಗಣಿತ, ವಿಜ್ಞಾನ ಮತ್ತು ಇಂಗ್ಲೀಷ್ ವಿಷಯಗಳಲ್ಲಿ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾದಲ್ಲಿ ಅಂತಿಮ ಆಯ್ಕೆಗೆ ಪರಿಗಣಿಸಲಾಗುವುದು. ಪರೀಕ್ಷಾ ಕೇಂದ್ರ ಕರ್ನಾಟಕದಲ್ಲಿ ಬೆಂಗಳೂರು ಮಾತ್ರ. ಮೇಲಿನ ಹುದ್ದೆಗೆ ಅರ್ಹತೆಯಿದ್ದು ಆಸಕ್ತಿಯುಳ್ಳ ಅಭ್ಯರ್ಥಿಗಳು ನಿಗದಿತ ಅರ್ಜಿಯನ್ನು ಮೂರು ಪಾಸ್‌ಪೋರ್ಟ್ ಆಕಾರದ ಭಾವಚಿತ್ರ, 24*10 ಸೆ.ಮೀ. ಉದ್ದ ಸ್ವವಿಳಾಸವಿರುವ 3ರೂ. ಅಂಚೆ ಚೀಟಿ ಲಗತ್ತಿಸಿದ ಒಂದು ಲಕೋಟೆಯೊಂದಿಗೆ ಏಪ್ರಿಲ್ 10 ರೊಳಗೆ ಕೆಳಗಿನ ವಿಳಾಸಕ್ಕೆ ಕಳುಹಿಸಿ ಕೊಡಬೇಕು.

ಪ್ರೆಸಿಡೆಂಟ್, ಸೆಂಟ್ರಲ್ ಏರ್‌ಮೆನ್ ಸಿಲೆಕ್ಷನ್ ಬೋರ್ಡ್, ಪೋಸ್ಟ್ ಬಾಕ್ಸ್ ನಂ. 11807 ನ್ಯೂಡೆಲ್ಲಿ - 110010 ಎಂದು ಪ್ರಕಟಣೆ ತಿಳಿಸಿದೆ.

---

## ಪತ್ರವಿಭಾಗ

15-3-2000 ರಿಂದ 31-3-2000 ದ ಪಾಕ್ಷಿಕ ಪತ್ರಿಕೆಯಲ್ಲಿ ಶ್ರೀಮತಿ ಎನ್. ಲಲಿತಾರವರು ಬರೆದ ಗೌಡಜನಾಂಗ-ಜೀವಾಳದ ಲೇಖನವನ್ನು ಓದಿ ತುಂಬಾ ಸಂತೋಷವಾಯಿತು. ಅದೊಂದು ಪ್ರಬುದ್ಧ ಲೇಖನ. ಭಾಷಾ ವಿದ್ವಾಂಸರಾಗಿ ಭಾಷೆಗಳ ಹೋಲಿಕೆಗಳನ್ನು ಬಹಳ ಚೆನ್ನಾಗಿ ಬರೆದಂತೆ ಗೌಡರ ಚರಿತ್ರೆಯ ವಿಷಯದಲ್ಲೂ ಬರೆದಿದ್ದಾರೆ. ಇಂತಹ ಪ್ರಭುದ್ಧ ಲೇಖನಗಳಿಂದ ಗೌಡರ ಸಂಸ್ಕೃತಿ ಹೆಚ್ಚು ಸಂಪದ್ಭರಿತವಾಗುತ್ತದೆ.

ಶ್ರೀಮತಿ ಲಲಿತಾ ರವರು ಬರೆದ ಗೌಡರು ದಕ್ಷಿಣಕ್ಕೆ ಉತ್ತರ ದೇಶಗಳಿಂದ ಬಂದುದನ್ನು ಒಪ್ಪುತ್ತೇನೆ, ಆದರೆ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆಯಲ್ಲಿರುವ ಗೌಡರು ದಕ್ಷಿಣಕ್ಕೆ ಯಾವ ಕಾಲದಲ್ಲಿ ಯಾವ ಸ್ಥಳಗಳಲ್ಲಿ ಇದ್ದು ಬಂದರೆನ್ನುವ ವಿಷಯಕ್ಕೆ ಶ್ರೀಮತಿ ಲಲಿತರಂಥ ಪ್ರಭುದ್ಧ ಲೇಖಕಿಯರು ಕಂಡು ಹಿಡಿಯಬೇಕೆಂದು ನನ್ನ ಅಭಿಲಾಷೆ.

ಪ್ರೊ. ಪೂಜಾರಿ ಮೊಣ್ಣಪ್ಪ, ಬೆಂಗಳೂರು

---

## ಸಮುದ್ರದಾಚೆಯಿಂದ

ನಂಗೆ ತಪ್ಪದೆ ಸಂಗಾತಿ ಪತ್ರಿಕೆ ಬರ್ತಾಉಟ್ಟು. ನಿಮ್ಮ ಪ್ರಯತ್ನಕ್ಕೆ ನಾನ್ ಜೀವಾವಧಿ ಸದಸ್ಯತನ ಕೊಡಿಕೆ ತಯಾರಾಗಿ ಒಳೆ. ಪತ್ರಿಕೆ ಗುಣಮಟ್ಟ ಈಗೀಗ ತುಂಬಾ ಸುದಾರಿಸುಟ್ಟು. ಹಿಂಗೆನೆ ಮುಂದ್‌ವರಿಯಲಿ. ಯಾವ್‌ದೆ ಕಾರಣಕ್ಕೆ ನಿಲ್ಲಿಕೆ ಬೊತ್ತ್, ಹೆಚ್ಚಿನ ಎಲ್ಲಾ ಸಂಪಾದಕೀಯಗ ಲಾಯ್ಕಾಗಿ ಉಟ್ಟು. ಬ್ಯಾಜರ ಮಾಡ್ಬಡಿ - ನನ್ನ ಒಂದು ಸಲಹೆ ಏನ್‌ಂತ್ತೇಳಿರೆ, ಕಾದಂಬರಿಗ ಪ್ರತಿ ಸಂಚಿಕೆಲಿ 3,4 ಪೇಜಿಗಳಷ್ಟ್ ಪ್ರಕಟಿಸಿ. ಸರ್ಪಗಂಧ ಅಂತೂ ಓದಿಕೆ ಸುರ್ ಮಾಡ್ಕನೆ ಮುಗ್ದ್ ಹೋದೆ.

ಹರಿ ದಂಬೆಕೋಡಿ(USA)

KA/SK/MYS-88 10-01-96 TCI Kar. 09592

## 20ನೇ ಶತಮಾನದ ಕೊಡಗು ಸಂಗಾತಿಯ ಮಹಾನ್ ವ್ಯಕ್ತಿ : ಶ್ರೀ ಕುರುಂಜಿ ವೆಂಕಟರಮಣ ಗೌಡರು



20ನೇ ಶತಮಾನ ಕಂಡ ಅರೆಭಾಷೆ ಗೌಡ ಜನಾಂಗದ ಮಹಾನ್ ವ್ಯಕ್ತಿ **ಶ್ರೀ ಕುರುಂಜಿ ವೆಂಕಟರಮಣ ಗೌಡರು** ಶತಮಾನದ ವ್ಯಕ್ತಿಯಾಗಿ ಆಯ್ಕೆ ಆಗಿದ್ದುದಲ್ಲದೆ ನಿಮಗೆ ಮತ್ತು ನಿಮ್ಮ ಸಂಸಾರಕ್ಕೂ ಕುಲದೇವ್ರು ವೆಂಕಟರಮಣ ಸ್ವಾಮಿಯ ಮತ್ತು ಶೃಂಗೇರಿ ಶಾರದಾಂಬೆಯ ಆಶೀರ್ವಾದ ಸದಾ ಇರಲೆಂದು ಕೊಡಗು ಸಂಗಾತಿ ಸಂಸ್ಥೆ, ಮೈಸೂರು, ಅರೆಭಾಷಿಕ ಗೌಡ ಜನಾಂಗದ ಪರವಾಗಿ ಶುಭವನ್ನು ಹಾರೈಸುತ್ತದೆ.

**ಪಟ್ಟಡ ಶೀಲಾಮಣಿ, ಸಂಪಾದಕಿ ಮತ್ತು ಬಳಗ.**
ಕೊಡಗು ಸಂಗಾತಿ, ಪಾಕ್ಷಿಕಪತ್ರಿಕೆ, ಮೈಸೂರು.

## ಕಾವೇರಿ ನಾಡು ಸಾಂಸ್ಕೃತಿಕ ಅಕಾಡೆಮಿ (ರಿ) ಸ್ಥಾಪನೆ

" ಅರಳುವ ಪ್ರತಿಭೆಯನ್ನು ಮೊಳಕೆಯಲ್ಲಿ ಚಿವುಟಬೇಡಿ". ನಮ್ಮಲ್ಲಿ ಇರುವ ಪ್ರತಿಭೆಯನ್ನು ಹೇಗೆ ಗುರುತು ಹಿಡಿಯಲು ಸಾಧ್ಯ? ಇದಕ್ಕೆ ಯಾರ ಪ್ರೋತ್ಸಾಹ ದೊರೆಯುತ್ತದೆ? ಇದಾಗಿರಬಹುದು ನಮ್ಮ ಜನಾಂಗದ ಯುವಕ, ಯುವತಿಯರ ಪ್ರಶ್ನೆ. ಆದ್ದರಿಂದಲೇ ಕಾವೇರಿನಾಡು ಸಾಂಸ್ಕೃತಿಕ ಅಕಾಡೆಮಿಯ ಸ್ಥಾಪನೆ.

ದಿನಾಂಕ 5-3-2000ದ ಶುಭದಿನದಂದು ಬೆಳಿಗ್ಗೆ 11 ಗಂಟೆಗೆ ಅಮ್ಮಾಜೀರ ಎಸ್. ಪೊನ್ನಪ್ಪನವರ ಸ್ವಗೃಹದ ವಿಶಾಲವಾದ ಹಾಲ್‌ನಲ್ಲಿ ಸಭೆ ಸೇರಿತ್ತು. ಯೌವನದ ಯುವಕ, ಯುವತಿಯರು ಹಾಗೂ ಹಿರಿಯರ ಬಾಯಿಯಲ್ಲಿ ನಮ್ಮ ಸಂಸ್ಕೃತಿ ಬೆಳವಣಿಗೆಯ ಬಗ್ಗೆ ಚರ್ಚಿಸುವ ಮಹಾ ಸಭೆ ಅದಾಗಿತ್ತು. ನೆರೆದಿದ್ದ ಗಣ್ಯರಿಂದ ಕಮಿಟಿಯನ್ನು ರಚಿಸಲಾಯಿತು. **ಸ್ಥಾಪಕ ಅಧ್ಯಕ್ಷರಾಗಿ ಅಮ್ಮಾಜೀರ ಎಸ್. ಪೊನ್ನಪ್ಪ, ಉಪಾಧ್ಯಕ್ಷರಾಗಿ ಬಿಟ್ರ ಚೊಂದಮ್ಮ ಶಂಭು**

**ಕಾರ್ಯದರ್ಶಿ :** ಕಾಚಿಲಂಡ ಅಶೋಕ್ **ಖಜಾಂಚಿ :** ಕಲ್ಲುಮುಟ್ಲು ಬಸಪ್ಪ

**ಮುಖ್ಯ ಸದಸ್ಯರು :** ತೇನನ ರಾಜೇಶ್ ಸೋಮಣ್ಣ, ಮಾಡಾವು ವಿಜಯಕುಮಾರ್, ಕುದುಕುಳಿ ಜನಾರ್ಧನ, ಸುಳ್ಯಕೋಡಿ ವೈಶಾಲಿ ಅಮರನಾಥ್, ಕುಯ್ಯಮುಡಿ ನವೀನ್ ಕುಮಾರ್, ಬಗ್ಗನ ದೀಪಕ್ ಜೋಯಪ್ಪ, ಕಡ್ಯದ ಅರುಣ್ ಕುಮಾರ್.

**ಸಲಹೆಗಾರರು :** ಉಡುದೋಳಿರ ಸೋಮಪ್ಪ, ವಕೀಲರು.

ತದನಂತರ ಬೆಂಗಳೂರಿನಲ್ಲಿ ಸುಮಾರು 50 ಜನ ಸಹಸದಸ್ಯರ ಕಮಿಟಿ ರಚನೆಯಾಗಿ ನಮ್ಮ ಸಂಸ್ಕೃತಿಯನ್ನು ಬೆಳೆಸಲು ಹಾಗೂ ಮುಂದಿನ ಪೀಳಿಗೆಗೆ (Aspirants) ಪ್ರೋತ್ಸಾಹಿಸಲಿಕ್ಕೆ ಸಹ ಪೂರಕವಾಗಿತ್ತು.

ಕೂಡಿದ ಮಹಾಸಭೆ ಒಕ್ಕೊರಳಿನಿಂದ ಕಾವೇರಿನಾಡು ಸಾಂಸ್ಕೃತಿಕ ಅಕಾಡೆಮಿಯ ಕಮಿಟಿ ಸದಸ್ಯರಾದ ನಾವುಗಳು ಮನಃ ಪೂರ್ವಕವಾಗಿ ನಿಸ್ವಾರ್ಥತೆಯಿಂದ ಕೆಲಸಮಾಡಿ, ಅಕಾಡೆಮಿಯ ಬೆಳವಣಿಗೆಗೆ ಒಗ್ಗಟ್ಟಿನಿಂದ ಶ್ರಮಿಸುತ್ತೇವೆ ಎಂದು ಶಪಥಮಾಡಿ ಪ್ರಮಾಣೀಕರಿಸುತ್ತೇವೆ.

**" ಸಹಬಾಳ್ವೆ, ಸಂಘಟನೆಯ ಸಮ್ಮಿಲನವೇ ನಮ್ಮ ಧ್ಯೇಯ" ಜೈ ಕಾವೇರಿ ಮಾತೆ.**

ದಿನಾಂಕ 27-8-2000 ರಂದು ಇದರ ಉದ್ಘಾಟನೆ ಹಾಗೂ ಕೈಲ್ ಮುಹೂರ್ತ ಆಚರಣೆಯನ್ನು ನಮ್ಮ ಸಂಸ್ಕೃತಿಯ ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ನಡೆಸಲು ತೀರ್ಮಾನಿಸಲಾಗಿದೆ.

*ನಿಮ್ಮೆಲ್ಲರ ಪ್ರೋತ್ಸಾಹ ಸದಾ ನಮಗಿರಲಿ*

**ಕಾಚಿಲಂಡ ಅಶೋಕ್,** ಕಾಯದರ್ಶಿ
ಕಾವೇರಿನಾಡು ಸಾಂಸ್ಕೃತಿಕ ಅಕಾಡೆಮಿ (ರಿ.)
ಕಾಡುಕರೇನ ಹಳ್ಳಿ, ಮಹದೇವಪುರ, ನೆಲಮಂಗಲ, ಬೆಂಗಳೂರು.

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.